

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 | ಸಂಚಿಕೆ 38 | ಸೆಪ್ಟೆಂಬರ್ 23,1990 | ರೂ 1.50

ಕೋಮುವಾದಿಗಳೆಷ್ಟು ಗುಡುಗಿದರೂ, ಅರಚಿದರೂ ಜಾತ್ಯತೀತ ಭಾರತ ಒಂದಾಗಿ ನಿಲ್ಲುತ್ತದೆ!

ಅಕ್ಟೋಬರ್ 30 - ವಿಶ್ವ ಹಿಂದೂ ಪರಿಷತ್ತು ರಾಮದೇವಸ್ಥಾನ ಕಟ್ಟಲು ಆರಂಭ ಮಾಡುವುದಾಗಿ ಘೋಷಿಸಿರುವ ದಿನ ಸಮೀಪಿಸುತ್ತಿರುವಂತೆ ವಿ.ಹೆಚ್.ಪಿ. ಒಂದು ಸ್ವತಂತ್ರ ಸಂಘಟನೆ ಎಂಬ ಬಿ.ಜೆ.ಪಿ.ಯ ಮೊದಮೊದಲ ನಿಲುವು ಸಂಪೂರ್ಣ ಮಾಯವಾಗುತ್ತಿದೆ. ಈ ಮತಾಂಧ ಸಂಕುಚಿತ ದೃಷ್ಟಿಯ ಸಂಸ್ಥೆಯ ರಾಜಕೀಯ ತುತ್ತೂರಿಯಂತೆ ವರ್ತಿಸುತ್ತಿದೆ. ದೇವಸ್ಥಾನ ಕಟ್ಟುವ ಕೆಲಸದಲ್ಲಿ ಏನಾದರೂ ಹಸ್ತಕ್ಷೇಪ ಮಾಡಿದರೆ ಸಂಘರ್ಷ, ಕಿಡ್ಡಾಟ ನಡೆಯಲಿದೆ ಎಂದು ವಿ.ಪಿ.ಸಿಂಗ್ ಸರ್ಕಾರ ಹಾಗೂ ಉತ್ತರ ಪ್ರದೇಶ ಸರಕಾರವನ್ನು ಎಚ್ಚರಿಸುತ್ತಿದೆ! ಈ ನಡುವೆ ವಿ.ಹೆಚ್.ಪಿ. ಪ್ರತಿಹಳ್ಳಿಯಿಂದ, ದಿಲ್ಲಿಯಿಂದಲೂ ಅಯೋಧ್ಯೆಗೆ ಹೋಗಲು ಸ್ವಯಂಸೇವಕರನ್ನು ಭರ್ತಿ ಮಾಡಿಕೊಂಡು ಅಕ್ಟೋಬರ್ 30 ರಂದು ಕೊಲೆಸುಲಿಗೆಗಳಿಂದ ಕೂಡಿದ ಕೋಮುಗಲಭೆಗಳ ಮೂಲಕ ಸ್ಫೋಟಕ ಪರಿಸ್ಥಿತಿ ಸೃಷ್ಟಿಸುವ, ವಾತಾವರಣ ಬಿಸಿಯೇರಿಸುವ ಲೆಕ್ಕಾಚಾರ ಹಾಕುತ್ತಿದೆ.

ಆದರೆ ಬಿ.ಜೆ.ಪಿ. ಯ ಲೆಕ್ಕಾಚಾರ ತಪ್ಪು. ರಾಮದೇವಸ್ಥಾನ ಕಟ್ಟುವ ಕೋಮುವಾದಿ, ಮತಾಂಧತೆ ಒಂದು ನೇರ ದಾರಿ. ಮುಸ್ಲಿಂವರ ವಿರೋಧವನ್ನು ಸುಲಭವಾಗಿ ಬದಿಗೆ ತಳ್ಳಿಬಿಡಬಹುದು ಎಂದು ಲೆಕ್ಕಾಚಾರ ಹಾಕುವಾಗ ದೇಶದ ಜಾತ್ಯತೀತ ಮನೋಭಾವದ ಬಗ್ಗೆ ಸರಿಯಾದ ಅಂದಾಜು ಮಾಡಲು ಅದಕ್ಕೆ ಸಾಧ್ಯವಾಗಿಲ್ಲ. ಸಂಘಟಿತ ಜಾತ್ಯತೀತ ಶಕ್ತಿಗಳ ಬಲವಾದ ವಿರೋಧವನ್ನು ಜೋರಾಗಿ ಎದುರಿಸಬೇಕಾದೀತೆಂಬುದು ಅದರ ಲೆಕ್ಕಾಚಾರದಲ್ಲಿ ಇದ್ದಂತಿರಲಿಲ್ಲ. ರಾಷ್ಟ್ರೀಯ ಐಕ್ಯತೆಯ ಬಗ್ಗೆ ಜನತೆಯ ಆತಂಕ ಎಷ್ಟು ಆಳವಾಗಿದೆ ಎಂಬ ಅರಿವೂ ಬಿ.ಜೆ.ಪಿ.ಗೆ. ಇದ್ದಂತಿಲ್ಲ.

> ಉತ್ತರಪ್ರದೇಶದಲ್ಲಿ ಈಗಾಗಲೇ 15 ಲಕ್ಷ ಜನರನ್ನು ತಲುಪಿದ ಅಕ್ಟೋಬರ್ 12 ರವರೆಗೆ ಒಂದು ಕೋಟಿ ಜನರನ್ನು ತಲುಪಲಿರುವ ಸ್ವತಂತ್ರಭಾರತದ ಅತೀ ದೊಡ್ಡ ಕೋಮುವಾದ- ವಿರೋಧಿ ಪ್ರಕ್ಷೋಭೆ ಇದಕ್ಕೊಂದು ಸಾಕ್ಷಿ.

ನಿಜ. ದೇಶದ 80% ಜನ ಹಿಂದೂಗಳು. ಆದರೆ ಅವರಲ್ಲಿ ಬಹುಪಾಲು ಜಾತಿವಾದಿಗಳಲ್ಲ. ಅಲ್ಲದೆ ಹಿಂದೂ ಸಮಾಜ ಹೆಸರಿಗಷ್ಟೇ ಒಂದೇ ಕೋಮು. ವಾಸ್ತವವಾಗಿ ಹಲವು ಜಾತಿ, ಉಪಜಾತಿಗಳಲ್ಲಿ, ಕೆಲವೆಡೆ ಭಿನ್ನ ನಂಬಿಕೆಗಳಲ್ಲಿ ಹಂಚಿಹೋಗಿರುವ ಸಮಾಜ. ಆದ್ದರಿಂದ ಹಿಂದೂಗಳ ಧ್ವನಿಯನ್ನು ಪ್ರತಿನಿಧಿಸುತ್ತೇನೆಂಬುದು ಕೇವಲ ಬಿ.ಜೆ.ಪಿ.ಯ ಅಹಂಭಾವವಷ್ಟೆ. ತನ್ನ ಭದ್ರ ನೆಲೆ ಕೇವಲ ಕ್ಷಣಿಕ ಎಂಬುದು ಅದಕ್ಕೀಗಾಲೇ ಅರ್ಥವಾಗಿರಬೇಕು. ಏಕೆಂದರೆ ಭಾರತದಂತಹ ಬಹುಭಾಷಾ, ಬಹುಧರ್ಮೀಯ, ಜಾತ್ಯತೀತ ದೇಶದಲ್ಲಿ ಕೋಮುವಾದ ಒಂದು ಸಮರ್ಥ ರಾಜಕೀಯ ಪಕ್ಷದ ಶಾಶ್ವತ ನೆಲೆಯಾಗಲು ಸಾಧ್ಯವಿಲ್ಲ.

ಬಿ.ಜೆ.ಪಿ. ಹರಿಜನ ಗಿರಿಜನರನ್ನು ಪ್ರತಿನಿಧಿಸುತ್ತಿಲ್ಲ, ಹಿಂದುಳಿದ ಜಾತಿಗಳನ್ನು ಕೂಡಾ ಪ್ರತಿನಿಧಿಸುವ ಪಕ್ಷ ಅದಲ್ಲ. ಮೇಲ್ಜಾತಿಗಳು ಕೇವಲ ತನ್ನ ಆಸ್ತಿಯಷ್ಟೆ ಎಂಬುದು ಕೂಡಾ ಅದರ ಒಂದು ಭ್ರಮೆಯಷ್ಟೆ. 1980 ರಿಂದಲೂ ಹರಿಜನ - ಗಿರಿಜನರ ಮೀಸಲಾತಿ ವಿಸ್ತರಿಸುವ ಪ್ರಶ್ನೆ ಬಂದಾಗಲೆಲ್ಲಾ ಬಿ.ಜೆ.ಪಿ.ಯ ಇಬ್ಬಂದಿತನ ಬಯಲಿಗೆ ಬರುತ್ತಲೇ ಇದೆ. ಸಂಸತ್ತಿನಲ್ಲಿ ಅದು ಮೀಸಲಾತಿಯನ್ನು ಬೆಂಬಲಿಸಬೇಕಾಗುತ್ತದೆ. ಆದರೆ ಹೊರಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಆ ಪಕ್ಷದ ಗಲಭೆಕೋರರು ಹರಿಜನ - ಗಿರಿಜನರಿಗೆ ಮೀಸಲಾತಿ ವಿರುದ್ಧ ಗಲಭೆ, ಲೂಟಿಗಳೆಯುತ್ತಾ ಬಂದಿದ್ದಾರೆ.

ಈ ಬಾರಿ ವಿ.ಪಿ.ಸಿಂಗ್ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಘೋಷಿಸಿದಾಗಲೂ ಅಷ್ಟೆ. ಸಂಸತ್ತಿನಲ್ಲಿ ಅದು ಎಡಪಕ್ಷಗಳಂತೆಯೇ ನಿಲುವನ್ನು ತಳೆದಿದೆ. ಆದರೆ ಸಂಸತ್ತಿನ ಹೊರಗಡೆ ಅದು ಕೋಮುವಾದೀ ಆಟ ಆಡುತ್ತಿದೆ. ಕಾಂಗ್ರೆಸ್‌ನಂತೆ ಮೀಸಲಾತಿ - ವಿರೋಧಿಗಳ ಹಿಂಸಾತ್ಮಕ, ವಿನಾಶಾತ್ಮಕ ರ್‍ಯಾಲಿಗಳಿಗೆ, ಮತಪ್ರದರ್ಶನಗಳಿಗೆ ಬೆಂಬಲ ನೀಡುತ್ತಿದೆ. ತೆರೆಮರೆಯಿಂದ ಸೂತ್ರಧಾರನ ಪಾತ್ರ ವಹಿಸುತ್ತಿದೆ.

ಹೀಗಿರುವಾಗ ಬಹುಪಾಲು ಹಿಂದೂಗಳು ಬಾಬ್ರಿ ಮಸೀದಿ ಕೆಡವಿ ರಾಮದೇವಸ್ಥಾನ ಕಟ್ಟುವ ಬಿ.ಜೆ.ಪಿಯ ಆಕ್ರಮಣಕಾರೀ ಕೋಮುವಾದೀ ನಿಲುವನ್ನು ಬೆಂಬಲಿಸದಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ವಿ.ಹೆಚ್.ಪಿ., ಭಜರಂಗ ದಳದ ಮೂಲಕ ನಡೆಯುತ್ತಿರುವ. ಬಿ.ಜೆ.ಪಿ.ಯ ಕೋಮುವಾದೀ ಸಮರವನ್ನು ಈಗ ಎಡ, ಜಾತ್ಯತೀತ ಪಕ್ಷಗಳ ಒಂದು ಸಂಯುಕ್ತ ವೇದಿಕೆ ದೃಢವಾಗಿ ಎದುರಿಸುತ್ತಿದೆ.

ಉತ್ತರ ಪ್ರದೇಶದಲ್ಲಿ ಜನತಾದಳ, ಸಿ.ಪಿ.ಐ (ಎಂ), ಸಿ.ಪಿ.ಐ, ಹಿಂದಿನ ಕಾಂಗ್ರೆಸ್ (ಜೆ), ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ., ಕೆಲವು ಸಮಾಜವಾದಿ ಗುಂಪುಗಳು ಆಗಸ್ಟ್ 9 ರಂದು ಸಭೆ ನಡೆಸಿ 'ಕೋಮುವಾದದ ವಿರುದ್ಧ ಉತ್ತರ ಪ್ರದೇಶ ಸಮಿತಿ' ರಚಿಸಿಕೊಂಡವು. ನಂತರ ಬಹುಜನ ಸಮಾಜ ಪಾರ್ಟಿಯೂ

ಪುಟ 8 ಕ್ಕೆ

> ಸಂಘಟಿತ ಜಾತ್ಯತೀತ ಶಕ್ತಿಗಳ ಬಲವಾದ ವಿರೋಧವನ್ನು ಎದುರಿಸಬೇಕಾದೀತೆಂಬುದು ಬಿ.ಜೆ.ಪಿ.ಯ ಲೆಕ್ಕಾಚಾರದಲ್ಲಿ ಇದ್ದಂತಿಲ್ಲ. ರಾಷ್ಟ್ರೀಯ ಐಕ್ಯತೆಯ ಬಗ್ಗೆ ಜನತೆಯ ಆತಂಕ ಎಷ್ಟು ಆಳವಾಗಿದೆ ಎಂಬ ಅರಿವೂ ಅದಕ್ಕಿದ್ದಂತಿಲ್ಲ.

ಚಿನ್ನದ ಗಣಿ ಮುಚ್ಚುವ ದುರ್ಬುದ್ಧಿ ಬಿಡಿಸಲು ಕಾರ್ಮಿಕರ ನಿರ್ಧಾರ

> ಶ್ಯಾಲೋ ಮೈನಿಂಗ್ ಪದ್ಧತಿಯಿಂದ ಚಿನ್ನ ತೆಗೆಯುವ ವೆಚ್ಚ 1/6 ರಷ್ಟಕ್ಕೆ ಇಳಿದು 2000 ಹೆಚ್ಚು ಕಾರ್ಮಿಕರಿಗೆ ಕೆಲಸ ದೊರೆಯುವಂತಿದ್ದರೂ, ಇದಕ್ಕೆ ಬೇಕಾದ ಹಣ ಕೇವಲ 7 ಕೋಟಿ ರೂ. ಗಳಾದರೂ ಬಿ.ಜಿ.ಎಮ್.ಎಲ್. ಅಧ್ಯಕ್ಷ ಗಣಿಯನ್ನು ಮುಚ್ಚಿ 12 ಸಾವಿರ ಕಾರ್ಮಿಕರನ್ನು ಬೀದಿಪಾಲು ಮಾಡುವ ಹಠ ತೊಟ್ಟಿದ್ದಾರೆ. ಇದರ ವಿರುದ್ಧ ಕಾರ್ಮಿಕರೀಗ ಸಿಡಿದೆದ್ದಿದ್ದಾರೆ.

1880 ರಲ್ಲಿ ಆರಂಭವಾದ ಕೋಲಾರ ಚಿನ್ನದ ಗಣಿಗಳಲ್ಲಿ ಚಿನ್ನ ತೆಗೆಯುವ ಕೆಲಸ ಹೆಚ್ಚೆಚ್ಚು ವೆಚ್ಚದಾಯಕವಾಗುತ್ತಿದ್ದು 1987 ರಿಂದ ಕ್ರಮೇಣ ಗಣಿ ಅಗೆಯುವ ಕೆಲಸವನ್ನು ಏಳು ವರ್ಷಗಳಲ್ಲಿ ನಿಲ್ಲಿಸಬೇಕೆಂದು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ಇದರಿಂದಾಗಿ ತಲೆಮಾರುಗಳಿಂದ ದುಡಿಯುತ್ತಿರುವ ಬಹುಪಾಲು ಹರಿಜನರೇ ಆದ 12 ಸಾವಿರಕ್ಕೂ ಹೆಚ್ಚು ಕಾರ್ಮಿಕರು ನಿರಾಶ್ರಿತರಾಗುತ್ತಾರೆ. ಆದರೆ ನಿಜವಾಗಿ ಕೋಲಾರ ಚಿನ್ನದ ಗಣಿಯಲ್ಲಿ ಚಿನ್ನ ತೆಗೆಯುವ ಕೆಲಸ ಇನ್ನೂ 30-40 ವರ್ಷಗಳ ಕಾಲ ಮುಂದುವರೆಯಲು ಸಾಧ್ಯ ಎಂದು ಸಿ.ಐ.ಟಿ.ಯುಗೆ ಸೇರಿದ ಭಾರತ್ ಗೋಲ್ಡ್‌ಮೈನ್ಸ್ ಎಂಪ್ಲಾಯೀಸ್ ಯೂನಿಯನ್ ಹೇಳುತ್ತಾ ಬಂದಿತ್ತು. ತಾಂತ್ರಿಕ ನಿರ್ದೇಶಕ ಶ್ರೀನಟರಾಜನ್‌ರವರ ವರದಿ ಸಂಘದ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದರೂ ಬಿ.ಜಿ.ಎಮ್.ಎಲ್. ಅಧ್ಯಕ್ಷ ಐ.ಎಂ.ಅಘಾ ತಾಂತ್ರಿಕ ಸಲಹೆಯನ್ನು ತಿರಸ್ಕರಿಸಿ ಮುಚ್ಚುವ ಕೆಲಸ ಮುಂದುವರಿಸಿದರು. ಕಾರ್ಮಿಕರನ್ನು ದೇಶದ ವಿವಿಧೆಡೆ ವರ್ಗ ಮಾಡಲಾರಂಭಿಸಿದರು. ಸಿ.ಐ.ಟಿ.ಯು. ಸಂಘ ಇದನ್ನು ವಿರೋಧಿಸಿತು. ಗುಪ್ತಮತದಾನದಲ್ಲಿ ದೊಡ್ಡ ಬಹುಮತ ನೀಡಿ ಕಾರ್ಮಿಕರು, ಸಂಘವನ್ನು ಬೆಂಬಲಿಸಿದರು. ಸಂಘದ ಅಧ್ಯಕ್ಷ ಸೂರ್ಯನಾರಾಯಣರಾವ್ ಸಂಘದ ಇತರ ಪದಾಧಿಕಾರಿಗಳೊಂದಿಗೆ ಬಿ.ಜಿ.ಎಮ್.ಎಲ್. ಅಧ್ಯಕ್ಷರನ್ನು ಭೇಟಿಯಾಗಿ ಗಣಿಗಾರಿಕೆಯನ್ನು ಮುಂದುವರಿಸಲು ನೀಡಲಾಗುವ 'ಶ್ಯಾಲೋ ಮೈನಿಂಗ್'ಗೆ ಕೇಂದ್ರ ಸರ್ಕಾರದ ಹಣ ಪಡೆಯ ಬೇಕೆಂದು ಕೇಳಿದಾಗಲೂ ಅಧ್ಯಕ್ಷರು ನಿರಾಕರಿಸಿದರು. ಅದನ್ನು ಅಲ್ಲಿಗೇ ಬಿಡದೆ ಸಂಘ ಈ ವಿಷಯವನ್ನು ಬೆಂಗಳೂರಿನಲ್ಲಿರುವ ಉಕ್ಕು-ಗಣಿಕಾರ್ಯದರ್ಶಿಯ ಹತ್ತಿರ ಒಯ್ದಿತು. ಜುಲೈ 1990 ರಲ್ಲಿ ಈ ಬಗ್ಗೆ ನಡೆದ ಮಾತುಕತೆಯ ಸಮಯದಲ್ಲಿ ಬಿ.ಜಿ.ಎಮ್.ಎಲ್.ನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಪಿ.ಎ.ಕೆ. ಶೆಟ್ಟಿಗಾರ್ ಕೂಡಾ ಹಾಜರಿದ್ದು ಅವರೂ "ಶ್ಯಾಲೋ ಮೈನಿಂಗ್ ಮೂಲಕ ಕೆಲಸ ಮುಂದುವರಿಸಲು ಸಾಧ್ಯ ಎಂದರು. ಉಕ್ಕು-ಗಣಿಕಾರ್ಯದರ್ಶಿಗಳು ತಕ್ಷಣವೇ ಈ ಬಗ್ಗೆ 'ಸಾಧ್ಯತಾವರದಿ' ಸಲ್ಲಿಸಲು ಹೇಳಿದರು. ಸಂಘದ ಪ್ರಯತ್ನದಿಂದಾಗಿ ಈ ವರದಿ ಕಳೆದ ತಿಂಗಳು ಭಾರತ ಸರಕಾರಕ್ಕೆ ಹೋಗಿದೆ.

ಈಗ 10 ಗ್ರಾಂ. ಚಿನ್ನ ಉತ್ಪಾದನೆಯ ಖರ್ಚು 6000 ರೂ. ಆದರೆ ಆದಾಯ 3500 ರೂ. ಇದರಿಂದಾಗಿ ಕೋಟಿ ಗಟ್ಟಲೆ ನಷ್ಟಕಂಡ ಭಾರತ ಸರ್ಕಾರ ಈ ಗಣಿ ಕೆಲಸ ನಿಲ್ಲಿಸಲು ನಿರ್ಧರಿಸಿತ್ತು. ಆದರೆ ಈಗ ಸರಕಾರಕ್ಕೆ ಸಲ್ಲಿಸಿದ ವರದಿ ಪ್ರಕಾರ ಈ ವೆಚ್ಚವನ್ನು 6,000 ರೂ. ಯಿಂದ 950 ರೂ.ಗೆ ಇಳಿಸಬಹುದು. ಕೇವಲ 300 ಮೀಟರಿನ ಆಳದಲ್ಲೇ 22.6 ಲಕ್ಷ ಟನ್ ಗಣಿ ಅಗೆದು 7477 ಕೆ.ಜಿ. ಚಿನ್ನ ತೆಗೆಯಬಹುದು ಎಂದೂ ವರದಿ ತಿಳಿಸಿದೆ (ಈಗ ಚಾಂಪಿಯನ್ ರೀಫ್ ಗಣಿಯ ಆಳ 13 ಸಾವಿರ ಮೀಟರ್) ಇದರಿಂದ ಲಭಿಸುವ ಆದಾಯ 224.3 ಕೋಟಿ ರೂ. ಇದರ ಉತ್ಪಾದನೆಗೆ ತೊಡಗಿಸಬೇಕಾದ ಹಣ ಕೇವಲ 7.26 ಕೋಟಿ ರೂ.ಗಳು. ಇಷ್ಟು ಬಂಡವಾಳ ತೊಡಗಿಸಿದರೆ ಇನ್ನೂ ಎರಡು ದಶಕಗಳ ಕಾಲ ಗಣಿ ಕೆಲಸ ಮುಂದುವರಿಸಬಹುದು. ಉತ್ಪಾದನಾ ವೆಚ್ಚ ಟನ್ನಿಗೆ 885 ರೂ. ಗಿಳಿದು ಇನ್ನೂ ಕಾರ್ಮಿಕರಿಗೆ ಉದ್ಯೋಗ ನೀಡಲು ಸಾಧ್ಯ ಎಂದೂ ಈ ತಾಂತ್ರಿಕ ವರದಿ ತಿಳಿಸಿದೆ.

ಆದರೆ 12 ಸಾವಿರ ಕಾರ್ಮಿಕರನ್ನು ನಿರಾಶ್ರಿತರನ್ನಾಗಿಸುವ ಬದಲು ಇನ್ನೂ ಕಾರ್ಮಿಕರಿಗೆ ಕೆಲಸ ಕೊಡುವ ಅವಕಾಶಗಳನ್ನು ತೆರೆಯಬಲ್ಲ ಶ್ಯಾಲೋ ಮೈನಿಂಗ್ (ಆಳವಿಲ್ಲದ ತಟ್ಟೆಯಾಕಾರದ ಮಾದರಿಯಲ್ಲಿ ಅದಿರು ತೆಗೆಯುವ ವಿಧಾನ) ನ ಸಾಧ್ಯತೆಯಿದೆಯೆಂಬ ಸಂಗತಿ ಬಿ.ಜಿ.ಎಮ್.ಎಲ್.ನ ಅಧ್ಯಕ್ಷರಿಗೆ ಸಂತಸ ತಂದಂತಿಲ್ಲ. ಬದಲಿಗೆ ಕೇಂದ್ರ ಸರಕಾರದಿಂದ ಶ್ಯಾಲೋ ಮೈನಿಂಗ್ ಅಭಿವೃದ್ಧಿಪಡಿಸಲು ಬರುವ ಹಣವನ್ನು ಬೇರೆಡೆಗೆ ತಿರುಗಿಸಲು ಅವರ ಹವಣಿಕೆಯಿಂದ ಬೇಸರಗೊಂಡ ತಾಂತ್ರಿಕ ನಿರ್ದೇಶಕರು ಈಗ ರಾಜೀನಾಮೆ ಸಲ್ಲಿಸಿದ್ದಾರೆ.

ಈ ರಾಜೀನಾಮೆಯನ್ನು ಅಂಗೀಕರಿಸಬಾರದೆಂದು ಭಾರತ್ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್ ಅಧ್ಯಕ್ಷ ಸೂರ್ಯನಾರಾಯಣ್‌ರಾವ್ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಬಗ್ಗೆ ಸೆಪ್ಟೆಂಬರ್ 17 ರಂದು ಒಂದು ಪತ್ರಿಕಾ ಸಮ್ಮೇಳನ ಕರೆದು ವಿವರ ನೀಡಿದ ಅವರು 67 ವರ್ಷ ವಯಸ್ಸಾಗಿ ಮೂರನೇ ಬಾರಿಗೆ ಸೇವಾವಧಿ ವಿಸ್ತರಣೆಗೊಂಡಿರುವ ಬಿ.ಜಿ. ಎಮ್.ಎಲ್. ಅಧ್ಯಕ್ಷರು ರಾಜೀನಾಮೆ ನೀಡಬೇಕೆಂದುಸಂಘ ಒತ್ತಾಯಿಸುವುದಾಗಿ ಹೇಳಿದರು. ಏಕೆಂದರೆ ಚಿನ್ನದ ಗಣಿಯ ಅಗಾಧ ನಷ್ಟಗಳಿಗೆ ಅವರ ಅಸಮರ್ಥತೆ, ಅದಕ್ಷತೆಯೇ ಕಾರಣ. ಇಂತಹ ಅಧ್ಯಕ್ಷರ ಶಿಫಾರಸ್ಸಿನ ಪ್ರಕಾರ ತಾಂತ್ರಿಕ ನಿರ್ದೇಶಕರ ರಾಜೀನಾಮೆ ಸ್ವೀಕರಿಸುವುದೆಂದರೆ 12 ಸಾವಿರ ಕಾರ್ಮಿಕರನ್ನು ನಿರಾಶ್ರಿತರನ್ನಾಗಿಸುವ ಅಧ್ಯಕ್ಷರ ಯೋಚನೆಯನ್ನು ಸ್ವೀಕರಿಸಿದಂತೆಯೇ ಎಂದು ಕಾಂ.ಸೂರಿ ಪತ್ರಕರ್ತರಿಗೆ ತಿಳಿಸಿದರು. ಆದ್ದರಿಂದ ತಾಂತ್ರಿಕ ನಿರ್ದೇಶಕರ ರಾಜೀನಾಮೆ ಸ್ವೀಕರಿಸಿದರೆ ಕೆ.ಜಿ.ಎಫ್.ನಲ್ಲಿ ಕಾರ್ಮಿಕರು ಮುಷ್ಕರ ನಡೆಸುತ್ತಾರೆಂದು ಅವರು ತಿಳಿಸಿದರು.

12 ಸಾವಿರ ಕಾರ್ಮಿಕರ ಹಿತಾಸಕ್ತಿ ರಕ್ಷಣೆಗೆ ಕಾಂ. ಸೂರಿಯವರು ದೆಹಲಿಯಲ್ಲಿ ಉಕ್ಕು ಗಣಿ ಮಂತ್ರಿಗಳನ್ನು ಭೇಟಿಯಾಗಬೇಕೆಂದು ಸಂಘನಿರ್ಧರಿಸಿದೆ. ಅಗತ್ಯವಾದರೆ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಬೇಕೆಂದು ಸಂಘ ಆದೇಶಿಸಿದೆ ಎಂದು ಕಾಂ.ಸೂರಿಯವರು ಪತ್ರಕರ್ತರಿಗೆ ತಿಳಿಸಿದರು. ಎಲ್ಲಾ ರಾಜಕೀಯ ಪಕ್ಷಗಳ, ಕಾರ್ಮಿಕ ಸಂಘಗಳ ಸಹಕಾರ ಪಡೆದು ಕೆ.ಜಿ.ಎಫ್. ಬಂದ್ ನಡೆಸುವ ಬಗ್ಗೆಯೂ ಚಿನ್ನದ ಗಣಿ ಕಾರ್ಮಿಕರು ಯೋಚಿಸುತ್ತಿರುವುದಾಗಿಯೂ ಅವರು ತಿಳಿಸಿದರು.

ಶ್ಯಾಲೋ ಮೈನಿಂಗ್ ಪದ್ಧತಿಯಿಂದ ಚಿನ್ನ ತೆಗೆಯುವ ವೆಚ್ಚ 1/6 ರಷ್ಟಕ್ಕೆ ಇಳಿದು 2000 ಹೆಚ್ಚು ಕಾರ್ಮಿಕರಿಗೆ ಕೆಲಸ ದೊರೆಯುವಂತಿದ್ದರೂ, ಇದಕ್ಕೆ ಬೇಕಾದ ಹಣ ಕೇವಲ 7 ಕೋಟಿ ರೂ. ಗಳಾದರೂ ಬಿ.ಜಿ.ಎಮ್.ಎಲ್. ಅಧ್ಯಕ್ಷ ಗಣಿಯನ್ನು ಮುಚ್ಚಿ 12 ಸಾವಿರ ಕಾರ್ಮಿಕರನ್ನು ಬೀದಿಪಾಲು ಮಾಡುವ ಹಠ ತೊಟ್ಟಿದ್ದಾರೆ. ಇದರ ವಿರುದ್ಧ ಕಾರ್ಮಿಕರೀಗ ಸಿಡಿದೆದ್ದಿದ್ದಾರೆ.

ಪುಣ್ಯಹಳ್ಳಿಯ ಅಕ್ಷರದೀಕ್ಷೆ

"ಅ ಆ ಮುಂದು ಅನ್ನಂ ಮಾಣ...ಉ ಊ ಮೊದಲು ಊಟ ನುಂತರ.." ಮುಂತಾದ ಗೋಡೆ ಬರಹಗಳು. ಇದರೊಂದಿಗೆ ಗೋಡೆಯ ಮೇಲೆ "ಅ ಆ ಇ ಈ" ಅಕ್ಷರ ಮಾಲೆ! ಕುರಿ ಕಾಯುವಲ್ಲಿ, ದನ ಮೇಯು ವಲ್ಲಿ, ಹೊಲಗದ್ದೆಗಳ ದುಡಿಮೆ ಯಲ್ಲಿ ಎಲ್ಲೆಲ್ಲೂ ಅ ಆ ಇ ಈ. ಇಡೀ ಹಳ್ಳಿಯಲ್ಲಿ ಹಕ್ಕಿಗಳು ನಿನಾದದಂತೆ ಕೇಳಿಬರುವ ಅ ಆ ಇ ಈ!! ಇದು ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿನ ಕರ್ನಾಟಕ - ಆಂಧ್ರ ಗಡಿ ಯಲ್ಲಿರುವ ಪುಣ್ಯ ಹಳ್ಳಿಯ ನೋಟ.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟದ ಪುಟ್ಟ ಕಿಡಿಯೊಂದನ್ನು ತನ್ನ ಗರ್ಭದಲ್ಲಿ ಹುಗಿದುಕೊಂಡಿದ್ದ ಒಂದು ಪುಟ್ಟ ಗ್ರಾಮ. ಹೆಬ್ಬಣಿಗೆ ಅಂಟಿಕೊಂಡ ಮತ್ತೊಂದು ಕುಗ್ರಾಮ ಪುಣ್ಯಹಳ್ಳಿ. ಕ್ಷೌರಿಕ, ಕುರುಬ, ದಲಿತ, ಬಲಿಜ, ಗೊಲ್ಲ, ಒಕ್ಕಲಿಗರೊಂದಿಗೆ ಮುಸಲ್ಮಾನರು ಕೊಂಚ ಗಮನೀಯ ಪ್ರಮಾಣದಲ್ಲಿರುವ ಈ ಪುಟ್ಟ ಹಳ್ಳಿ ನಿಜಕ್ಕೂ ಈಗ ಪುಣ್ಯದ ಕೆಲಸ ಮಾಡುತ್ತಿದೆ. ಅನಕ್ಷರತೆಯ ಪುಣ್ಯದ ದಿನಗಳನ್ನು ಈಗ ಪುಣ್ಯಹಳ್ಳಿ ನೋಡುತ್ತಿದೆ. ಈ ಪುಣ್ಯಹಳ್ಳಿಯ ಪುಣ್ಯ ಇತರ ಗ್ರಾಮಗಳಿಗೂ ಹಬ್ಬುವ ಸಾಧ್ಯತೆಗಳಿವೆ.

ಈ ಗ್ರಾಮಕ್ಕೆ ಅ ಆ ಇ ಈ ಯ ವೈಭವ ತಂದವರು ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿರುವ ಗೋಪಾಲ್ ಎಂಬ ಯುವ ಕಾರ್ಯಕರ್ತ. ಕೇರಳದ "ಜ್ಞಾನ ವಿಜ್ಞಾನ ಜಾಥಾ"ದಿಂದ ಪ್ರಭಾವಿತರಾದ ಗೋಪಾಲ್ ಸುಮ್ಮನೆ ಮಾತು, ಚಿಂತನೆಗಳಲ್ಲಿ ಕಾಲಹಾಕುವ ಬದಲು ಅಕ್ಷರತೆಯ ಒಂದು ಕೆಲಸ ಮಾಡಿ ತೋರಿಸಬೇಕೆಂದು ಈ ಗ್ರಾಮವನ್ನು ಆರಿಸಿ ಕೊಂಡರು. ಈತನೊಂದಿಗೆ ಈ ಗ್ರಾಮದಲ್ಲಿ ಈಗಾಗಲೇ ಮೇಷ್ಟರ ಕೆಲಸ ಮಾಡುತ್ತಿದ್ದ ಸುಭಾಷ್ ಎನ್ನುವ ಯುವ ಉತ್ಸಾಹಿ ಸೇರಿಕೊಂಡರು. ಹಳ್ಳಿಗಳಲ್ಲಿ ತಿಂಗಳಗಟ್ಟಲೆ ಶಾಲೆಯ ಕಡೆ ಬಾರದೆ ರಾಜಕಾರಣದಲ್ಲಿ ತೊಡಗುವ ಉಪಾಧ್ಯಾಯರೇ ಇರುವಾಗ ದಿನಪೂರ್ತಿ ಶಾಲೆಗೆ ಅಂಟಿಕೊಂಡಿರುವ ಸುಭಾಷ್ ತರದವರು ನಿಜಕ್ಕೂ ವಿರಳ. ಗೋಪಾಲ್, ಸುಭಾಷ್ ಸೇರಿಕೊಂಡು ಹಳ್ಳಿಯನ್ನು ಸರ್ವೇ ಮಾಡಿದರು.

ಸುಮಾರು 600 ಜನಸಂಖ್ಯೆಇರುವ ಪುಣ್ಯಹಳ್ಳಿಯಲ್ಲಿ 5 ನೇ ತರಗತಿವರೆಗೂ ಓದಿರುವವರು ಕೇವಲ 120 ಮಂದಿ ಇದ್ದರು. ಅವರಲ್ಲಿ ಆಸಕ್ತರನ್ನು ಆರಿಸಿಕೊಂಡು ಇಡೀ ಊರಿನ ಜನತೆ ಯನ್ನು ಅವರವರ ಬುದ್ಧಿಶಕ್ತಿ, ವಯಸ್ಸಿಗನುಗುಣವಾಗಿ 44 ಗುಂಪು ಗಳನ್ನಾಗಿ ಮಾಡಿಕೊಂಡರು. ಅದರಲ್ಲಿ ಸುಮಾರು 17 ಮಂದಿ ಊರಿನ ಹಿರಿಯರು ಅತ್ಯಂತ ಕೋಪಿಷ್ಠರು ಮತ್ತು ಮೊಂಡರಾಗಿದ್ದರು. ಅವರಿಗೆ ಅ ಆ ಕಲಿಸುವ ಜವಾಬ್ದಾರಿ ಗೋಪಾಲ್ ಮೇಲೆ ಬಿತ್ತು. ಆದರೆ 17 ಜನ ಮುದಿ ಮುಂಗೋಪಿಗಳು ಅ ಆ ಕಲಿಯಲು ಸರ್ವಥಾ ಒಪ್ಪಲಿಲ್ಲ. "ನಾವು ಈಗಾಗಲೇ ಮುದುಕರಾಗಿದ್ದೇವೆ. ನಾವು ಈಗ ಅ ಆ ಕಲಿತು ಏನು ಮಾಡಬೇಕಿದೆ" ಎನ್ನುವುದು ಅವರ ವಾದ. ಗೋಪಾಲ್ ಈ ಮುದುಕರಿಗೆ ಸಾಕ್ಷರತೆಯ ಬಗ್ಗೆ ಎಷ್ಟೇ ರೀತಿ ಹೇಳಿದರೂ ಪ್ರಯೋಜನ ವಾಗಲಿಲ್ಲ. ಕೊನೆಗೆ ಗೋಪಾಲ್ ಇವರ ಮನವೊಲಿಸಲು ಉಪವಾಸ ಸತ್ಯಾಗ್ರಹ ಕೂರಲು ಅನುವಾದರು. ಊರಲ್ಲಿ

> ಅ ಆ ಇ ಈ ಯೂ
> ಇಷ್ಟೊಂದು
> ಸುಶ್ರಾವ್ಯವಾಗಿರುತ್ತದೆ
> ಎನ್ನುವುದು ನಿಜಕ್ಕೂ
> ತಿಳಿದಿರಲಿಲ್ಲ!

ಎಲ್ಲರಿಗೂ ಪ್ರೀತಿ ಪಾತ್ರರಾದ ಗೋಪಾಲ್ ಉಪವಾಸ ಕೂರುವುದನ್ನು ತಡೆಯಲು ಬೇರೆ ದಾರಿಯಿಲ್ಲದೆ ಈ 17 ಜನ ಮುಂಗೋಪಿ ಮುದುಕರು ಅ ಆ ಕಲಿಯಲು ಪ್ರಾರಂಭಿಸಿದರು. ಆಶ್ಚರ್ಯ ವೆಂದರೆ ಈ 44 ಗುಂಪುಗಳಲ್ಲಿ ಅತ್ಯಂತ ಜಾಗ್ರತೆ ಹಾಗೂ ಏಕಾಗ್ರತೆಯಾಗಿ ಅಕ್ಷರಮಾಲೆ ಕಲಿತವರು ಈ ಮುದಿ ಮುದುಕರು ಕಣ್ಣು ಮುಚ್ಚಿ ತನ್ಮಯತೆಯಿಂದ ಅ ಆ ಹೇಳಲು ಪ್ರಾರಂಭಿಸಿದರೆ ನಿಜಕ್ಕೂ ಅ ಆ ಇ ಈ ಒಂದು ಹಾಡಿನಂತೆ ಕೇಳಿಸುತ್ತದೆ. ಅ ಆ ಇ ಈ ಯೂ ಇಷ್ಟೊಂದು ಸುಶ್ರಾವ್ಯ ವಾಗಿರುತ್ತದೆ ಎನ್ನುವುದು ನಿಜಕ್ಕೂ ತಿಳಿದಿರಲಿಲ್ಲ!

ವಯಸ್ಕರ ಶಿಕ್ಷಣದವರು ಈ ಹಳ್ಳಿಗೆ ಬಂದು ಮೂಕವಿಸ್ಮಿತರಾದರು. ಸ್ಲೇಟ್ ಗಳನ್ನು ಕೊಟ್ಟರು. ಆದರೂ ಅನೇಕ ಮಂದಿಗೆ ಸ್ಲೇಟು, ಬಳಪ ಇಲ್ಲ. ಅನೇಕರು ಮರಳ ಮೇಲೆ ಅ ಆ ಇ ಈ ಬರೆಯುತ್ತಿದ್ದಾರೆ. ಮೋದಿಲ್ ಸಾಬ್ ಎಂಬ 70 ವರ್ಷ ವಯಸ್ಸಿನ ಮುದುಕ ದನ ಕಟ್ಟುವಾಗ, ಮೇವು ಹಾಕುವಾಗ ಯಾವಾಗಲೂ "ಮರಳು ತಂದೆಯಾ?" ಎಂದು ಮಕ್ಕಳಿಗೆ ಕೇಳುತ್ತಲೇ ಇರುತ್ತಾರೆ. ಸಂಜೆಯಾದಂತೆ ಮರಳ ಮುಂದೆ ಕೂತು ಅಕ್ಷರ ಬರೆಯಲು ಪ್ರಾರಂಭಿಸು ತ್ತಾರೆ. ಅನೇಕರು ತಮ್ಮ ಜೇಬಿನಲ್ಲಿ ಸ್ಕೆಚ್‌ಪೆನ್‌ನಿಂದ ಮಾಸ್ತರು ಬರೆದುಕೊಟ್ಟ ಅಕ್ಷರಮಾಲೆಯನ್ನು ಇಟ್ಟುಕೊಂಡು ತಮ್ಮ ಹೊಲ, ತೋಟಗಳ ಕೆಲಸಗಳಿಗೆ ಹೋಗುತ್ತಾರೆ.

ಈಚೆಗೆ ಒಬ್ಬ ಮುದುಕ ತನ್ನ ಮೊಮ್ಮಗಳೊಂದಿಗೆ ಕುರಿಕಾಯಲು ಬಿಟ್ಟು, ತನ್ನ ಮೊಮ್ಮಕ್ಕಳಿಗೆ ಕುರಿಗಳನ್ನು ನೋಡಿಕೊಳ್ಳುವಂತೆ ಹೇಳಿ ಜೇಬಿನಿಂದ ಅಕ್ಷರ ಮಾಲೆ ತೆಗೆದು ಓದಿಕೊಳ್ಳುತ್ತಿದ್ದ. ಕುರಿಗಳು ಪಕ್ಕದ ಹಳ್ಳಿಯ ಹೊಲಕ್ಕೆ ನುಗ್ಗಿ ಮೇಯತೊಡಗಿದವು. ಆ ಹೊಲದ ಹೆಂಗಸು ಬಂದು ಮುದುಕನಿಗೆ ಬಾಯಿಗೆ ಬಂದಂತೆ ಬೈದಳು. ಅ ಆ ಕಲಿಯಲು ಹೋಗಿ ಹೆಂಗಸಿನಿಂದ ಉಗಿಸಿಕೊಂಡ ಕಥೆಯನ್ನು ಹೇಳಿದ ಮುದುಕ ಅ ಆ ಕಲಿಯುವುದನ್ನು ಮಾತ್ರ ಮರೆಯಲಿಲ್ಲ.

ದಾಕ್ಷಾಯಣಿ ಎಂಬ ಪುಟ್ಟ ಶಿಕ್ಷಕಿ ತನ್ನ ತಾಯಿಯನ್ನು ಬಲವಂತವಾಗಿ ಕರೆತಂದು ಅಕ್ಷರ ಕಲಿಸಲಾರಂಭಿಸಿದಳು. ಈ ಶಿಕ್ಷಕಿ ತನ್ನ ತಾಯಿಯನ್ನು ಕರೆದಂತೆಲ್ಲಾ ಬೈಸಿಕೊಳ್ಳುತ್ತಿದ್ದಳು. ಆದರೂ ತಾಯಿಯನ್ನು ಎಳೆತಂದು ಅಕ್ಷರ ಕಲಿಸಲಾರಂಭಿಸಿದಳು. ಅಕ್ಷರ ಕಲಿಯುವ ಉಪಯೋಗ ಹೇಳುತ್ತಾ, "ಕನಿಷ್ಠ ನೀವು ಸಹಿ ಹಾಕುವುದನ್ನಾದರೂ ಕಲಿಯಿರಿ" ಎಂದಾಗ ಈ ಹೆಣ್ಣುಮಗಳು ತಾಯಿ ಸಹಿ ಹಾಕುವುದನ್ನು ಕಷ್ಟ ಪಟ್ಟು ಕಲಿತು, "ಸಹಿ ಹಾಕುವುದು ಬರುತ್ತಲ್ಲ. ಮುಂದೆ ಯಾಕೆ ಕಲಿಯಬೇಕು?" ಎಂದು ಆ ಪುಟ್ಟ ಶಿಕ್ಷಕಿಯನ್ನು ತಬ್ಬಿಬ್ಬುಗೊಳಿಸುತ್ತಾಳೆ. ಹೀಗೆ ಇಲ್ಲಿ ಪಾಠ ಕಲಿಸುವ 70 ವರ್ಷದ ಮುದುಕಿ ನಂಜಮ್ಮ, ಚಾಂದ್ ಪಾಶಾಗಳಿಂದ ಹಿಡಿದು ಹನ್ನೆರಡು ವರ್ಷದ ಚೌಡಪ್ಪನವರೆಗೂ ಅನೇಕ ರೀತಿಯ ಅನುಭವಗಳಾಗುತ್ತಿವೆ. ಈ ಅನುಭವ ಗಳನ್ನು ಇವರೆಲ್ಲಾ ಒಂದು ಪುಟ್ಟ ಪುಸ್ತಕದಲ್ಲಿ ಬರೆದಿಡುತ್ತಾರೆ.

ಅನೇಕ ಮಂದಿಗೆ ಹಗಲು ಅಕ್ಷರಾ ಭ್ಯಾಸ ಮಾಡಲು ಬಿಡುವು ಸಿಗಲ್ಲ. ರಾತ್ರಿ ಕಣ್ಣು ಕಾಣೊಲ್ಲ. ಇಂಥವರಿಗೆ ಕಣ್ಣು ಚಿಕಿತ್ಸೆ ನಡೆಸಲು ಹಾಗು ಕನ್ನಡಕ ಕೊಡಿಸಲು ಈ ಇಡೀ ಸಾಕ್ಷರತೆಯ ಕಾರ್ಯಕ್ರಮಕ್ಕೆ ಹಿನ್ನೆಲೆಯ ಸ್ಫೂರ್ತಿ ಯಾಗಿರುವ ಹೆಬ್ಬಣಿಯ ನಾಗ ಮೋಹನ್ ದಾಸ್ ಪ್ರಯತ್ನಿಸುತ್ತಿದ್ದಾರೆ.

ಮರಳ ರಾಶಿಯ ಮೇಲೆ, ದೀಪದ ಬೆಳಕಲ್ಲಿ ಆಕಾಶದ ಕೆಳಗೆ ಕೂತು ಅ ಆ ಬರೆಯುವ ಆ ದೃಶ್ಯವನ್ನು ನೋಡು ವುದೇ ನಿಜಕ್ಕೂ ಆನಂದ. ಅನೇ ಮಂದಿಗೆ ಸ್ಲೇಟ್, ಬಳಪಗಳನ್ನು ಒದಗಿಸಲು, ದಿನಪತ್ರಿಕೆ, ವಾರಪತ್ರಿಕೆಗಳನ್ನು ತರಿಸಿಕೊಳ್ಳಲು ಗೋಪಾಲ್ ಶತಪ್ರಯತ್ನ ಮಾಡುತ್ತಿದ್ದಾರೆ. ಅಂತೆಯೇ ವಾಲಿಬಾಲ್ ಸೆಟ್ ತರಲು ಪ್ರಯತ್ನಿಸುತ್ತಿದ್ದಾರೆ.

ಆಶ್ಚರ್ಯವೆಂದರೆ ಸರ್ಕಾರಿ ಶಾಲೆ ಯಲ್ಲಿ ಉಪಾಧ್ಯಾಯರಾಗಿದ್ದು, ನಿವೃತ್ತ ರಾಗಿರುವ ಒಬ್ಬರ ಮನೆಯಲ್ಲಿ ಈ ಉಪಾಧ್ಯಾಯರ ಪತ್ನಿ, ತಾಯಂದಿರು ಅನಕ್ಷರಸ್ಥರಾಗಿದ್ದರು. ಹಳ್ಳಿಗೆ ಅ ಆ ಇ ಈ ಬಂದ ಮೇಲೆ ಈ ಉಪಾಧ್ಯಾಯರ ಮನೆಯವರೂ ಅ.ಆ. ಇಈ ಕಲಿಯು ತ್ತಿದ್ದಾರೆ!

ಹೀಗೆ ಪುಣ್ಯ ಹಳ್ಳಿಯ ಸಾಕ್ಷರತಾ ಕಥೆಯನ್ನು ಹೇಳುತ್ತಾ ಹೋದರೆ ಅದಕ್ಕೆ ಕೊನೆಯೇ ಇಲ್ಲವೆನಿಸುತ್ತದೆ. ಈಗ ನಮ್ಮ ಅನೇಕ ಅಕ್ಷರಸ್ಥ ಹಳ್ಳಿಗಳು, ಈ ಹಳ್ಳಿಗಳಲ್ಲಿರುವ ವಿದ್ಯಾವಂತರು ಈ ಪುಣ್ಯ ಹಳ್ಳಿಯ ಕಡೆ ನೋಡಬೇಕಿದೆ.

ದೂರದರ್ಶನದ ಗೂಟೆಗಳಿಗೆ ಈ ಪುಣ್ಯ ಹಳ್ಳಿಯಂಥವು ಕಾಣಿಸುವಂತಿದ್ದರೆ ಎಷ್ಟು ಚೆನ್ನಾಗಿರುತಿತ್ತು.

ಪುಣ್ಯಹಳ್ಳಿಯ ಅ ಆ ಇ ಈ ಯ ನಿನಾದ ಇನ್ನೂ ಕಿವಿಗಳಲ್ಲಿ ಮಧುರವಾಗಿ ಮೊಳಗುತ್ತಿದೆ!

-ಸಿ.ಎಸ್. ದ್ವಾರಕಾನಾಥ್

ಕೃಪೆ ಲಂಕೇಶ್‌ಪತ್ರಿಕೆ

ನಿಮ್ಮ ಪ್ರಶ್ನೆ- ನಮ್ಮ ಉತ್ತರ

? ಒಂದು ದೇಶದ ಐಕ್ಯತೆಯನ್ನು ಸಮಗ್ರತೆಯನ್ನು ಕಾಪಾಡಲು ಬೇಕಾದ ಮುಖ್ಯ ಅಂಶಗಳ ಬಗ್ಗೆ ಮಾಹಿತಿಯನ್ನು ಕೊಡಿ.

ಸಿ.ಎಸ್..ಸೆಲ್ವರಿಜ್, ಕೊಡಗು

? ಆಧುನಿಕ ರಾಷ್ಟ್ರಗಳು ಹುಟ್ಟಿದ್ದು ಬಂಡವಾಳಶಾಹಿ ಕ್ರಾಂತಿಯ ಕಾಲ ಘಟ್ಟದಲ್ಲಿ. ಆಧುನಿಕ ಅರ್ಥದಲ್ಲಿ ದೇಶ ಅಥವಾ ರಾಷ್ಟ್ರ ರಾಜಕೀಯವಾಗಿ ಹೇಗೆ ಘಟಕವೋ, ಹಾಗೇನೇ ಆರ್ಥಿಕವಾಗಿ ಯೂ ಒಂದು ಘಟಕ. ಬೆಸೆದುಕೊಂಡ ಒಂದೇ ಮಾರುಕಟ್ಟೆ. ದೇಶದ ಆರ್ಥಿಕತೆ ಯಲ್ಲಿ ಪ್ರಮುಖ ಪಾತ್ರ ವಹಿಸುವ ವರ್ಗ ತನ್ನ ಈ ಮಾರುಕಟ್ಟೆ ಕೈ ಬಿಡದಂತೆ, ದೇಶದೊಳಗಿನ ಸಂಪನ್ಮೂಲ ಗಳನ್ನು ಬೆಳೆಸಿ ಕೊಳ್ಳಲು ಅನುವಾಗು ವಂತೆ ದೇಶದ ಐಕ್ಯತೆ, ಸಮಗ್ರತೆ ಬಗ್ಗೆ ಕಾಳಜಿ ವಹಿಸುತ್ತದೆ.

ಸಾಮಾನ್ಯವಾಗಿ ಒಂದೇ ಭಾಷೆ, ಒಂದೇ ಧರ್ಮ, ಒಂದೇ ಜನಾಂಗ, ವಿದ್ದರೆ ದೇಶದ ಐಕ್ಯತೆ ಸಮಗ್ರತೆ ಸುಲಭ ಎಂಬ ಭಾವನೆ ಇದೆ. ಇದು ಅತ್ಯಂತಅವೈಜ್ಞಾನಿಕವಾದದ್ದು. ಧರ್ಮ ಒಂದು ದೇಶದ ಐಕ್ಯತೆ ಸಮಗ್ರತೆ ಕಾಪಾಡಲಾರದು ಎಂದು ಪಾಕಿಸ್ತಾನ, ಬಾಂಗ್ಲಾದೇಶದ ಉದಾಹರಣೆ ತೋರಿ ಸುತ್ತದೆ. ಒಂದು ಭಾಷೆ ಸಹ ದೇಶದ ಮುಖ್ಯ ಕುರುಹು ಆಗಲಾರದು. ದಕ್ಷಿಣ ಅಮೇರಿಕಾದ ಹೆಚ್ಚಿನ ದೇಶ ಗಳಲ್ಲಿ ಸ್ಪಾನಿಷ್ ಜನರ ಭಾಷೆ ಅರಬ್ ಒಂದು ಜನಾಂಗ ಆದರೆ ಅರಬರು ಹತ್ತು ಹಲವು ದೇಶಗಳಲ್ಲಿ ಇದ್ದಾರೆ.

ಸಾಮನ್ಯವಾಗಿ ಒಂದು ದೇಶವನ್ನು ಹಿಡಿದಿಡುವುದು ಆರ್ಥಿಕವಾಗಿ ಪ್ರಮುಖ ಶಕ್ತಿಯಾಗಿರುವ ವರ್ಗ. ದೇಶದ ಐಕ್ಯತೆ, ಸಮಗ್ರತೆ ಕಾಪಾಡಿ ಕೊಳ್ಳುವ ಅದರ ಶಕ್ತಿ, ಅದು ಇತರ ವರ್ಗಗಳ ಜತೆ ಯಾವ ರೀತಿಯ ಸಖ್ಯತೆ, ಸಂಬಂಧ ಹೊಂದಿದೆ, ಅಥವಾ ಯಾವ ರೀತಿಯ ದಮನಕಾರಿ ನಿಯಂತ್ರಣ ಅಥವಾ ಸೈದ್ಧಾಂತಿಕ ಅಧಿಪತ್ಯ ಹೊಂದಿದೆ? ಎಂಬುದರ ಮೇಲೆ ಅವಲಂಬಿಸಿರುತ್ತದೆ.

ಜಗತ್ತಿನ ಪ್ರಮುಖ ಬಂಡವಾಳ ಶಾಹಿ ದೇಶಗಳಲ್ಲಿ ಬಂಡವಾಳ ಶಾಹಿ ವರ್ಗ ಅದು ಇತರ ವರ್ಗಗಳ ಮೇಲೆ ಹೊಂದಿರುವ ಸೈದ್ಧಾಂತಿಕ ಅಧಿಪತ್ಯ ಮತ್ತು ದಮನಕಾರಿ ನಿಯಂತ್ರಣವೇ ಅದರ ಐಕ್ಯತೆ ಸಮಗ್ರತೆ ಕಾಪಾಡಲು ಸಾಕಾಗುತ್ತದೆ. ಜನಾಂಗ, ಭಾಷೆ, ಧರ್ಮ ಪೂರಕವಾಗ ಬಹುದು. ಜಗತ್ತಿನ ಸಮಾಜವಾದಿ ದೇಶಗಳಲ್ಲಿ ಕಾರ್ಮಿಕ ವರ್ಗ ಪ್ರಮುಖ ವರ್ಗ. ಅದು ಇತರ ಎಲ್ಲಾ ದುಡಿಯುವ ವರ್ಗಗಳ ಜತೆ ಹೊಂದಿರುವ ಸಖ್ಯತೆ ವಹಿಸುವ ಮುಂಚೂಣಿಯ ಪಾತ್ರ ಸೈದ್ಧಾಂತಿಕ ಅಧಿಪತ್ಯ ಆ ದೇಶದ ಐಕ್ಯತೆ ಸಮಗ್ರತೆಯನ್ನುಕಾಪಾಡಬೇಕು.

ಹಲವು ಬಾರಿ ಆರ್ಥಿಕವಾಗಿ ಪ್ರಮುಖ ವರ್ಗ ಹಲವು ಜನಾಂಗ, ಭಾಷೆ, ಧರ್ಮ, ರಾಷ್ಟ್ರೀಯತೆಗಳನ್ನು ಒಳಗೊಂಡಿರಬಹುದು. ಇಂತಹ ಬಹು ರಾಷ್ಟ್ರೀಯತೆಯ ಪ್ರಭುತ್ವಗಳಲ್ಲಿ ದೇಶದ ಐಕ್ಯತೆ, ಸಮಗ್ರತೆ ಬಹಳ ನಾಜೂಕಿನ ಪ್ರಶ್ನೆ. ಇಂತಹ ದೇಶಗಳಲ್ಲಿ ಎಲ್ಲಾ ರಾಷ್ಟ್ರೀಯತೆ, ಭಾಷೆ, ಜನಾಂಗ, ಧರ್ಮಗಳಿಗೆ ಸಮಾನ ಹಕ್ಕುಗಳು ಮುಖ್ಯವಾಗಿ ಅಲ್ಪ ಸಂಖ್ಯಾತರಿಗೆ (ಭಾಷೆ, ಜನಾಂಗೀಯ ಅಥವಾ ಧಾರ್ಮಿಕ ಅಲ್ಪಸಂಖ್ಯಾತರಿರ ಬಹುದು) ತಕ್ಕ ರಕ್ಷಣೆ, ಪೂರಕ ಕ್ರಮಗಳಾಗಬೇಕು. ಎಲ್ಲಾ ವರ್ಗಗಳ ಜತೆಗೆ ಸಖ್ಯತೆ ಸೋವಿಯತ್ ಒಕ್ಕೂಟ, ಭಾರತ ಇಂತಹ ಬಹುರಾಷ್ಟ್ರೀಯ ಪ್ರಭುತ್ವಗಳಿಗೆ ಒಳ್ಳೆಯ ಉದಾಹರಣೆ. ಇಂತಹ ಸಂದರ್ಭಗಳಲ್ಲಿ ಆಳುವ ವರ್ಗ ತನ್ನ ಸಂಕುಚಿತ ಆರ್ಥಿಕ ಹಿತಾಸಕ್ತಿಗಳ ಎದುರು, ಈ ಇತರ ಅಂಶಗಳನ್ನು ಕಡೆಗಣಿಸದರೆ ಐಕ್ಯತೆ, ಸಮಗ್ರತೆಗೆ ಕುತ್ತು. ಬಂಡವಾಳಶಾಹಿ ವರ್ಗ ಆಳುವ ವರ್ಗ ಆಗಿದ್ದಾಗ ಸಾಮಾನ್ಯವಾಗಿ ಇದು ಸಂಭವಿಸುತ್ತದೆ.

ಕೆಲವು ದೇಶಗಳಲ್ಲಿ ನಿಖರವಾಗಿ ಗುರುತಿಸಬಹುದಾದ ಪ್ರಮುಖ ಆರ್ಥಿಕ ಪಾತ್ರ ನಿರ್ವಹಿಸುವ ಆಳುವ ವರ್ಗ ಇಲ್ಲದೆ ಇರಬಹುದು. ಆಗ ಸಾಮಾನ್ಯವಾಗಿ ಮಿಲಿಟರಿ ಪ್ರಭುತ್ವವನ್ನು ತನ್ನ ಕೈಗೆ ತೆಗೆದುಕೊಳ್ಳುತ್ತದೆ. ಇದು ಈಗ ತಾನೇ ವಸಾಹತುಶಾಹಿ ಕಪಿ ಮುಷ್ಟಿಯಿಂದ ಹೊರಕ್ಕೆ ಬರುತ್ತಿರುವ ಹಲವು ಆಫ್ರಿಕನ್ ದೇಶಗಳ ಮಟ್ಟಿಗೆ ನಿಜ. ವಸಾಹತುಶಾಹಿಗಳ ಅಧಿಪತ್ಯದಲ್ಲಿದ್ದ ಒಂದು ಪ್ರದೇಶವಿದು ಬಿಟ್ಟರೆ, ಅದಕ್ಕೆ ದೇಶದ ಯಾವುದೇ ಲಕ್ಷಣಗಳಿರುವುದಿಲ್ಲ. ಆದ್ದರಿಂದ ಅದರ ಐಕ್ಯತೆ ಸಮಗ್ರತೆ ಭದ್ರ ತಳಹದಿಯ ಮೇಲೆ ನಿಲ್ಲಲಾರದು. ಮಿಲಿಟರಿ ಬಲದ ಮೇಲೆ ಮಾತ್ರ ಇರಬಲ್ಲದು.

ನಾವೂ ಯೋಧರು

ನಾವು ಇನ್ನು ಕೇವಲ
ಯೋಧರಿಗೆ ಜನ್ಮ ನೀಡುವವರಲ್ಲ
ನಾವೂ ಸಹ ಯೋಧರು.
ನಾವು ಇನ್ನು ಜನನಾಯಕರ ಹೆಂಡತಿಯಲ್ಲ
ನಾವೂ ಜನನಾಯಕರು
ಕಾಲದ ಭದ್ರಕೋಟೆ ಉರುಳಿ
ಕಾರ್ಮಿಕರ ಶಕ್ತಿ ತಲೆ ಎತ್ತಿ ನಿಂತಾಗ
ಈ ನೆಲದಲ್ಲಿ
ನಾವು ಬರೀ ಗೋರಿಗಳ ಕಾವಲು ಕಾಯುವುದಿಲ್ಲ
ಪ್ರಾರ್ಥನೆ ಓದಿ ಸತ್ತವರಿಗಾಗಿ ಬಿಕ್ಕುವುದಿಲ್ಲ
ನಾವು ಮುಂಚೂಣಿಯ
ಭಾಗವಾಗಿರುತ್ತವೆ.

— ಸುಗಿಯಾರ್ತ ಸಿಸ್ವಾಲ್ಡಿ

(ದಕ್ಷಿಣ ಆಫ್ರಿಕಾದ ಮಹಿಳೆಯರ ಈಗಿನ ವಿಶ್ವಾಸ, ಜಾಗೃತಿ, ಹಾಗೂ ಶಕ್ತಿಗೆ ಅಭಿವ್ಯಕ್ತಿ ನೀಡುವ ಒಂದು ಕವನ)

ಕರ್ನಾಟಕದಲ್ಲಿ ಮಹಿಳೆಯರು

1981 ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಮಹಿಳೆಯರ ಸಂಖ್ಯೆ 1,82,13,087. ಇದರಲ್ಲಿ 1,30,53,708 ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿದ್ದರೆ 51,59,379 ಮಹಿಳೆಯರು ಮಾತ್ರ ಪಟ್ಟಣ/ನಗರಗಳಲ್ಲಿದ್ದಾರೆ.

ದುಡಿಯುವ ಮಹಿಳೆಯರು ಕೇವಲ 18,95% (ಇವರಲ್ಲಿ ಅರ್ಧದಷ್ಟು ಕೃಷಿ ಕೂಲಿಯಲ್ಲಿ ತೊಡಗಿದ್ದಾರೆ. ಅಂದರೆ ಪ್ರತಿ ಐವರಲ್ಲಿ ಒಬ್ಬ ಮಹಿಳೆ ಮಾತ್ರ ಕೃಷಿ ಕೂಲಿ ಬಿಡಿ ಕಟ್ಟುವುದು, ಬೀಡಿ, ಪ್ಲಾಂಟೇಶನ್, ನೇಕಾರಿಕೆ, ಫ್ಯಾಕ್ಟರಿಗಳ ಕಚೇರಿಗಳಲ್ಲಿ ದುಡಿಹ ಉಳಿದ ನಾಲ್ವರು ಮನೆಗಳಲ್ಲಿ, ಹೊಲಗಳಲ್ಲಿ ದಿನನಿತ್ಯ ಎಡೆಬಿಡದೆ ಕೆಲಸ ಮಾಡುತ್ತಿದ್ದರೂ 'ದುಡಿಯದ' ಮಹಿಳೆ.

ರುಜು ಹಾಕುವಷ್ಟರಿಂದ ಹೆಚ್ಚು ಮಟ್ಟದ ಅಕ್ಷರ ಬಲ್ಲ ಮಹಿಳೆಯರ ಶೇ. 27.71 ಗ್ರಾಮೀಣ ಪ್ರದೇಶದಲ್ಲಿ ಇದು 19.68% ಮಾತ್ರ.

ಪ್ರಾಥಮಿಕ ಶಾಲೆಗಳಲ್ಲಿ ಪ್ರತಿಸಾವಿರ ವಿದ್ಯಾರ್ಥಿಗಳಲ್ಲಿ 780-800 ವಿದ್ಯಾರ್ಥಿನಿಯರಿದ್ದರೆ ಪ್ರೌಢ ಶಾಲೆಗೆ ಬರುವ ಹೊತ್ತಿಗೆ ಇದು 400-450 ಕ್ಕಿಳಿಯುತ್ತದೆ. ಕಾಲೇಜಿನಲ್ಲಿ 300-350 ಕ್ಕಿಳಿಯುತ್ತದೆ. ವೃತ್ತಿ ಶಿಕ್ಷಣದಲ್ಲಿ, ವೈದ್ಯಕೀಯದಲ್ಲಿ ಪ್ರತಿ ಆರರಲ್ಲಿ ಒಬ್ಬಳು, ಇಂಜಿನಿಯರಿಂಗ್‌ನಲ್ಲಿ ಪ್ರತಿ 40 ರಲ್ಲಿ ಒಬ್ಬಳು ವಿದ್ಯಾರ್ಥಿನಿ.

(ಸಮ್ಮೇಳನದ ವರದಿಯಿಂದ)



ವಿದ್ಯುತ್ ಬೆಲೆ ಏರಿಕೆಗೆ ಪ್ರತಿಭಟನೆ

ಸೆಪ್ಟೆಂಬರ್ 15 ರಂದು ಬೆಳಗ್ಗೆ ನೂರಾರು ಕಾರ್ಯಕರ್ತರು ಸಿ.ಪಿ.ಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ಕರೆಯ ಮೇರೆಗೆ ರಾಜ್ಯದ ಕಾಂಗ್ರೆಸ್(ಐ) ಸರಕಾರ ವಿದ್ಯುತ್ ದರಏರಿಸಿ ಜನರ ಜೀವನವನ್ನು ಇನ್ನಷ್ಟು ದುರ್ಭರಗೊಳಿಸಿದ ಜನ ವಿರೋಧಿ ಕ್ರಮದ ವಿರುದ್ಧ ಕಾವೇರಿ ಭವನ ದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಮುಖ್ಯ ಕಚೇರಿಯೆದುರು ಪಿಕೆಟಿಂಗ್ ನಡೆಸಿದರು. ನೆರೆದ ಜನರನ್ನು ದ್ದೇಶಿಸಿ ಸಿ.ಪಿ.ಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ.ಎನ್.ಕೆ. ಉಪಾಧ್ಯಾಯ ಹಾಗೂ ಜಿಲ್ಲಾ ಕಾರ್ಯದರ್ಶಿ ಕಾಂ. ಎಸ್.ಆರ್. ಆರಾಧ್ಯ ಮಾತನಾಡುತ್ತಾ ರಾಜ್ಯ ಸರಕಾರದ ಈ ಕ್ರಮ ಹೇಗೆ ನ್ಯಾಯೋಚಿತವಲ್ಲ ಮತ್ತು ಜನ ವಿರೋಧಿ ಎಂದು ವಿವರಿಸಿದರು. ಪಿಕೆಟಿಂಗ್ ನಡೆಸುತ್ತಿದ್ದವರು ಪೋಲೀಸ್ ತಡೆಯನ್ನು ಭೇದಿಸಿ ಪಿಕೆಟಿಂಗ್ ಮುಂದುವರಿಸಿ ಬಂಧನಕ್ಕೊಳಗಾದರು.

ರೈತರ ಧರಣಿ ಸತ್ಯಾಗ್ರಹ

ಕರ್ನಾಟಕ ಪ್ರಾಂತ ರೈತ ಸಂಘದ ಕಮಲಾಪುರದ ಘಟಕವು 14.9.90 ರಂದು ಅತೀವೃಷ್ಟಿಯಿಂದ ಹಾನಿಯಾದ ಬಡ ಕೃಷಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಪರಿಹಾರ ಧನಕ್ಕಾಗಿ, ಬಂಜರು ಭೂಮಿ ಪಟ್ಟಕ್ಕಾಗಿ ಒತ್ತಾಯಿಸಿ, ಕಮಲಾಪುರದ ತಹಶೀಲ್ದಾರ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿತು.

ಧರಣಿ ಸತ್ಯಾಗ್ರಹದಲ್ಲಿ ಮರಗುತ್ತಿ ಸೊಂತ, ಕಿಣ್ಣಿ ,ಸರಮೋಸ, ಜಿವಣಗಿ ಇನ್ನಿತರ ಗ್ರಾಮದ ಕೃಷಿ ಕೂಲಿ ಕಾರ್ಮಿಕರು ಪಾಲ್ಗೊಂಡಿದ್ದರು.

ಧರಣಿ ಸತ್ಯಾಗ್ರಹದ ನೇತೃತ್ವವನ್ನು ತಾಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ಮಹಂತ ಎನ್. ಡೊಳಕರ್ ಚನ್ನಬಸಪ್ಪ ನೂಲಕರೆ ವಹಿಸಿದ್ದರು.

ಮೂರ್ತೆದಾರರ ಹೋರಾಟಕ್ಕೆ ಬೆಂಬಲ

ಮೂರ್ತೆದಾರರ ಮೊಡುವವನೇ

ಮಾಡುವವನು ಬೇಡಿಕೆಯ ಹೋರಾಟವನ್ನು ಬೆಂಬಲಿಸಬೇಕೆಂದು ಬಾಮಂಜೂರು ಪ್ರದೇಶದ ರೈತರ ಸಭೆ 7.9.90 ರಂದು ತೀರ್ಮಾನ ಕೈ ಗೊಂಡಿತು. ಹಾಗೂ ಸರಕಾರಿ ಭೂಮಿಯನ್ನು ಸ್ವಾಧೀನ ಪಡಿಸಿ ಕೃಷಿ ಮಾಡಿ ಮನೆಕಟ್ಟಿ ವಾಸಿಸುವವರಿಗೆ ಭೂಮಿಯನ್ನು ಕಾಯಂ ಗೊಳಿಸಿ, ಪಟ್ಟಾ ಕೊಡಬೇಕೆಂದೂ, ಮತ್ತು ರೈತರ ಸಾಲ ರದ್ಧತಿಯ ಬಗ್ಗೆ ಮನವಿ ಪತ್ರಕ್ಕೆ ಸಹಿ ಸಂಗ್ರಹ ಮಾಡಬೇಕೆಂದೂ ತೀರ್ಮಾನಿಸಿತು.

ಬಳಿಕ 10 ಜನರ ಸಮಿತಿಯನ್ನು ರಚಿಸಿ, ಈ ಕೆಳಗಿನವರನ್ನು ಪದಾಧಿಕಾರಿಗಳಾಗಿ ಆರಿಸಲಾಯಿತು.

ಅಧ್ಯಕ್ಷರು - ಕುಟ್ಟಿ ಮಡಿವಾಳ, ಉಪಾಧ್ಯಕ್ಷ - ಬಿ. ಗೋಪಾಲ, ಕಾರ್ಯದರ್ಶಿ - ಬೋಜ ಉಪಕಾರ್ಯದರ್ಶಿ - ಶೇಖರ, ಖಜಾಂಚಿ-ಗಂಗಯ್ಯ ಅಮಿನ್.

ಸಾಲ ರದ್ಧತಿಗಾಗಿ ಹೋರಾಟ

ರೈತರ ಹತ್ತು ಸಾವಿರ ರೂ. ಸಾಲವನ್ನು ಮನ್ನಾ ಮಾಡಬೇಕೆಂದು, ಭೂ. ನ್ಯಾಯ ಮಂಡಳಿಯಲ್ಲಿ ತೀರ್ಪಾದ ಭೂಮಿಯ ಮಾಲಕ ಹಕ್ಕು ಕೊಡಬೇಕೆಂದೂ ಅಕ್ರಮ ಭೂಮಿಯನ್ನು ಸಕ್ರಮ ಗೊಳಿಸಬೇಕೆಂದೂ, ಹಾಗೂ ಮೂರ್ತೆದಾರರ ಬೇಡಿಕೆಯನ್ನು ಈಡೇರಿಸಬೇಕೆಂದು ಸರಕಾರವನ್ನು ಒತ್ತಾಯಿಸಿ ಚಳುವಳಿ ನಡೆಸಲು ಪಾವೂರು ಗ್ರಾಮದ ರೈತರ ಸಭೆಯು 10.9.90 ರಂದು ತೀರ್ಮಾನಿಸಿತು.

ಮುಂದಿನ ಚಟುವಟಿಕೆ ನಡೆಸಲು 17 ಜನರುಳ್ಳ ಕಮಿಟಿ ರಚಿಸಿ ಈ ಕೆಳಗಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರು- ಬಿ. ಉಗ್ಗಪ್ಪ ಪೂಜಾರಿ, ಉಪಾಧ್ಯಕ್ಷರಾಗಿ- ಅಬ್ದುಲ್ ರಹಿಮಾನ್, ಕಾರ್ಯದರ್ಶಿ- ಲಕ್ಷ್ಮಣ್ ಕೋಟ್ಯಾನ್, ಉಪಕಾರ್ಯದರ್ಶಿಯಾಗಿ- ಬೆನೆಡಿಕ್ಟ್ ನೊರೊನ್ಹಾ, ಖಜಾಂಚಿಯಾಗಿ- ಕೆ.ದುಗ್ಗಪ್ಪ ಪೂಜಾರಿಯವರನ್ನು ಆರಿಸಲಾಯಿತು.

ಮುಖ್ಯಮಂತ್ರಿಯ ಬೇಜವಾಬ್ದಾರಿಯ ವರ್ತನೆಗಾಗಿ ಖಂಡನೆ

ಎ.ಬಿ.ಎಲ್. ಕಾರ್ಖಾನೆಯ ಕಾರ್ಮಿಕ ಸಂಘಟನೆ ಮತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಹಾಗೂ ಆಡಳಿತ ವರ್ಗದ ಪರವಾಗಿ ಒಪ್ಪಂದದ ಆಧಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಬಾಯ್ಲರ್ ನಿರ್ಮಾಣದ ಕೆಲಸ ವಹಿಸಿಕೊಳ್ಳದೇ ಇರುವುದರಿಂದ ಕಾರ್ಮಿಕರಿಗೆ ಕೆಲಸವೇ ಇಲ್ಲದಂತಹ ಪರಿಸ್ಥಿತಿ ಏರ್ಪಟ್ಟಿದೆ.

ಈ ಕುರಿತು ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಲು ನೂರಾರು ಎ.ಬಿ.ಎಲ್. ಕಾರ್ಮಿಕರು ನಿಯೋಗ ತೆಗೆದುಕೊಂಡು ಮಧ್ಯಾಹ್ನದಿಂದ ರಾತ್ರಿ 10 ಗಂಟೆಗಳವರೆಗೆ ಮುಖ್ಯ ಮಂತ್ರಿಗಳ ಭೇಟಿಗಾಗಿ ಕಾಯುತ್ತಾ ಕುಳಿತ್ತಿದ್ದರೂ ಸಹ ಮುಖ್ಯ ಮಂತ್ರಿಗಳು ಮನವಿಯನ್ನು ಸ್ವೀಕರಿಸದೆ ಇರುವುದನ್ನು ಗುಲ್ಬರ್ಗಾ ಸಿ.ಪಿ.ಐ(ಎಂ) ಜಿಲ್ಲಾಸಮಿತಿ ಖಂಡಿಸಿದೆ.

ಪ್ರಧಾನಿಗೆ ಮನವಿ

ತ್ರಿಪುರದಲ್ಲಿ ಸಿ.ಪಿ.ಐ(ಎಂ) ಕಾರ್ಯಕರ್ತರ ಮೇಲೆ ನಡೆಯುತ್ತಿರುವ ಹಲ್ಲೆಯನ್ನು ನಿಲ್ಲಿಸಲು ಆಜ್ಞೆ ಹೊರಡಿಸಬೇಕೆಂದು ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ತಕ್ಷಣ ಇಳಿಸಲು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿ ಸಿ.ಪಿ.ಐ.(ಎಂ) ಶಿರಸಿ ಶಾಖೆ ಪ್ರಧಾನ ಮಂತ್ರಿಗಳಿಗೆ ಶಿರಸಿ ಸಹಾಯಕ ಕಮೀಶನರ್‌ರವರ ಮುಖಾಂತರ 3.9.90 ರಂದು ಮನವಿ ಸಲ್ಲಿಸಿದೆ.

ಧಾರವಾಡದಲ್ಲಿ ಸಾಕ್ಷರತಾ ಉಪನ್ಯಾಸಕರ ತರಬೇತಿ ಶಿಬಿರ

ಅಂತರಾಷ್ಟ್ರೀಯ ಸಾಕ್ಷರತಾ ವರ್ಷದಲ್ಲಿ, ಅಕ್ಟೋಬರ್ 2 ರಿಂದ ನವಂಬರ್ 14 ರವರೆಗೆ ದೇಶಾದ್ಯಂತ ನಡೆಯಲಿರುವ 'ಭಾರತ ಜ್ಞಾನ ವಿಜ್ಞಾನ ಜಾಥಾ'ದ ಪೂರ್ವಸಿದ್ಧತೆಯಾಗಿ ಧಾರವಾಡದಲ್ಲಿ, ಸೆಪ್ಟೆಂಬರ್ 9 ರಂದು ಸಾಕ್ಷರತಾ ಉಪನ್ಯಾಸಕರ ತರಬೇತಿ ಶಿಬಿರವನ್ನು ನಡೆಸಲಾಯಿತು. ಅಂಜುಮನ್ ಕಾಲೇಜು ಆವರಣದಲ್ಲಿ ಇದನ್ನು ಏರ್ಪಡಿಸಲಾಗಿತ್ತು. ಸುತ್ತಮುತ್ತಲಿನ ತಾಲೂಕುಗಳಾದ ಧಾರವಾಡ, ಹುಬ್ಬಳ್ಳಿ, ಕಲಘಟಗಿ, ನವಲಗುಂದ, ಗದಗ ಮುಂತಾದ ತಾಲೂಕುಗಳಿಂದ ಸುಮಾರು ನೂರಕ್ಕೂ ಹೆಚ್ಚು ಸಾಕ್ಷರತಾ ಸ್ವಯಂ ಸೇವಕರು ಇದರಲ್ಲಿ ಭಾಗವಹಿಸಿದರು. ಇವರು ವಿವಿಧ ವೃತ್ತಿಗಳಲ್ಲಿ ನಿರತ ರಾದವರು.

ಜಿಲ್ಲಾ ವಯಸ್ಕ ಶಿಕ್ಷಣ ಅಧಿಕಾರಿ ಶ್ರೀ ವಿ.ವಿ. ಕಟ್ಟಿ ಶಿಬಿರವನ್ನು ಉದ್ಘಾಟಿಸಿದರು. ಈ ಶಿಬಿರ ಏರ್ಪಡಿಸಿದ ಧಾರವಾಡ ಜಿಲ್ಲಾ ಭಾರತ ಜ್ಞಾನ ವಿಜ್ಞಾನ ಜಾಥಾ ಸಮಿತಿಯನ್ನು ಅವರು ಅಭಿನಂದಿಸಿದರು. ಕ್ಷೇತ್ರ ಪ್ರಚಾರಾಧಿಕಾರಿ ಶ್ರೀ ಸುಭಾಸ ಬಿಟಗೇರಿ ಸಾಕ್ಷರತಾ ಆಂದೋಲನದಲ್ಲಿ ಸ್ವಯಂಸೇವಕರ, ಜನಪರ ಸಂಘಸಂಸ್ಥೆಗಳ ಪಾತ್ರ ಮಹತ್ವದ್ದೆಂದರು. ಅಂಜುಮನ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ಎಂ.ಬಿ.ದಿಲ್ ಶಾದ್ ಶುಭ ಕೋರುತ್ತಾ ತಮ್ಮ ಸಂಸ್ಥೆಯ ಸಹಕಾರದ ಆಶ್ವಾಸನೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರದ ಗೌರವ ನಿರ್ದೇಶಕ ಡಾ. ವಿ.ಎಸ್. ದೇಶಪಾಂಡೆ ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟದಲ್ಲಿ, ಸಾಕ್ಷರತಾ ಆಂದೋಲನದ ಪರಿಚಯ ಮಾಡಿಕೊಟ್ಟರು. ಸಾಕ್ಷರತೆಯಿಂದ ಜನ ತಮ್ಮ ಸ್ಥಿತಿಗತಿಗಳನ್ನು ಬದಲಾಯಿಸಿಕೊಳ್ಳುವ ಆತ್ಮವಿಶ್ವಾಸ ಹೊಂದು ವಂತಾಗಬೇಕೆಂದೂ, ದೇಶದ ಸ್ವಾವಲಂಬನೆಗೆ, ಸಮಗ್ರತೆಗೆ ಪೂರಕವಾಗಿರಬೇಕೆಂದೂ ಹೇಳಿದರು.

ಆರಂಭದಲ್ಲಿ, ಸಾಕ್ಷರತಾ ರಾಯಭಾರಿ ಶ್ರೀ ಬಿ.ಎಸ್. ಸೊಪ್ಪಿನ್ ಸ್ವಾಗತಿಸುತ್ತಾ ಜಾಥಾದ ಉದ್ದೇಶಗಳನ್ನು ತಿಳಿಸಿದರು. ಜಿಲ್ಲಾ ಜಾಥಾ ಸಮಿತಿ ಸಂಚಾಲಕ ಪ್ರೊ. ಎಫ್.ಆರ್.ತೋಂಟದಾರ್ಯ ಜಿಲ್ಲೆಯಲ್ಲಿ ತಯಾರಿಯ ವಿವರಗಳನ್ನು ನೀಡಿದರು. ಜಿಲ್ಲಾ ಜಾಥಾ ಸಮಿತಿಯ ಕೋಶಾಧಿಕಾರಿ ಹಾಗೂ ಶಿಬಿರದ ಸಂಚಾಲಕ ಶ್ರೀ ಸಿ.ಆರ್. ಭಟ್ ವಂದನಾರ್ಪಣೆ ಮಾಡಿದರು.

ನೆರೆ ಪೀಡಿತ ರೈತರ ಬೆಂಗಳೂರು ಜಾಥಾ

ಅತೀವೃಷ್ಟಿಯಿಂದ ಗುಲಬರ್ಗಾ, ಬೀದರ್ ಜಿಲ್ಲೆಯ ರೈತರಿಗೆ ನೂರು ಕೋಟಿಗೂ ಹೆಚ್ಚು ಬೆಳೆ ಹಾಗೂ ಭೂಮಿ, ಮನೆ ಬಿದ್ದು ಆದ ನಷ್ಟಕ್ಕೆ ಪರಿಹಾರ ಒದಗಿಸಲು ಒತ್ತಾಯಿಸಿ ಅಕ್ಟೋಬರ್ ಒಂದರಂದು ವಿಧಾನಸೌಧದ ಮುಂದೆ ಧರಣಿ ನಡೆಸಲು ಪ್ರಾಂತ ರೈತ ಸಂಘ ತೀರ್ಮಾನಿಸಿದೆ.

ಪ್ರಾಂತ ರೈತ ಸಂಘ 14.9.1990 ರಂದು ಗುಲಬರ್ಗಾ ಜಿಲ್ಲೆಯ ಆರು ತಾಲ್ಲೂಕುಗಳ ಮುಂದೆ ಪ್ರದರ್ಶನ, ಧರಣಿ ನಡೆಸಿದಾಗ, ಅಧಿಕಾರಿಗಳು ನಷ್ಟದ ಸರ್ವೆ ಕೂಡ ಮಾಡದೆ ಇರುವುದು ಹಾಗೂ ಅಖಿಲ ಭಾರತ ಕಿಸಾನ್ ಸಭಾ ಕೇಂದ್ರ ಸಮಿತಿ ರಾಷ್ಟ್ರೀಯ ರಂಗ ಸರ್ಕಾರಕ್ಕೆ ಪರಿಹಾರ ಒದಗಿಸಲು ಒತ್ತಾಯಿಸಿದಾಗಲೂ, ಕರ್ನಾಟಕ ರಾಜ್ಯ ಸರಕಾರ ಹೆಚ್ಚಿನ ನಷ್ಟವಾಗಿಲ್ಲವೆಂದು ಕೇಂದ್ರ ಸರಕಾರಕ್ಕೆ ತಪ್ಪು ಮಾಹಿತಿ

ಕೊಟ್ಟಿರುವುದು ಖಂಡನಾರ್ಹವಾಗಿದೆಯೆಂದು ತಿಳಿಸಿದೆ.

ಈ ಎಲ್ಲಾ ವಿದ್ಯಮಾನಗಳನ್ನು ಗಮನಿಸಿ, ರೈತರ ನಾಶವಾದ ಬೆಳೆಗೆ, ಭೂಮಿ ಒಡ್ಡುನಾಶಕ್ಕೂ, ಬಿದ್ದ ಮನೆಗಳಿಗೆ ಪರಿಹಾರ ಒದಗಿಸಲು ಕಾಂಗ್ರೆ ರಾಜ್ಯ ಸರ್ಕಾರಕ್ಕೂ ಹಾಗೂ ರಾಷ್ಟ್ರೀಯ ರಂಗದ ಕೇಂದ್ರ ಸರ್ಕಾರಕ್ಕೂ, ಪರಿಹಾರ ಒದಗಿಸಲು ಒತ್ತಾಯಿಸಿ ಅಕ್ಟೋಬರ್ ಒಂದರಂದು 10,000 ರೈತರು ವಿಧಾನ ಸೌಧದ ಮುಂದೆ ಪ್ರದರ್ಶನ ನಡೆಸಲಿದ್ದಾರೆಂದು ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆ, ಗುಲಬರ್ಗಾ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ಜಿಲ್ಲಾ ಅಧ್ಯಕ್ಷರಾದ ಕಲ್ಲಪ್ಪ ಕಿರಣಗಿಯವರು ತಿಳಿಸಿದ್ದಾರೆ.

ರೈತರ ಬೇಡಿಕೆಗಳಿಗಾಗಿ ಒತ್ತಾಯ

ಅಕ್ರಮ ಸರಕಾರಿ ಭೂಮಿಯನ್ನು ಅವರಿಗೆ ಸಕ್ರಮಮಾಡಬೇಕು, ಗುರುಪುರ ಅಣೆಕಟ್ಟನ್ನು ದುರಸ್ತಿ ಮಾಡಬೇಕು, ರಾಜ್ಯ ಸರಕಾರದ ವಿದ್ಯುತ್ ದರ ಏರಿಕೆಗೆ ಖಂಡನೆ ಮುಂತಾದ ನಿರ್ಣಯಗಳನ್ನು 9.9.90 ರಂದು ಸೇರಿದ ಗುರುಪುರ ಫಿರ್ಕ ರೈತ ಸಂಘ ಕೈ ಗೊಂಡಿತು.

ಸಭೆಯಲ್ಲಿ ರೈತ ಸಂಘದ ನಾಯಕರುಗಳಾದ ಜನಾರ್ಧನ ನಾಯ್ಕ, ಅಧ್ಯಕ್ಷತೆಯನ್ನು ಎಂ.ಎಸ್. ನಾರಾಯಣ ರವರು ವಹಿಸಿದ್ದರು.

ಸಭೆಯು ಮುಂದಿನ ಚಟುವಟಿಕೆಗಳಿಗಾಗಿ ಅಧ್ಯಕ್ಷರಾಗಿ ಎಂ.ಎಸ್. ನಾರಾಯಣ, ಉಪಾಧ್ಯಕ್ಷರಾಗಿ ಎಂ. ಕೃಷ್ಣ ಮೂಲ್ಯ, ಕಾರ್ಯದರ್ಶಿಯಾಗಿ ಕೆ. ವಾಸುದೇವ ಪೂಜಾರಿ, ಸಹಕಾರ್ಯದರ್ಶಿಯಾಗಿ ಸೋಣಯ್ಯಗೌಡ, ಕೋಶಾಧಿಕಾರಿಯಾಗಿ ಭೋಜ ಮತ್ತು 15ಮಂದಿಯ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು.

ಸಿ.ಐ.ಟಿ.ಯು: ನೇತೃತ್ವದಲ್ಲಿ ತ್ರಿಪುರಾ ದಿನಾಚರಣೆ

ತ್ರಿಪುರಾದಲ್ಲಿ ಕಾಂಗ್ರೆಸ್(ಐ)-ಟಿಯುಜೆಎಸ್ ಮೈತ್ರಿ ಕೂಟದ ಸರಕಾರವು ಕಾರ್ಮಿಕ ವರ್ಗದ ಮೇಲೆ ನಡೆಸುತ್ತಿರುವ ದಬ್ಬಾಳಿಕೆಗಳನ್ನು, ಮುಗ್ಧ ಜನರ ಕೊಲೆಗಳನ್ನು ಪ್ರತಿಭಟಿಸಲು ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು 10.9.90 ರಂದು ಮಂಗಳೂರಿನಲ್ಲಿ ಮೆರವಣಿಗೆ ನಡೆಸಿ, ನೆಹರೂ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಿದರು.

ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಟಿ. ಮಾಧವ ಅವರು ಮಾತನಾಡುತ್ತಾ ಜುಲೈ 8 ರಂದು ಜರುಗಿದ ತ್ರಿಪುರ ಗುಡ್ಡಗಾಡು ಸ್ವಾಯತ್ತ ಮಂಡಳಿಯ ಚುನಾವಣೆಯಲ್ಲಿ 147 ಬೂತುಗಳಲ್ಲಿ ರಿಗ್ ಮಾಡಲಾಗಿದೆ ಎಂದೂ 18 ಮಂದಿ ಕಾರ್ಯಕರ್ತರ ಕೊಲೆ ಮತ್ತು ಸಾವಿರಕ್ಕೂ ಹೆಚ್ಚು ಮಂದಿಗೆ ಗಂಭೀರ ಗಾಯಗಳಾಗಿವೆ ಎಂದೂ ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಕೆ.ಮೂಸಬ್ಬನವರು ಕಾಂಗ್ರೆಸ್(ಐ) ಟಿಯುಜೆಎಸ್ ಸರಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಮಹಿಳಾ ಸಂಘಟನೆಯ ಕರೆ

ಬಸ್ ದರಏರಿಕೆ, ವಿದ್ಯುತ್ ದರಏರಿಕೆ, ಹಣದುಬ್ಬರ ಮುಂತಾದವುಗಳಿಂದ ತತ್ತರಿಸುತ್ತಿರುವ ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಜನರ ಮೇಲೆ, ಮತ್ತೊಮ್ಮೆ ಕಾಂಗ್ರೆಸರ್ಕಾರ ತಿಂಗಳಿಗೆ ಮೂರು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ವರಮಾನವಿರುವ ಜನರು ಹೊಂದಿದ್ದ ಪಡಿತರ ಚೀಟಿಯ ಸೌಲಭ್ಯವನ್ನು ರದ್ದುಪಡಿಸುವ ಮೂಲಕ ಮತ್ತೊಮ್ಮೆ ಪ್ರಹಾರ ನಡೆಸಿದೆ.

ಜನರ ಆಶೋತ್ತರಗಳಿಗೆ ಸ್ಪಂದಿಸದೆ ವಿಶ್ವಬ್ಯಾಂಕಿನ ಆದೇಶದ ಮೇಲೆ ತನ್ನ ನೀತಿಗಳನ್ನು ರೂಪಿಸಿದರೆ ಸರ್ಕಾರ ಅದಕ್ಕೆ ಬೆಲೆ ತೆರಬೇಕಾಗುತ್ತದೆಂದು ಜನವಾದಿ ಮಹಿಳಾ ಸಂಘಟನೆ ಎಚ್ಚರಿಸಿದೆ.

ಕಾಂಗ್ರೆ ಸರ್ಕಾರ ಈ ಜನವಿರೋಧಿ ಕ್ರಮವನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹಪಡಿಸಿದೆ ಈ ಜನ ವಿರೋಧಿ ಕ್ರಮದ ವಿರುದ್ಧ ಜನಾಭಿಪ್ರಾಯ ಮೂಡಿಸಿ ಚಳುವಳಿ ನಡೆಸಲು ಸಿದ್ಧರಾಗಬೇಕೆಂದು ರಾಜ್ಯದ ಜನತೆಗೆ ಜನವಾದಿ ಮಹಿಳಾ ಸಂಘಟನೆ ಕರೆ ನೀಡಿದೆ.

ಗೌರವ ಶಿಕ್ಷಕರ ಪ್ರತಿಭಟನಾ ರ್‍ಯಾಲಿ

ಗೌರವ ಶಿಕ್ಷಕರ ಸಂಘದ ಬಳ್ಳಾರಿ ಜಿಲ್ಲಾ ಸಮಿತಿಯು ಸೆಪ್ಟೆಂಬರ್ 5 ರ ಶಿಕ್ಷಕರ ದಿನಾಚರಣೆಯನ್ನು ಬೇಡಿಕೆಯ ದಿನಾಚರಣೆಯನ್ನಾಗಿ ಆಚರಿಸಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ, ನೂರಾರು ಗೌರವ ಶಿಕ್ಷಕರು ಸಿರುಗುಪ್ಪ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿಯನ್ನು ಅರ್ಪಿಸಿದರು.

ಸುಮಾರು 3 ವರ್ಷಗಳಿಂದ ಗೌರವ ಶಿಕ್ಷಕರಾಗಿ ಕೇವಲ 250 ರೂ ಗಳಿಗೆ ಕೆಲಸ ಮಾಡುತ್ತಿದ್ದು, ಅವರ ಸೇವೆಯನ್ನು ಖಾಯಂಗೊಳಿಸಬೇಕೆಂದು ತಮ್ಮ ಬೇಡಿಕೆಯಲ್ಲಿ ತಿಳಿಸಿದ್ದಾರೆ.

ಇತ್ತೀಚೆಗಷ್ಟೇ 20,000 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಸರ್ಕಾರ ಪ್ರಕಟಿಸಿದ್ದು, ಗೌರವ ಶಿಕ್ಷಕರಿಗೆ ಯಾವುದೇ ಪ್ರಾತಿನಿಧ್ಯ ನೀಡದೆ ಇರುವುದರ ಹಿನ್ನೆಲೆಯಲ್ಲಿ ಹೋರಾಟ ನಡೆಸಲು ನಿರ್ಧರಿಸಲಾಯಿತು.

ಹೋರಾಟದ ಮುಂದಾಳುತ್ವವನ್ನು ತಾಲೂಕು ಅಧ್ಯಕ್ಷರಾದ ಎಂ. [illegible] ಪ್ರಕಾಶರವರು ವಹಿಸಿದ್ದರು.

ಸಿ.ಐ.ಟಿ.ಯು. ರಾಜ್ಯ ಮಂಡಳಿ ಸಭೆ

"ವಿದ್ಯುತ್ ದರ ಏರಿಕೆ, ಪೋಲೀಸ್ ನೀತಿ ವಿರುದ್ಧ ಹೋರಾಟಕ್ಕೆ ಇಳಿಯಿರಿ"

ಜೀವನಾವಶ್ಯಕ ವಸ್ತುಗಳ, ಬಸ್ ಪ್ರಯಾಣ ದರಗಳ ಹೆಚ್ಚಳದಿಂದ ಈಗಾಗಲೇ ತತ್ತರಿಸುತ್ತಿರುವ ರಾಜ್ಯದ ಜನತೆಯ ಮೇಲೆ ಮತ್ತೆ ಈಗ ವಿದ್ಯುತ್ ದರ ಏರಿಕೆಯ ಹೊರೆ ಹೇರುವ ರಾಜ್ಯದ ಕಾಂಗ್ರೆಸ್ ಸರ್ಕಾರದ ಕ್ರಮ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಸಿ.ಐ.ಟಿ.ಯು. ರಾಜ್ಯಮಂಡಳಿ ಬಲವಾಗಿ ಖಂಡಿಸಿದೆ. ವಿದ್ಯುತ್ ದರ ಏರಿಕೆಯಿಂದಾಗಿ ಕೈಗಾರಿಕಾ ಸರಕುಗಳ, ಅಗತ್ಯ ವಸ್ತುಗಳ ಬೆಲೆ ಏರುವುದಲ್ಲದೆ, ಸಣ್ಣ ಸಣ್ಣ ಕೈಗಾರಿಕಾ ಘಟಕಗಳ ಮೇಲೆ ಮಾರಕ ಹೊಡೆತ ಬಿದ್ದು ಅವು ಮುಚ್ಚಿ ಹೋಗಿ ಸಾವಿರಾರು ಕಾರ್ಮಿಕರು ಉದ್ಯೋಗ ಕಳಕೊಳ್ಳುವ ಸಂಭವವಿದೆ ಯೆಂದಿರುವ ರಾಜ್ಯ ಮಂಡಳಿ ಈ ದರ ಏರಿಕೆಯನ್ನು ತಕ್ಷಣ ವಾಪಸು ತಗೊಳ್ಳಬೇಕೆಂದು ಒತ್ತಾಯಿಸಿದೆ.

ಸೆಪ್ಟೆಂಬರ್ 11 ರಿಂದ 13 ರವರೆಗೆ ಕುಂದಾಪುರದಲ್ಲಿ ಸಭೆ ಸೇರಿದ್ದ ರಾಜ್ಯ ಮಂಡಳಿ ಸಭೆ ಈ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿ ಸೆಪ್ಟೆಂಬರ್ 24 ರಂದು ಈ ಏರಿಕೆಯ ವಿರುದ್ಧ ರಾಜ್ಯಾದ್ಯಂತ ಸಭೆ, ಮೆರವಣಿಗೆ, ಸತ್ಯಾಗ್ರಹ, ಪಿಕೆಟಿಂಗ್ ಮುಂತಾದ ಕಾರ್ಯಾಚರಣೆಗಳ ಮೂಲಕ ಸರ್ಕಾರದ ಮೇಲೆ ಒತ್ತಡ ತರಲು ಕರೆ ನೀಡಿದೆ.

ಈ ಜನ ವಿರೋಧಿ ನೀತಿಯೊಂದಿಗೆ ಕಾರ್ಮಿಕ ವಿರೋಧಿ ನಿಲುವನ್ನೇ ತಳೆಯುತ್ತಾ ಬಂದಿರುವ ಈ ಸರಕಾರದ ಕಾರ್ಮಿಕ ನೀತಿಯವಿರುದ್ಧ ಅಕ್ಟೋಬರ್ 8 ರಂದು ರಾಜ್ಯಾದ್ಯಂತ ಪ್ರತಿಭಟನೆ ಸಂಘಟಿಸಬೇಕೆಂದೂ ರಾಜ್ಯ ಮಂಡಳಿ ಸಭೆ ಕರೆನೀಡಿದೆ. ಕಾಂಗ್ರೆಸ್ ಅಧಿಕಾರಕ್ಕೆ ಮರಳಿದ ಕೂಡಲೇ ಪೋಲೀಸ್ ನೀತಿಯೂ ಬದಲಾಗಿದೆ. ಪೋಲೀಸರ ದೌರ್ಜನ್ಯಕ್ಕೆ, ಮುಖ್ಯವಾಗಿ ಕಾರ್ಮಿಕರ ವಿರುದ್ಧ ಮಾಲಿಕರ ಪರವಾಗಿ ದೌರ್ಜನ್ಯ ನಡೆಸಲು ಮುಕ್ತ ಲೈಸನ್ಸ್ ನೀಡಿದಂತಿದೆ ಎಂದಿರುವ ನಿರ್ಣಯ ಕೊಡಗಿನ ಪ್ಲಾಂಟೇಶನ್‌ಗಳಲ್ಲಿ, ಹಾಸನದಲ್ಲಿ ಉತ್ತರ ಕರ್ನಾಟಕದ ಶರಾವತಿ ಹಂಚಿನ ಕಾರ್ಖಾನೆಯಲ್ಲಿ ಬೆಂಗಳೂರು ಮತ್ತಿತರ ಕಡೆ ಕಾರ್ಮಿಕರ ಹೋರಾಟದ ಸಂದರ್ಭಗಳಲ್ಲಿ, ಪೋಲೀಸರು ಮಾಲಿಕ ಪರಿವರ್ತನೆಯನ್ನು ಉದಾಹರಣೆಯಾಗಿ ನೀಡುತ್ತಾ ಕಾರ್ಮಿಕರ ಮೇಲೆ ಸುಳ್ಳು ಕೇಸುಗಳ ಬಗ್ಗೆ ತನಿಖೆ ಮಾಡಿ ಅವನ್ನು ಹಿಂದಕ್ಕೆ ಪಡೆಯಬೇಕು. ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳನ್ನು ಶಿಕ್ಷಿಸ ಬೇಕೆಂದು ರಾಜ್ಯ ಸರ್ಕಾರವನ್ನು ರಾಜ್ಯ ಮಂಡಳಿ ಒತ್ತಾಯಿಸಿದೆ.

ದೇಶವನ್ನೆಲ್ಲಾ ತಟ್ಟಿರುವ ಮೀಸಲಾತಿ ವಿರೋಧಿ ಚಳುವಳಿಯ ಬಗ್ಗೆ ಚರ್ಚಿಸಿದ ರಾಜ್ಯ ಮಂಡಳಿ ಮಂಡಲ್ ವರದಿ ವಿರುದ್ಧ ಚಳುವಳಿ ಸರಿಯಲ್ಲ ಎಂದಿದೆ. ಹರಿಜನ ಗಿರಿಜನರಿಗೆ 22.5% ಮೀಸಲಾತಿ, ಇತರ ಹಿಂದುಳಿದ ವರ್ಗಗಳಿಗೆ ಆರ್ಥಿಕ ಮಾನದಂಡದೊಂದಿಗೆ, 27% ಮೀಸಲಾತಿ ಬೆಂಬಲಿಸಿರುವ ರಾಜ್ಯಮಂಡಳಿ ಮೀಸಲಾತಿಯಿಂದಲೇ ಬಡತನ, ನಿರುದ್ಯೋಗ ಬಗೆಹರಿಯದು. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಿ ಕೇಂದ್ರ ಸರ್ಕಾರ ತನ್ನ ಆರ್ಥಿಕ ನೀತಿಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಿದರೆ ಮಾತ್ರವೇ ನಿರುದ್ಯೋಗ ಪರಿಹಾರ ಸಾಧ್ಯ ಎಂಬ ಅಂಶದತ್ತ ರಾಜ್ಯದ ಕಾರ್ಮಿಕ ವರ್ಗದ ಗಮನ ಸೆಳೆದು ಇದಕ್ಕಾಗಿ ದುಡಿಯುವ ಜನಗಳಐಕ್ಯತೆಗೆ ಯಾವುದೇ ರೀತಿ ಧಕ್ಕೆ ತರಬಾರದೆಂದು ಕರೆನೀಡಿದೆ.

> ಸೆಪ್ಟೆಂಬರ್ 11 ರಿಂದ 13 ರವರೆಗೆ ಕುಂದಾಪುರದಲ್ಲಿ ಸಭೆ ಸೇರಿದ್ದ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಳಿಯ ವಿದ್ಯುತ್ ದರ ಏರಿಕೆ ವಿರುದ್ಧ ಸೆಪ್ಟೆಂಬರ್ 24 ರಂದು ಹಾಗೂ ಕಾಂಗ್ರೆಸ್ ಸರಕಾರದ ಕಾರ್ಮಿಕ-ವಿರೋಧಿ ನೀತಿಯ ವಿರುದ್ಧ ಅಕ್ಟೋಬರ್ 8ರಂದು ರಾಜ್ಯಾದ್ಯಂತ ಪ್ರತಿಭಟನೆ ವ್ಯಕ್ತ ಪಡಿಸಲು ರಾಜ್ಯದ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ. ಸಭೆಯ ನಿರ್ಣಯಗಳ ಬಗ್ಗೆ ಒಂದು ವರದಿ.

ರಾಜ್ಯದ ಕಾರ್ಮಿಕ ವರ್ಗವನ್ನು ತಟ್ಟುವ ಇನ್ನೂ ಹಲವಾರು ವಿಷಯಗಳನ್ನು ಚರ್ಚಿಸಿ ರಾಜ್ಯ ಮಂಡಳಿ ನಿರ್ಣಯಗಳನ್ನು ಅಂಗೀಕರಿಸಿತು. ಮೂರ್ತೆದಾರರ ಹೋರಾಟಕ್ಕೆ ಕಾರ್ಮಿಕ ವರ್ಗ ಸಕ್ರಿಯ ಬೆಂಬಲ ನೀಡಬೇಕೆಂದು ಕರೆ ನೀಡಿರುವ ಇನ್ನೊಂದು ನಿರ್ಣಯ ಮಾಡುವವನೇ ಮಾರುವವನಾಗಬೇಕೆಂಬ ಬೇಡಿಕೆ ನ್ಯಾಯಪೂರ್ಣ. ಸರಕಾರ ಮೂರ್ತೆದಾರರಿಗೆ ತಾವೇ ಉತ್ಪಾದಿಸಿದ ಶೇಂದಿಯನ್ನು ತಾವೇ ಮಾರಾಟ ಮಾಡಿ ಗೌರವದಿಂದ ಜೀವನಸಾಗಿಸಲು ಅನುಕೂಲ ಮಾಡಿಕೊಡಬೇಕೆಂದೂ, ಮೂರ್ತೆದಾರರ ಮೇಲೆ ಅಬಕಾರಿ ಇಲಾಖೆಯವರು, ಇತರ ಸ್ಥಾಪಿತ ಹಿತಾಸಕ್ತಿಗಳ ದಬ್ಬಾಳಿಕೆಗಳನ್ನು ನಿಲ್ಲಿಸಬೇಕೆಂದೂ ಈ ನಿರ್ಣಯ ಒತ್ತಾಯಿಸಿದೆ.

ಬೆಲೆಯೇರಿಕೆಯ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸುತ್ತಾ, ಆರ್ಥಿಕ ನೀತಿಯಲ್ಲಿ ಬದಲಾವಣೆಗಾಗಿ, ಬೆಲೆಗಳ ಹತೋಟಿಗಾಗಿ ಕಾರ್ಮಿಕರು ಹೋರಾಟಕ್ಕಿಳಿಯಬೇಕು ಎಂದಿದೆ.

ದುರಾಡಳಿತ, ಭ್ರಷ್ಟಾಚಾರಗಳಿಂದಾಗಿ 2-3 ವರ್ಷಗಳಿಂದ ಮುಚ್ಚಿರುವ ರಾಯಚೂರು, ಬಿಜಾಪುರ, ಬಾಗಲಕೋಟೆಯ ಮೂರು ಸಹಕಾರಿ ಗಿರಣಿಗಳನ್ನು ಕೂಡಲೇ ತೆರೆಯಬೇಕೆಂದು ರಾಜ್ಯ ಸರಕಾರವನ್ನು ಸಿ.ಐ.ಟಿ.ಯು. ರಾಜ್ಯ ಮಂಡಳಿ ಒತ್ತಾಯಿಸಿದೆ.

ರಾಜ್ಯದ 15 ಸಾವಿರ ಮಂಡಲ ಪಂಚಾಯತಿ ಕೆಲಸಗಾರರ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ನೀಡುತ್ತಾ ಅವರ ಬೇಡಿಕೆಗಳಿಗೆ ಮಂಜೂರಿ ನೀಡಬೇಕೆಂದು ಒತ್ತಾಯಿಸಲಾಗಿದೆ.

ವಿಜಯನಗರ ಉಕ್ಕಿನ ಕಾರ್ಖಾನೆಯನ್ನು 8 ನೇ ಯೋಜನೆಯಲ್ಲಿ ಸೇರಿಸಬೇಕೆಂದು ಡಿ.ವೈ.ಎಫ್.ಐ. ರಾಜ್ಯಾದ್ಯಂತ ನಡೆಸಲಿರುವ ಹೋರಾಟಕ್ಕೆ ಕೂಡಾ ಸಿ.ಐ.ಟಿ.ಯು. ಬೆಂಬಲಿಸಿದೆ.

ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವ ಸಂಘಟಿತ ಕಾರ್ಮಿಕರ ಕರ್ತವ್ಯದ ಕುರಿತು ಹೇಳುತ್ತಾ ಸಿ.ಐ.ಟಿ.ಯು. ನೇತೃತ್ವದ ಸಂಘಗಳೂ ಇದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ ಎಂದು ಗಮನಿಸಿದ ರಾಜ್ಯಮಂಡಳಿ ಇದನ್ನೊಂದು ಪಾಲಿಸಬೇಕೆಂದೂ ಹೇಳಿದೆ.

ಇರಾಕ್ ಕುವೈಟ್ ಮೇಲೆ ಆಕ್ರಮಣ ನಡೆಸಿದ ಸಂದರ್ಭ ಉಪಯೋಗಿಸಿಕೊಂಡು ಅಮೆರಿಕನ್ ಸಾಮ್ರಾಜ್ಯಶಾಹಿಗಳು ತಮ್ಮ ಏಕಮೇವಾಧಿಪತ್ಯವನ್ನು ಸ್ಥಾಪಿಸುವ ದಿಸೆಯಲ್ಲಿ ಕುವೈಟ್‌ನಲ್ಲಿರುವ ಎರಡು ಲಕ್ಷ ಭಾರತೀಯರಿಗೆ ಆಹಾರ ಪೂರೈಕೆಗೆ ತಡೆಯೊಡ್ಡಿರುವುದನ್ನು ರಾಜ್ಯ ಮಂಡಳಿ ಸಭೆ ತೀವ್ರವಾಗಿ ಖಂಡಿಸಿತು.

ಸಭೆಯ ಮುಕ್ತಾಯದ ದಿನವಾದ ಸೆಪ್ಟೆಂಬರ್ 13 ರಂದು ಕುಂದಾಪುರದ ಸಾವಿರಾರು ಕಾರ್ಮಿಕರು ಭಾಗವಹಿಸಿದ್ದ ಬೃಹತ್ ಮೆರವಣಿಗೆ ನಡೆಯಿತು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಸಿ. ನಂಜುಂಡಪ್ಪ, ವಿ.ಜೆ.ಕೆ. ನಾಯರ್, ಅಬ್ರಹಾಂ ಕರ್ಕಡ, ಬಿ.ಶಂಕರ್ ಮುಂತಾದ ಸಿ.ಐ.ಟಿ.ಯು ಮುಖಂಡರು ಮಾತನಾಡಿದರು.

ಮಾನ್ ಗುಂಪಿನ ದೇಶದ್ರೋಹಿ ವರ್ತನೆ
ಮತ್ತೊಮ್ಮೆ ಸಾಮ್ರಾಜ್ಯಶಾಹಿಗಳ ಶಾಮೀಲಿಗೆ ಮತ್ತೊಂದು ಸಾಕ್ಷಿ

"ಅಮೆರಿಕಾದ ಸರಕಾರ ಗಮನಾರ್ಹ ಕಾಣಿಕೆ ನೀಡಿದೆ. ಬಾಲ್ಟಿಕ್ ದೇಶಗಳಾದ ಲಿಥುವಾನಿಯಾ, ಎಸ್ತೋನಿಯಾ, ಬೊಲಿವಿಯಾ(!), ಚೈಲೋರಶ್ಯಾ ಮುಂತಾದ ಸಣ್ಣ ದೇಶಗಳ ಪರವಾಗಿ ಅದು ನಿಂತಿದೆ-ಸೋವಿಯೆತ್ ಒಕ್ಕೂಟದೊಂದಿಗೆ ಮಾತುಕತೆ ನಡೆಯುತ್ತಿದ್ದರೂ ಕೂಡಾ.... ಸಿಖ್ ರಾಷ್ಟ್ರದ ಸ್ವಯಂ ನಿರ್ಧಾರವನ್ನು ತಾನು ಗೌರವಿಸುವುದಾಗಿ ಅದೀಗ ಒಂದು ಸಾರ್ವತ್ರಿಕ ಘೋಷಣೆ ಮಾಡಬೇಕೆಂದು ನಾವು ಅಮೆರಿಕಾವನ್ನು ಕೇಳಿಕೊಳ್ಳುತ್ತೇವೆ."

ಇದು ಶಿರೋಮಣಿ ಅಕಾಲಿದಳ (ಮಾನ್) ಭಾರತದಲ್ಲಿ ಅಮೆರಿಕಾದ ರಾಯಭಾರಿ ವಿಲಿಯಂ ಕ್ಲಾರ್ಕ್‌ಗೆ ಆಗಸ್ಟ್ 9 ರಂದು ಅರ್ಪಿಸಿದ ಗುಪ್ತಮನವಿಯ ಒಂದು ಉದ್ಧಾರ. ಮಾನ್ ನೇತೃತ್ವದ ಅಕಾಲಿದಳದ ದೇಶದ್ರೋಹಿ ಪ್ರತ್ಯೇಕತಾವಾದಿ ಸ್ವರೂಪ ವನ್ನು ಜತೆಗೆ ಪಂಜಾಬ್ ಸಮಸ್ಯೆಯಲ್ಲಿ ಅಮೆರಿಕಾದ ದುಷ್ಟ ಪಾತ್ರವನ್ನು ಬಯಲಿಗೆಳೆದಿರುವ ಸಂಗತಿಯಿದು.

ತನ್ನ ದೇಶದ ಸರಕಾರ "ಭಾರತದಲ್ಲಿನ ಭಯೋತ್ಪಾದಕತೆ ಬಗ್ಗೆ ಒಂದು ನೀತಿ ರೂಪಿಸಲು ನೆರವಾಗಲೆಂದು ಅಮೆರಿಕನ್ ಅಧ್ಯಕ್ಷರಿಗೆ ವರದಿ ತಯಾರಿಸಲು ಈ ಅಮೆರಿಕನ್ ರಾಯಭಾರಿ ಪಂಜಾಬಿನ ನಾಲ್ಕು ದಿನಗಳ ಪ್ರವಾಸ ಕೈಗೊಂಡಿದ್ದರು! ಸ್ವಂತ ಬುದ್ಧಿಯಿರುವ ಯಾರಾದರೂ ಒಂದು ಸಾರ್ವಭೌಮ ದೇಶದ ವ್ಯವಹಾರಗಳಲ್ಲಿ ಅನಪೇಕ್ಷಣೀಯ ಹಸ್ತಕ್ಷೇಪ ಎಂದು ಸ್ಪಷ್ಟವಾಗಿ ಗುರುತಿಸಬಹುದಾದ ವರ್ತನೆಯಿದು. ಅಮೆರಿಕನ್ ಅಧಿಕಾರಿಗಳ ಈ ಹಸ್ತಕ್ಷೇಪ ಮೊದಲನೆಯದೇನಲ್ಲ.

ಅಮೆರಿಕನ್ ರಾಯಭಾರಿ ಅಮೃತಸರಕ್ಕೆ ಬಂದಿದ್ದಾಗ ಅರ್ಪಿಸಿದ ಈ ಹದಿನೈದು ಪುಟಗಳ ಗುಪ್ತ ಮನವಿ ಭಾರತದ ಐಕ್ಯತೆಯ ವಿರುದ್ಧ ಮಾನ್‌ಗುಂಪಿನ ಚಟುವಟಿಕೆಗಳ ಬಹಿರಂಗ ಪುರಾವೆ; ಸಿಖರ ದೇಶಪ್ರೇಮಕ್ಕೆ ಒಂದು ಅತೀ ದೊಡ್ಡ ಅವಮಾನ.ವಸಾಹತುಶಾಹಿಯಿಂದ ದೇಶದ ವಿಮೋಚನೆಗಾಗಿ ತ್ಯಾಗ-ಬಲಿದಾನ ಮಾಡಿದ ಹಲವು ತಲೆಮಾರಿನ ಸಿಖ್ ದೇಶಪ್ರೇಮಿಗಳಿಗೆ ಮಾಡಿರುವ ಅವಮಾನವಿದು.

"ತಾನೇ ಖುದ್ದಾಗಿ ನೋಡಲು ಅಮೆರಿಕನ್ ರಾಯಭಾರಿ ಪಂಜಾಬ್‌ಗೆ ಬರುತ್ತಿರುವ ಬಗ್ಗೆ ಸಿಖ್ ದೇಶಕ್ಕೆ ಬಹಳ ಆನಂದವಾಗಿದೆ." ಎಂದಿರುವ ಮನವಿ ಅಷ್ಟಕ್ಕೇ ನಿಲ್ಲದೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕೃಪೆಯ ಭಿಕ್ಷೆ ಬೇಡುತ್ತಾ ಅವರ ಬಂಡವಾಳದ ಮೂಲಕ ಪಂಜಾಬಿನಲ್ಲಿ ಮಾಡಬಹುದಾದ ಲೂಟಿಯ ಬಗ್ಗೆ ನಾಚಿಕೆಯಿಲ್ಲದೆ ಹೀಗೆ ಹೇಳಿಕೊಂಡಿದೆ.

"ಸಿಖ್ ದೇಶ ಮತ್ತು ಶಿರೋಮಣಿ ಅಕಾಲಿದಳ ಮುಕ್ತ ಉದ್ದಿಮೆ (ಬಂಡವಾಳ ಶಾಹಿ)ಗೆ ಪರವಾಗಿವೆ. ಅಮೃತಸರ ಮತ್ತಿತರ ಕಡೆ ಅಮೆರಿಕನ್ ತಾಂತ್ರಿಕ ನಿರ್ವಾಹಕರೇ, ಉದ್ಯಮಿಗಳೇ ಸ್ವತಃ ಬಂದು ಎಷ್ಟೊಂದು ಅವಕಾಶಗಳಿವೆ ಎಂದು ನೋಡಬಹುದು" ಎಂದು ಸ್ವಾಗತಿಸುತ್ತಾ "ಕೃಷಿ ಆಧಾರಿತ ಉದ್ದಿಮೆಗಳಿಗೆ ಇಲ್ಲಿ ದೊಡ್ಡ ಅವಕಾಶಗಳಿವೆ. ಪೆಪ್ಸಿ ಯೋಜನೆ ಒಂದು ಆರಂಭದ ಪ್ರಯತ್ನ ಈ ದಿಸೆಯಲ್ಲಿ ಕೋಕಾ ಕೋಲವನ್ನು ಕೂಡಾ ಪಂಜಾಬಿಗೆ ನಾವು ಆಹ್ವಾನಿಸುತ್ತೇವೆ" ಎಂದಿದೆ.

ದೇಶದ ಸ್ವಾಭಿಮಾನಿ ಜನಗಳೆಲ್ಲಾ ದೇಶದ ಸ್ವಾವಲಂಬನೆಯ ರಕ್ಷಣೆಗೆ ದೇಶದ ಆರ್ಥಿಕತೆಯನ್ನು ಸಾಮ್ರಾಜ್ಯಶಾಹಿ ಬಂಡವಾಳಕ್ಕೆ ಒತ್ತೆಯಿಡುವುದರ ವಿರುದ್ಧ ಸೆಟೆದು ನಿಂತಿರುವಾಗ ಮಾನ್ ಅಕಾಲಿದಳ ನಾಚಿಕೆಯಿಲ್ಲದೆ ಪಂಜಾಬಿನ ಲೂಟಿಗೆ ಆಹ್ವಾನ ನೀಡುತ್ತಿದೆ! ಅಷ್ಟೇ ಅಲ್ಲ, ಅಮೆರಿಕನ್ "ಸಂಸ್ಕೃತಿ" ಗೆ ತಮ್ಮ ಗುಲಾಮತನವನ್ನು ಪ್ರದರ್ಶಿಸಿದೆ. ಯಾವ ಸ್ವಾಭಿಮಾನಿ ಸಿಖನೂ ಸಹಿಸಲಾರದ ಗುಲಾಮತನದ ಪ್ರದರ್ಶನ!

"ಸಿಖರು ಅಮೆರಿಕನ್ ಸಮಾಜ ಮತ್ತು ಸಂಸ್ಕೃತಿಯಿಂದ ಕಲಿಯಲು ಆತುರರಾಗಿದ್ದಾರೆ. ಬೈರೂತ್‌ನಲ್ಲಿ, ನೀವು ಸ್ಥಾಪಿಸಿದಂತಹ ಒಂದು ಶಾಲೆ ಹಾಗೂ ವಿಶ್ವವಿದ್ಯಾಲಯವನ್ನು ಪಂಜಾಬಿನಲ್ಲೂ ಸ್ಥಾಪಿಸಿ. ಅದನ್ನು ಯೇಲ್ ಅಥವಾ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಸಂಬಂಧಗೊಳಿಸಬಹುದು".

ಇಷ್ಟೇ ಅಲ್ಲ, ವಾಯ್ಸ್ ಆಫ್ ಅಮೆರಿಕಾದ ಪಂಜಾಬಿ ಪ್ರಸಾರ ಆರಂಭಿಸಬೇಕು, ಅಮೃತಸರಕ್ಕೆ ವಾರಕ್ಕೆ ಎರಡು ಬಾರಿ ಅಮೆರಿಕನ್ ವಿಮಾನಯಾನ, ಸಿ.ಬಿ.ಎಸ್. ಮತ್ತಿತರ ಟೆಲಿವಿಷನ್ ಕಂಪೆನಿಗಳು ಉಪಗ್ರಹಗಳ ಮೂಲಕ ತಮ್ಮ ಕಾರ್ಯಕ್ರಮಗಳನ್ನು ಪಂಜಾಬಿಗೆ ಬಿತ್ತರಿಸಬೇಕು!- ಇವು ಮಾನ್ ಅಕಾಲಿದಳ ಅಮೆರಿಕಾದ ಸಾಮ್ರಾಜ್ಯಶಾಹಿ ವಲಯಗಳ ಮುಂದೆ ಹಿಡಿದ ಭಿಕ್ಷಾಪಾತ್ರೆಯ ಇತರ ಅಂಶಗಳು.

ಅಮೆರಿಕಾದ ಗುತ್ತೇದಾರಿಗಳಾದ ಜನರಲ್ ಮೋಟಾರ್ಸ್, ಫೋರ್ಡ್ ಮುಂತಾದವರಿಗೆ ತಮ್ಮ ಕಾರುಗಳನ್ನು ಮಾರಲು ಸೂಕ್ತ ಅವಕಾಶ ಕಲ್ಪಿಸುವುದು, ಪಂಜಾಬಿನಲ್ಲಿ ಇಲೆಕ್ಟ್ರಾನಿಕ್ ಉದ್ದಿಮೆ ಹಾಕಲು ಅಮೆರಿಕನ್ನರಿಗೆ ಅವಕಾಶ - ಪಂಜಾಬಿನ ಭೌಗೋಳಿಕ ರಾಜಕೀಯ ಸ್ಥಾನದ ಮಹತ್ವವನ್ನು ವಿವರಿಸುತ್ತಾ ಈ ಮನವಿ ಅಮೆರಿಕನ್ ಬಂಡವಾಳಿಗರಿಗೆ ನೀಡಿದ ಹಲವು ಆಹ್ವಾನಗಳಲ್ಲಿ ಕೆಲವು ಇವು.

ಹೀಗೆ ಈ ಮನವಿ ತಮ್ಮ ಬುದ್ಧಿಯನ್ನು ದೇಶದ ಶತ್ರುಗಳಿಗೆ ಮಾರಿಕೊಂಡ ಪ್ರತ್ಯೇಕತಾವಾದಿಗಳನ್ನು ಬಯಲಿಗೆಳೆಯುವ ಜ್ವಲಂತ ಸಾಕ್ಷಿ. ಎಲ್ಲಾ ದೇಶಪ್ರೇಮಿ, ಸ್ವಾಭಿಮಾನಿ ಶಕ್ತಿಗಳು ಬಲವಾಗಿ ಖಂಡಿಸಬೇಕಾದ ದೇಶ-ವಿರೋಧಿ ಚಟುವಟಿಕೆಯಿದು.

ಇಂತಹವರೊಂದಿಗೆ ಪಂಜಾಬಿನಲ್ಲಿ ಮಾತುಕತೆ ನಡೆಸಿ ಇತ್ಯರ್ಥಕ್ಕೆ ಬರಬಹುದು ಎಂಬ ಭ್ರಮೆ ಇಟ್ಟುಕೊಂಡವರು ಈಗಲಾದರೂ ಕಣ್ಣು ತೆರೆಯಬೇಕು- ತಾವು ಯಾರೊಡನೆ ಮಾತುಕತೆ ನಡೆಸಬೇಕೆಂದು ಬಯಸುತ್ತಾರೋ ಅವರು ದೇಶವನ್ನು ತುಂಡುತುಂಡಾಗಿಸ ಬಯಸುವ ಸಾಮ್ರಾಜ್ಯಶಾಹಿಯ ಬಹಿರಂಗ ಏಜೆಂಟರು ಎಂಬುದನ್ನು ಈಗಲಾದರೂ ಅರಿಯ ಬೇಕು. ಈಗ ಪಂಜಾಬಿನಲ್ಲಿ ಚುನಾವಣೆ ನಡೆಸಬೇಕೆನ್ನುವವರು ಸಂಸದೀಯ ಚುನಾವಣೆಗಳಲ್ಲಿ ಉಗ್ರಗಾಮಿಗಳು ಹರಿಯಬಿಟ್ಟ ಹಿಂಸಾಚಾರವನ್ನು

ಪುಟ 5 ಕ್ಕೆ

> "ಭಾರತದಲ್ಲಿ ಭಯೋತ್ಪಾದಕತೆಯ" ಬಗ್ಗೆ ಅಮೆರಿಕನ್ ಸರಕಾರದ ನೀತಿ ರೂಪಿಸಲೆಂದು ವರದಿ ತಯಾರಿಸಲು ಅಮೆರಿಕಾದ ರಾಯಭಾರಿ ಪಂಜಾಬಿಗೆ ನಾಲ್ಕು ದಿನಗಳ ಭೇಟಿ ನೀಡಿದರು. ಆಗ ಮಾನ್ ಗುಂಪಿನ ಅಕಾಲಿಗಳ ಈ ರಾಯಭಾರಿಗೆ ಒಂದು ಗುಪ್ತ ಮನವಿ ಅರ್ಪಿಸಿತು. ಪಂಜಾಬ್ ಸಮಸ್ಯೆಯಲ್ಲಿ ಸಾಮ್ರಾಜ್ಯಶಾಹಿಯ ದುಷ್ಟಪಾತ್ರ ಹಾಗೂ ಮಾನ್ ಗುಂಪಿನ ಪ್ರತ್ಯೇಕತಾವಾದದತ್ತ ದೇಶದ ಗಮನ ಸೆಳೆದ ಘಟನೆಯಿದು.

ಪ್ರತ್ಯೇಕತಾವಾದಿಗಳಿಗೆ ಯಾವ ಸಾಮ್ರಾಜ್ಯಶಾಹಿಯಿಂದ ಎಷ್ಟು ಹಣ ಬಂತು?

ದೇಶದ ಹೆಸರು	ವರ್ಷ	ಪ್ರತ್ಯೇಕತಾವಾದಿಗಳಿಂದ ಬಂದ ಹಣ (ರೂ. ಗಳಲ್ಲಿ)	
ಬ್ರಿಟನ್	1989	1.50 ಲಕ್ಷ	ಮತ್ತು 2.31 ಲಕ್ಷ ಪೌಂಡು
	1990	3.00 ಲಕ್ಷ	+5 ಸಾವಿರ ಪೌಂಡು
ಕೆನಡಾ	1989	1.05 ಲಕ್ಷ	+25 ಸಾವಿರ ಡಾಲರ್
ಅಮೆರಿಕಾ	1989	29.40 ಲಕ್ಷ	
ಪ. ಜರ್ಮನಿ	1989	1.50 ಲಕ್ಷ	+20 ಸಾವಿರ ಡಾ. ಮಾರ್ಕ್ಸ್
ಆಸ್ಟ್ರೇಲಿಯಾ	1989	17.50 ಲಕ್ಷ	
ಹಾಂಗ್‌ಕಾಂಗ್	1989	0.90 ಲಕ್ಷ	

1 ಪೌಂಡು 33.66 ರೂ. 1 ಡಾಲರ್ 17.63 ರೂ. 1 ಡಾ.ಮಾ. 11.75 ರೂ.

ಕೃಪೆ: ಹಿಂದೂಸ್ತಾನ್ ಟೈಮ್ಸ್, ಸೆಪ್ಟೆಂಬರ್.

> ಜುಲೈ ಮತ್ತು ಆಗಸ್ಟ್ ಎರಡನೇ ತಿಂಗಳಲ್ಲಿ ಪಂಜಾಬಿನಲ್ಲಿ 767 ಪ್ರಾಣ ಹಾನಿಯಾಯಿತು. ಅದರಲ್ಲಿ 400 ಮಂದಿ ನಾಗರಿಕರು, 111 ಪೋಲೀಸರು ಹಾಗೂ 256 ಭಯೋತ್ಪಾದಕರು. ಆದರೆ ಮಾನ್ ಗುಂಪಿನ ಗುಪ್ತ ಮನವಿ ಯಲ್ಲಾಗಲೀ, ಅಮೆರಿಕನ್ ರಾಯಭಾರಿ ವಲಯದಲ್ಲಾಗಲಿ ಇದರ ಪ್ರಸ್ತಾಪವೂ ಇಲ್ಲ.

"ಹೆಮ್ಮೆಯಿಂದ ಸಿ.ಪಿ.ಐ(ಎಂ) ಸದಸ್ಯನಾದೆ"



ಕಳೆದ ಸಂಚಿಕೆಯಿಂದ)

1964ರ ಮೇ ಯಲ್ಲಿ ಬಾರತದ ಪ್ರಧಾನಿ, ಕಾಂಗ್ರೆಸ್ ಮುಂದಾಳು ಜವಹರಲಾಲ್ ನೆಹರು ಸತ್ತರು.

1964ರ ಏಪ್ರಿಲ್‌ನಲ್ಲಿ ಹಿಂದೆ ಭಾರತದಲ್ಲಿ ಬ್ರಿಟಿಷ್ ಆಡಳಿತ ಇದ್ದಾಗ ಎಸ್.ಎ. ಡಾಂಗೆ ಬ್ರಿಟಿಷ್ ಸರ್ಕಾರದ ಸೇವೆಯನ್ನು ಮಾಡುವುದಾಗಿ ಬರೆದ ಪತ್ರಗಳು ಬಹಿರಂಗವಾದುವು. 'ಡಾಂಗೆ ಈಗ ಕಮ್ಯುನಿಸ್ಟ್ ಆಗಿ ಉಳಿದಿಲ್ಲ'(Dange has cceased to be Communist) ಎಂದು ಪಿ. ಸುಂದರಯ್ಯನವರು ಕೊಟ್ಟ ಹೇಳಿಕೆ ಪತ್ರಿಕೆಗಳಲ್ಲಿ ಬಂದಿತು. ಏಪ್ರಿಲ್‌ನಲ್ಲಿ ಸಿಪಿಐ ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿ ಡಾಂಗೆ ಪತ್ರಗಳು ಚರ್ಚೆಗೆ ಬಂದು 32 ಸದಸ್ಯರು ಸಭಾತ್ಯಾಗ ಮಾಡಿದುದು, ಸಭಾತ್ಯಾಗದ ನಂತರ ಇ.ಎಂ.ಎಸ್., ಜ್ಯೋತಿಬಸು, ಭೂಪೇಶ್ ಗುಪ್ತ ಹೊಂದಾಣಿಕೆಗೆ ಪ್ರಯತ್ನ ಮಾಡಿದುದು, ಅನಂತರ ಸಭಾತ್ಯಾಗ ಮಾಡಿದ ಸದಸ್ಯರು ಸಿಪಿಐಯ ಏಳನೇ ಅಧಿವೇಶನವನ್ನು ಕರೆಯುವುದಕ್ಕೆ ಸಿದ್ಧತೆಗಳನ್ನು ಮಾಡಲು ಜೂನ್ ತಿಂಗಳಲ್ಲಿ ತೆನಾಲಿಯಲ್ಲಿ ಒಂದು ಸಮಾವೇಶ ಕರೆಯುವ ತೀರ್ಮಾನ ಪ್ರಕಟಿಸಿದ ಸುದ್ದಿಗಳನ್ನು ಓದಿ ನನಗೆ ಹೊಸ ಜೀವ ಬಂದಂತಾಯಿತು. ಕುತೂಹಲದಿಂದ ತೆನಾಲಿ ಸಮಾವೇಶದ ಫಲಿತಾಂಶವನ್ನು ಕಾದೆ.

ಏಪ್ರಿಲ್ ನಲ್ಲಿ ಧಾರವಾಡದಲ್ಲಿ ಗೆಳೆಯ ಗಂಗಣ್ಣನವರನ್ನು ಭೇಟಿಯಾದಾಗ ಅವರು ಇನ್ನೇನು ಸಿಪಿಐ ಒಡೆಯಿತು, ಮುಂದೆ ಸಿಪಿಐ ಸಮಾಧಿಯಾಗುತ್ತೆ ಎಂದರು. ನಾನು ಅವರ ಅಭಿಪ್ರಾಯವನ್ನು ಒಪ್ಪಲಿಲ್ಲ. ವರ್ಗ ಸಹಕಾರದ, ಪರಿಷ್ಕರಣವಾದದ ದಾರಿ ಹಿಡಿದಿರುವ ಮುಖಂಡತ್ವದ ವಿರುದ್ಧ ಹೋರಾಡಲು ಪಕ್ಷ ತಯಾರಾಗದಿದ್ದರೆ ಪಕ್ಷಕ್ಕೆ ಗೆದ್ದಲು ಹಿಡಿದು ಹೋಗುತ್ತೆ ಎಂದು ನಾನು ಹೇಳಿದೆ. 'ನೀವೇನು ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದಿರಾ?' ಎಂದು ಅವರು ಕೇಳಿದರು. 'ಈವರೆಗೆ ಸದಸ್ಯನಾಗಿರಲಿಲ್ಲ,. ಆದರೆ ಮುಂದೆ ಸದಸ್ಯನಾಗಬೇಕೇ, ಹೇಗೆ ಎನ್ನುವುದನ್ನು ಇನ್ನು ಒಂದು ವರ್ಷದಲ್ಲಿ ನಿರ್ಧರಿಸುತ್ತೇನೆ.' ಎಂದೆ.

ನೆಹರು ಸತ್ತನಂತರ ಕೆಲವು ದಿವಸ ಗುಲ್ಜಾರಿಲಾಲ್ ನಂದಾ ಉಸ್ತುವಾರಿ ಪ್ರಧಾನಿಯಾಗಿ, ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಪ್ರಧಾನಿಯಾದರು.

ಸಿ.ನಂಜುಂಡಪ್ಪ

ಈ ವರ್ಷ ನಾನು ಪರೀಕ್ಷೆಗೆ ಕೂತು ತೇರ್ಗಡೆ ಹೊಂದಿದೆ. ಕಲ್ಕತ್ತದಲ್ಲಿ ನಡೆದ ಏಳನೆಯ ಅಧಿವೇಶನದ ಸುದ್ದಿಯನ್ನು ಓದಿದೆ. ಆದರೆ ಅದರ ದಸ್ತಾವೇಜುಗಳು ನನಗೆ ಸಿಕ್ಕಿದ್ದು 1965 ರಲ್ಲಿ.

1964 ರ ಏಪ್ರಿಲಿನ ನಂತರ ಡಾಂಗೆ ಮತ್ತು ಸಂಗಡಿಗರು ತೆನಾಲಿ ಸಮಾವೇಶವನ್ನು ನಡೆಸಲು ತೀರ್ಮಾನಿಸಿದ ಮುಖಂಡರನ್ನು ರಾಷ್ಟ್ರದ್ರೋಹಿಗಳೆಂದೂ, ಚೀನದ ಏಜೆಂಟರೆಂದೂ ದಿನನಿತ್ಯ ಬಯ್ಯಲಾರಂಭಿಸಿದರು ಚೀನದ ಕಮ್ಯುನಿಸ್ಟ್ ಪಕ್ಷದ ಆದೇಶದ ಮೇರೆಗೆ ಸಿ.ಪಿ.ಐ. ಯನ್ನು ಒಡೆದಿದ್ದಾರೆಂದೂ ಅಪಪ್ರಚಾರ ಮಾಡಿದರು.

ನವದೆಹಲಿಯಲ್ಲಿರುವ ಅಮೆರಿಕ ಸಂಯುಕ್ತ ಸಂಸ್ಥಾನಗಳ ರಾಯಭಾರ ಕಛೇರಿಯ ಅಧಿಕಾರಿಗಳು ಭಾರತ ಸರ್ಕಾರದ ಗೃಹ ಇಲಾಖೆಯ ಅಧಿಕಾರಿಗಳನ್ನು ಭೇಟಿಮಾಡಿ ಎಡ ಕಮ್ಯುನಿಸ್ಟರು ಅಪಾಯಕಾರಿಗಳೆಂದೂ, ಚೀನದ ಏಜೆಂಟರೆಂದೂ, ಅವರನ್ನು ಮಟ್ಟಹಾಕಲು ತೀವ್ರ ಕ್ರಮತೆಗೆದು ಕೊಳ್ಳಬೇಕೆಂದೂ ಒತ್ತಾಯಿಸಿದರೆಂದು ಪತ್ರಿಕೆಗಳಲ್ಲಿವರದಿಯಾಯಿತು.

ಚಂದು ಕುಟ್ಟಿ ಮೊದಲಾದ ಮುಖಂಡರ ಬಂಧನದ ಸುದ್ದಿಗಳಿದ್ದುವಲ್ಲದೆ, 'ಐಕ್ಯರಂಗ' ಪತ್ರಿಕೆಯ ಮುದ್ರಕ ವಸು ಕುಮಾರ್ ಎಂಬ ಮುದ್ರಣಕಾರರನ್ನು ಭಾರತ ರಕ್ಷಣಾ ಕಾಯಿದೆಯನ್ವಯ ಬಂಧಿಸಿದ ಸುದ್ದಿಯಿದ್ದಿತು.

ಕಾಂಗ್ರೆಸ್ ಸರ್ಕಾರದ ಈ ಆಕ್ರಮಣವನ್ನು ನಾನು ಉಗ್ರವಾಗಿ ವಿರೋಧಿಸಿದರೂ ಸಹ, ಕಾಂಗ್ರೆಸ್ ಸರ್ಕಾರವನ್ನು, ಸಾಮ್ರಾಜ್ಯಶಾಹಿಗಳನ್ನು ವಿರೋಧಿಸಿದ್ದರಿಂದ ಈಆಕ್ರಮಣ ಬಂದಿದೆ, ಇದು ಒಂದು ಆರೋಗ್ಯಕರವಾದ ಬೆಳವಣಿಗೆ ಎಂದುನನಗೆನಿಸಿತು.

1964 ರ ಪ್ರಾರಂಭದಲ್ಲಿ ಒಂದು ವಿಚಿತ್ರವಾದ ಕಳ್ಳತನವಾಯಿತು. ನಾನು ಹುಬ್ಬಳ್ಳಿಯ ಹೊಸೂರಿನ ಕೆ.ಎಸ್.ಆರ್. ಟಿ.ಸಿ.ಯ ಎದುರಿಗಿರುವ ಒಂದು ಚಾಳಿನಲ್ಲಿ ವಾಸಿಸುತ್ತಿದ್ದೆ. ಒಂದು ದಿನ ಸಂಜೆ ನಾನು ಕೆಲಸ ಮಾಡುತ್ತಿದ್ದ ಆಫೀಸಿನಿಂದ ಬಂದು ರೂಮಿನ ಬಾಗಿಲು ತೆರೆದಾಗ ಒಳಗಿದ್ದ ಒಂದು ಟ್ರಂಕಿನ ಬಾಗಿಲು ತೆರೆದು ಬಟ್ಟೆಗಳು ಕದಡಿದ್ದುದು ಕಂಡು ಬಂದಿತು. ಆದರೆ ರೂಮಿನ ಬಾಗಿಲಿಗೆ ಹಾಕಿದ್ದ ಬೀಗವನ್ನು ತೆರೆದಿರಲಿಲ್ಲ, ಅಥವಾ ಒಡೆದಿರಲಿಲ್ಲ. ನನಗೆ ಗಾಬರಿಯಾಯಿತು. ಬಟ್ಟೆಗಳಾಗಲೀ ಬೇರೆನೂ ಹೋಗಿರುವಂತೆ ಕಾಣಲಿಲ್ಲ. ಆದರೆ ಟ್ರಂಕಿನಲ್ಲಿದ್ದ ನನ್ನ ಫೋಟೋ ಅಲ್ಬಮ್‌ಗಳು, ಎಲ್ಲಾ ಫೋಟೋಗಳು ಮಾಯವಾಗಿದ್ದುವು.

1964 ರ ಆಗಸ್ಟಿನಲ್ಲಿ ಗೆಳೆಯ ಸುಂದರನಿಗೆ ಕೌಟುಂಬಿಕ ವಿಚಾರದಲ್ಲಿ ಸಹಾಯ ಮಾಡಲು ತಮಿಳು ನಾಡಿನ ಸೇಲಂ ಜಿಲ್ಲೆಯ ಸೇರವಾಯ್‌ಗೆ ಮತ್ತು ಅಲ್ಲಿಂದ ಈರೋಡಿಗೆ ಹೋಗಬೇಕಾಯಿತು. ಇದಕ್ಕಾಗಿ ಬೆಂಗಳೂರಿಗೆ ಬಂದಾಗ ಆಕಸ್ಮಿಕವಾಗಿ ವೆಂಕಟರಾಜಪಾನಸೆಯವರ ಭೇಟಿಯಾಯಿತು. ಸಿಪಿಐ ಒಡಕಿನ ಬಗ್ಗೆ ಅವರೊಂದಿಗೆ ಮಾತನಾಡಿದೆ. ಭಾರತದ ಕ್ರಾಂತಿಯ ಮೂಲಭೂತ ವಿಚಾರಗಳ ಬಗ್ಗೆ ಇರುವ ಭಿನ್ನಾಭಿಪ್ರಾಯಗಳ ಕುರಿತು ಅವರು ಏನನ್ನೂ ಹೇಳಲಿಲ್ಲ. ಎರಡು ಕಡೆಯವರದೂ ತಪ್ಪಿದೆಯೆಂದಷ್ಟೇ ಹೇಳಿದರು. ನನಗೆ ಸಮಾಧಾನವಾಗಲಿಲ್ಲ. ಆದರೆ ಸಮಯವೂ ಇರಲಿಲ್ಲ.

1965 ರ ಪ್ರಾರಂಭದಲ್ಲಿ ನಾವು ಮೂವರು ಹುಬ್ಬಳ್ಳಿಯಲ್ಲಿದ್ದ ಸಿಪಿಐ ಮುಖಂಡರನ್ನು ಭೇಟಿ ಮಾಡಿದೆವು. ಪಕ್ಷವು ಒಡೆದಿರುವುದರಿಂದ ಅವರು ಯಾವ ಕಡೆ ಮತ್ತು ಯಾಕೆ ಎಂದು ಕೇಳಿದೆವು. 'ಎಡ' ಎಂದು ಹೇಳಿದರೆ ಪೋಲೀಸರು ನಮ್ಮನ್ನು ಬಂಧಿಸಿ ಜೇಲಿನಲ್ಲಿಡುತ್ತಾರೆ. ಜನರ ಸಂಪರ್ಕ ಹೋಗಿ ಬಿಡುತ್ತದೆ. ಸುಮ್ಮನೆ ಜೇಲಿನಲ್ಲಿ ಕೂತು ಏನು ಮಾಡುವುದು? ಎಂದು ಹೇಳಿ ಅವರು ಬಲ ಕಮ್ಯುನಿಸ್ಟ್ ಪಕ್ಷದಲ್ಲಿರುವುದಾಗಿ ಹೇಳಿದರು.

1965 ರ ಏಪ್ರಿಲಿನಲ್ಲಿ ಕೇರಳದ ವಿಧಾನ ಸಭೆಗೆ ನಡೆದ ಚುನಾವಣೆಯ ಮತದಾನದ ಮೂರುದಿವಸಗಳ ಮೊದಲು ಕಾಂಗ್ರೆಸ್ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಆಕಾಶವಾಣಿಯಲ್ಲಿ ಭಾಷಣಮಾಡುತ್ತಾ "ಕೇರಳದ ಮತದಾರರು ಜಾಣರು, ಬುದ್ಧಿವಂತರು. ಅವರು ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂಬುದನ್ನುಗುರುತಿಸುತ್ತಾರೆ. ಆದ್ದರಿಂದ ಅವರು ವಿಚಾರ ಮಾಡಿ ತಮಗೆ ಒಳ್ಳೆಯದು ಎನಿಸಿದ್ದಕ್ಕೆ ಮತ ಕೊಡುತ್ತಾರೆ" ಎಂದು ಹೇಳಿದರು. ಚುನಾವಣಾ ಫಲಿತಾಂಶ ಬಂದಿತು. ಕಾಂಗ್ರೆಸ್ ಪಕ್ಷ ಸೋತು ಹೋಯಿತು. ಸಿಪಿಐ(ಎಂ) ಪಕ್ಷದವರನ್ನು ರಾಷ್ಟ್ರದ್ರೋಹಿಗಳು, ಚೀನದ ಏಜೆಂಟರು ಎಂದು ಆಪಾದಿಸುತ್ತಿದ್ದ ಡಾಂಗೆಯವರ ಕಮ್ಯುನಿಸ್ಟ್ ಪಕ್ಷವು ತಾನು ಸ್ಪರ್ಧಿಸಿದ್ದ ಸ್ಥಾನಗಳ ಪೈಕಿ 50ಕ್ಕೂ ಹೆಚ್ಚು ಸ್ಥಾನಗಳಲ್ಲಿ ಠೇವಣಿಯನ್ನು ಕಳೆದುಕೊಂಡು ಒಂದು ದಾಖಲೆಯನ್ನೇ ಸ್ಥಾಪಿಸಿತು. ಎರಡು ಕ್ಷೇತ್ರಗಳಲ್ಲಿ ಮಾತ್ರ ಜಯಶಾಲಿಯಾಯಿತು. ಡಾಂಗೆ ಪಕ್ಷದ, ಕಾಂಗ್ರೆಸ್ಸಿನ ಮತ್ತು ಪ್ರತಿಗಾಮಿಗಳ ಆಕ್ರಮಣಕ್ಕೆ ಗುರಿಯಾಗಿದ್ದ ಸಿಪಿಐ(ಎಂ) 39 ಕ್ಷೇತ್ರಗಳಲ್ಲಿ ವಿಜಯ ಪಡೆದು ಏಕೈಕ ದೊಡ್ಡ ಪಕ್ಷವಾಯಿತು. ಗೆದ್ದವರ ಪೈಕಿ ಮುಕ್ಕಾಲು ಪಾಲು ಮಂದಿ ಭಾರತ ರಕ್ಷಣಾ ಕಾಯಿದೆಯನ್ವಯ ಬಂಧಿಸಲ್ಪಟ್ಟು ಜೇಲಿನಲ್ಲಿದ್ದವರು. ಅವರು ಚುನಾವಣಾ ಪ್ರಚಾರಕ್ಕೆ ಸಹ ಹೋಗುವುದಕ್ಕೆ ಸಾಧ್ಯವಾಗಿರಲಿಲ್ಲ.

ಬುದ್ಧಿವಂತ ಕೇರಳದ ಮತದಾರರು ಸರಿಯಾಗಿಯೇ ಮತ ನೀಡಿದ್ದರು. ವರ್ಗ ಹೋರಾಟ ವರ್ಗ ಸಹಕಾರಗಳ ನಡುವೆ, ಮಾರ್ಕ್ಸ್‌ವಾದ ಲೆನಿನವಾದ ಮತ್ತು ಪರಿಷ್ಕರಣ ವಾದಗಳ ನಡುವೆ ಅವರು ಕೊಟ್ಟ ತೀರ್ಪು ಸ್ಪಷ್ಟವಾಗಿದ್ದಿತು. ನಿರ್ಣಾಯಕವಾಗಿದ್ದಿತು. ಕಾರ್ಮಿಕವರ್ಗದ ಪಕ್ಷ ಸಿಪಿಐ(ಎಂ) ಮತ್ತು ಶೋಷಕ ವರ್ಗಗಳ ಪಕ್ಷ ಕಾಂಗ್ರೆಸ್ಸಿನ ನಡುವೆ ಅವರ ತೀರ್ಪು ನಿಚ್ಚಳವಾಗಿದ್ದಿತು.

ಚುನಾವಣಾ ಫಲಿತಾಂಶ ಬಂದ ಹಲವು ವಾರಗಳ ನಂತರ ಒಂದು ಸಂಜೆ ಸಿ.ಜಿ.ಪಾಟೀಲರು ನನ್ನ ಕೊಠಡಿಗೆ ಬಂದರು. ಅವರೊಂದಿಗೆ ಇನ್ನೊಬ್ಬ ಹಿರಿಯ ವ್ಯಕ್ತಿ ಇದ್ದರು. ಪಾಟೀಲರು ಅವರ ಪರಿಚಯಮಾಡಿಸಿದೆವು. ಅವರು ಕೃಷ್ಣಸ್ವಾಮಿ. ಕಾಂಗ್ರೆಸ್ ಸರ್ಕಾರವು ಹಲವು ಮುಖಂಡರನ್ನು ಬಂಧಿಸಿ ಜೇಲಿನಲ್ಲಿಟ್ಟಿದ್ದಿತು. ಆದ್ದರಿಂದ ಕೃಷ್ಣಸ್ವಾಮಿಯವರು ತಮ್ಮ ಚಲನವಲನಗಳ ಬಗ್ಗೆ ಜಾಗರೂಕರಾಗಿದ್ದರು. ಬಂಧಿಸಲ್ಪಡದೆ ಹೊರಗೆ ಉಳಿದಿರುವವರನ್ನು ಭೇಟಿ ಮಾಡಿ ಮಾತನಾಡಿಸಿಕೊಂಡು ಹೋಗಲು ಅವರು ಬೇರೆಬೇರೆ ಊರುಗಳಿಗೆ ಹೋಗುತ್ತಿದ್ದರು. ಎರಡನೆಯ ಬಾರಿ ಅವರು ಬರುವಾಗ ಹರಿಹರದ ಒಬ್ಬ ಸಂಗಾತಿಯ ಪರಿಚಯವಾಗಿ ಅವರಿಂದ "ಡಾಂಗೆ ಅನ್‌ಮಾಸ್ಡ್", ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ, " ಎ ಕಾಂಟ್ರ ಬ್ಯುಷನ್..." "ಟುದಿ ಐಡಿಯಲಾಜಿಕಲ್ ಡಿಬೇಟ್", ಎಂಬ ಪುಸ್ತಕಗಳು "ಪೀಪಲ್ಸ್ ಡೆಮೋಕ್ರಸಿ', "ಐಕ್ಯರಂಗ" ಪತ್ರಿಕೆಗಳು ನನಗೆ ಸಿಕ್ಕಿದವು. ನಾನು ಅವುಗಳನ್ನು ಓದಿದೆ. ಕಾರ್ಯಕ್ರಮವು ಬಹುತೇಕ ಸರಿಯಾಗಿದ್ದಿತು."ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದಕ್ಕೆ "ಸಂಬಂಧಿಸಿದ ಕೊನೆಯ ಭಾಗವನ್ನು ಓದಿದಾಗ ನನಗೆ ಸಮಾಧಾನವಾಯಿತು. ಅದನ್ನು ಅಂಗೀಕರಿಸಿದೆ. ಅದನ್ನು ಓದಿದ ನಂತರ ಅದರ ಆಧಾರದ ಮೇಲೆ ಇನ್ನು ಮೂವರನ್ನು ಸಿದ್ಧ ಪಡಿಸಿದೆ.

ಮೂರನೆಯ ಬಾರಿ ನನ್ನನ್ನು ಭೇಟಿ ಮಾಡಿದಾಗ ಕೃಷ್ಣಸ್ವಾಮಿಯವರು ನನಗೆ ಪಕ್ಷದ ಸದಸ್ಯನಾಗಲು ಹೇಳಿದರು. ನಾನು 1965 ರಲ್ಲಿ ಹೆಮ್ಮೆಯಿಂದ ಸಿ.ಪಿ.ಐ(ಎಂ) ಸದಸ್ಯನಾದೆ. ಮುಂದಿನ ವರ್ಷ ಒಂದು ಶಾಖೆಯ ಕಾರ್ಯದರ್ಶಿಯೂ ಆದೆ.

> ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಸಿ.ನಂಜುಂಡಪ್ಪ ಪಕ್ಷದತ್ತ ಆಕರ್ಷಿತರಾದ ಬಗ್ಗೆ ಬರೆಯುತ್ತಾ ನೀಡಿದ 1950-60 ರ ದಶಕದ ರಾಜಕೀಯ ಪರಿಸರದ ಬಗ್ಗೆ ಕಳೆದ ಎರಡು ಸಂಚಿಕೆಗಳಲ್ಲಿ ಓದಿರುವಿರಿ. "ನಮ್ಮ ದೇಶದ ಜನರ ಏಳಿಗೆಗಾಗಿ ದುಡಿಯಬೇಕು. ಸೋವಿಯತ್ ಒಕ್ಕೂಟದಲ್ಲಿರುವಂತೆ, ಚೀನದಲ್ಲಿರುವಂತೆ ಭಾರತದಲ್ಲಿಯೂ ಸಮಸ್ತ ಜನರೂ ಸುಖವಾಗಿರಲು ಸಾಧ್ಯಮಾಡುವ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ದುಡಿಯಬೇಕು" ಎಂದು 1958 ರಲ್ಲಿ ವಿಧಾರ ಮಾಡಿದ್ದ ಸಿ.ಎನ್. 1965 ರಲ್ಲಿ ಸಿ.ಪಿ.ಐ (ಎಂ) ಸದಸ್ಯರಾದರು. ಈ ನಡುವಿನ ಕಾಲಘಟ್ಟದ ಬೆಳವಣಿಗೆಗಳ ಸ್ವಲ್ಪ ಪರಿಚಯ ಹಿಂದಿನ ಲೇಖನದಲ್ಲಿ ನಿಮಗೆ ದೊರೆತಿದೆ. ಉಳಿದ ಭಾಗ ಇಲ್ಲಿದೆ.

ಏನು ಜಾದು ಮಾಡಿದಿರಯ್ಯಾ ನೀವು ಕಮ್ಯುನಿಸ್ಟರು

1964 ರ ಡಿಸೆಂಬರ್ 31 ರಂದು ಬೆಳಗ್ಗೆ ಹೊಸೂರಿನ ಜನತಾ ಹೋಟೆಲಿನಲ್ಲಿ ಕೂತು ಕಾಫಿ ಕುಡಿಯುತ್ತಿದ್ದಾಗ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯ ಮೊದಲ ಪುಟದಲ್ಲಿ ಈ ಕೊನೆಯಿಂದ ಆ ಕೊನೆಯವರೆಗೆ "ಎಡ ಕಮ್ಯುನಿಸ್ಟರು ಚೀನದ ಪಂಚಮದಳ, ದೇಶವ್ಯಾಪಿ ಬಂಧನ ಸತ್ರ" ಎಂದು ಪ್ರಕಟಿಸಿದ್ದ ಸುದ್ದಿಯನ್ನು ಓದಿದೆ. "Pre - dawn swoop of left Reds" ಎಂಬ ಅಷ್ಟೇ ದೊಡ್ಡ ತಲೆಬರೆಹವನ್ನು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಓದಿದೆ. ಒಂದು ಸಾವಿರಕ್ಕಿಂತಲೂ ಹೆಚ್ಚು ಮುಖಂಡರನ್ನು ಬಂಧಿಸಿರುವ ಸುದ್ದಿಯ ಜತೆಗೆ, ಇ.ಎಂ.ಎಸ್. ಮತ್ತು ಜ್ಯೋತಿಬಸುರನ್ನು ಬಂಧಿಸಿಲ್ಲವೆಂಬ ಸುದ್ದಿಯೂ ಇದ್ದಿತು.

ರಾಜ್ಯದಲ್ಲಿ ಎನ್.ಎಲ್. ಉಪಾಧ್ಯಾಯ, ಎಸ್. ಸೂರ್ಯ ನಾರಾಯಣರಾವ್, ಎನ್.ಕೆ. ಉಪಾಧ್ಯಾಯ, ಗಂಗಾಧರ ನಮೋಶಿ, ಎಂ.ಎನ್. ಉಗ್ರಪ್ಪ, ಎ. ಕೃಷ್ಣ ಶೆಟ್ಟಿ, ಪಿ. ರಾಮಚಂದ್ರರಾವ್, ಕೆ.

ಪುಟ 4 ರಿಂದ

ನೆನಪಿಸಿಕೊಳ್ಳಬೇಕು. ಅದರ ಹಿನ್ನೆಲೆಯನ್ನು ಅರಿತುಕೊಳ್ಳಬೇಕು. ಆ ನಂತರ ಪರಿಸ್ಥಿತಿ ಸುಧಾರಿಸುವ ಬದಲು ಇನ್ನಷ್ಟು ಹದಗೆಟ್ಟಿದೆ.

ಭಾರತ ಸರ್ಕಾರ ಇಂತಹ ದುಷ್ಟ ಚಟುವಟಿಕೆಗಳ ವಿರುದ್ಧ ಸಾಮ್ರಾಜ್ಯಶಾಹಿಗಳ ಇಂತಹ ಹಸ್ತ ಕ್ಷೇಪಗಳ ವಿರುದ್ಧ ದೃಢ ನಿಲುವು ತಳೆಯಲು ಇನ್ನೂ ಹಿಂಜರಿಯುತ್ತಿರುವುದು ಖೇದಕರ.

ಅಮೆರಿಕನ್ ರಾಯಭಾರಿಗೆ ಮಾನ್‌ಗುಂಪು ಅರ್ಪಿಸಿರುವ ಗುಪ್ತ ಮನವಿ ಮತ್ತೊಮ್ಮೆ ಪಂಜಾಬ್ ಸಮಸ್ಯೆಯಲ್ಲಿ ದೇಶದ ಸಮಗ್ರತೆಗೆ ಬಂದಿರುವ ಅಪಾಯದಲ್ಲಿ ಸಾಮ್ರಾಜ್ಯಶಾಹಿಗಳ ಪಾತ್ರದತ್ತ ದೇಶದ ಗಮನ ಸೆಳೆದಿದೆ. ದೇಶದ ಒಳಗಿನ ಹಾಗೂ ಹೊರಗಿನ ಶತ್ರುಗಳ ವಿರುದ್ಧ ಎಲ್ಲಾ ದೇಶ ಪ್ರೇಮಿ ಶಕ್ತಿಗಳ ಐಕ್ಯತೆ ಈಗಿನ ತುರ್ತು

ಮಂಡಲ್ ಪಂಚಾಯ್ತಿ ಮುತ್ತಿಗೆ

ಬಳ್ಳಾರಿ ತಾಲೂಕಿನ ಪರಮದೇವನಹಳ್ಳಿ ಮಂಡಲ ಪಂಚಾಯ್ತಿಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಗೋಡೆ ಹಾಳು ಗ್ರಾಮದ 100 ಜನರು ಕಾಲ ಜಾಥಾದ ಮೂಲಕ ಬಂದು ಮುತ್ತಿಗೆ ಹಾಕಿದರು. ಹೆಣಗಳನ್ನು ಊಳಲು ಸ್ಮಶಾನಕ್ಕಾಗಿ ಭೂಮಿ, 70 ಜನರಿಗೆ ವಸತಿಗಾಗಿ ಜಾಗ, ಗುಡಿಸಲು ವಾಸಿಗಳಿಗೆ ಪಟ್ಟಾ, ಶೌಚಾಲಯಗಳು ಹಾಗೂ ಬಂಡಿ ದೊಡ್ಡಿ ಯನ್ನು ನಿರ್ಮಿಸಬೇಕೆಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ. ಮನವಿ ಪತ್ರ ಪಡೆದ ಉಪ ಪ್ರಧಾನರು. ಹಳ್ಳಿಯಲ್ಲಿ ಜಾಗಗಾಗಿ ಖುದ್ದು ಭೇಟಿ ನೀಡಿ ಪರಿಶೀಲಿಸುವುದಾಗಿ ತಿಳಿಸಿದರು. ಶೌಚಾಲಯಗಳನ್ನು ನಿರ್ಮಿಸಲು ಕೂಡಲೇ ಕ್ರಮ ವಹಿಸುವುದಾಗಿ ತಿಳಿಸಿದರು. ಪಟ್ಟಾ ನೀಡಲು ತಹಸಿಲ್ದಾರರಿಗೆ ಸೂಚಿಸಲಾಗುವುದೆಂದು ಹೇಳಿದರು.

ಕಾಲೂ ಜಾಥಾದ ನೇತೃತ್ವವನ್ನೂ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜ ಹಾಗೂ ಗೋಡೆ ಹಾಳು ಗ್ರಾಮದ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಜಿ. ವೆಂಕಟರೆಡ್ಡಿ, ಕಾರ್ಯದರ್ಶಿಗಳಾದ ರಾಜಶೇಖರ್‌ಗೌಡ ಹಾಗೂ ನಾಗರಾಜ ಇವರು ವಹಿಸಿದ್ದರು.

"ಕಮ್ಯುನಿಸಂ ಚಳುವಳಿ ನನ್ನನ್ನು ಸೆಳೆದ ಬಗೆ"

ದೇಶವನ್ನು ಕ್ರಾಂತಿಯತ್ತ ನಡೆಸುವ ಮಹತ್ವದ ಕೆಲಸಕ್ಕಾಗಿ ನಮ್ಮ ಸಂಗಾತಿಗಳು ಕಮ್ಯುನಿಸ್ಟ್ ಚಳುವಳಿಯತ್ತ 'ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ಸೆಳೆಯಲ್ಪಟ್ಟಿದ್ದಾರೆ. ಒಬ್ಬೊಬ್ಬ ಸಂಗಾತಿಯದು ಒಂದೊಂದು ವಿಶಿಷ್ಟ ಅನುಭವ. ಕರ್ನಾಟಕದ ಹಿರಿಯ ಕಮ್ಯುನಿಸ್ಟರಾದ ಕಾಂ ಎನ್ನೆಯವರು ತಾನು ಕಮ್ಯುನಿಸ್ಟನಾದ ಬಗೆಯನ್ನು ನಿಮಗೆ ತಿಳಿಸಿದ್ದಾರೆ. ಇನ್ನೊಬ್ಬ ಹಿರಿಯ ಮುಂದಾಳು. ಕಾಂ. ಸೂರಿಯವರು ಹೇಗೆ ಕಮ್ಯುನಿಸ್ಟ್ ಚಳುವಳಿಯತ್ತ ಸೆಳೆಯಲ್ಪಟ್ಟರು ಎಂಬುದನ್ನು ಓದುತ್ತಿರುವಿರಿ. ಮುಂದಿನ ಸಂಚಿಕೆಗಳಲ್ಲಿ ಕೇಂದ್ರ ಸಮಿತಿ ಸದಸ್ಯ ಮತ್ತು ರಾಜ್ಯ ಕಾರ್ಯದರ್ಶಿ ಕಾಂ.ಪಿ.ಆರ್. ಇನ್ನೊಬ್ಬ ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಕಾರ್ಮಿಕ ಮುಂದಾಳು ಕಾಂ.ವಿ.ಜೆ.ಕೆ. ಮತ್ತಿತರ ಮುಂದಾಳುಗಳು ಈ ಅಂಕಣದಲ್ಲಿ ಬರೆಯಲಿದ್ದಾರೆ.

ನೀವೂ ಕಮ್ಯುನಿಸ್ಟ್ ಚಳುವಳಿಯತ್ತ ಹಾಕಿದ ಹೆಜ್ಜೆಯನ್ನು 2-3 ಫುಲ್ ಸ್ಕೇಪ್ ಪುಟಗಳಲ್ಲಿ ಬರೆದು ಕಳುಹಿಸಿ.

ಉತ್ತಮವಾದುದನ್ನು ಆರಿಸಿ ಪ್ರಕಟಿಸಲಾಗುವುದು.

ಸೂಚನೆ: ಬರೆಯಲು ಸಾಧ್ಯವಿಲ್ಲದ ಹಿರಿಯ ಕಿರಿಯ ಸಂಗಾತಿಗಳ ದೊರೆತ ಅನುಭವವನ್ನು ಬರೆಯಬಲ್ಲ ಸಂಗಾತಿಗಳು ಬರೆದು ಕಳುಹಿಸಬಹುದು. ಅದಕ್ಕೆ ಈ ವಿಶೇಷ ಪ್ರಯತ್ನಕ್ಕಾಗಿ 3 ತಿಂಗಳೊಳಗೆ ತಿಂಗಳ ಬರಹಗಳನ್ನು ಕಳುಹಿಸಬೇಕಾಗಿ ಕೇಳಿಕೊಳ್ಳಲಾಗುವುದು.

ಕಾಂಗ್ರೆ ಸಂಸ್ಕೃತಿಯನ್ನು ಸಾಬೀತು ಮಾಡಿದ 'ಸಜ್ಜನ'

1984ರ ಅಕ್ಟೋಬರ್ ನವೆಂಬರ್ ತಿಂಗಳುಗಳು ಭಾರತದ ಇತಿಹಾಸದಲ್ಲಿ ಒಂದು ಕರಾಳ ಅವಧಿ. ಆಗ ಭಾರತದ ಪ್ರಧಾನಮಂತ್ರಿ ಆಗಿದ್ದ ಇಂದಿರಾಗಾಂಧಿಯವರು ಸಾಮ್ರಾಜ್ಯಶಾಹಿ ಬೆಂಬಲಿತ ಸಿಖ್ ಭಯೋತ್ಪಾದಕರ ಗುಂಡಿಗೆ ಬಲಿಯಾದರು. ಈ ದುರಂತ ಅಷ್ಟಕ್ಕೇ ತಣ್ಣಗಾಗಲಿಲ್ಲ. ಒಂದು ರೀತಿಯಲ್ಲಿ ಅದಕ್ಕಿಂತಲೂ ಭೀಭತ್ಸವಾದ ಕ್ರೂರ ಘಟನೆಗಳು ಇಂದಿರಾ ಕೊಲೆಯ ಬೆನ್ನಲ್ಲೇ ಜರುಗಿದವು.

ಯಾವುದೋ ಕೆಲವು ತಲೆತಿರುಕ ಸಿಖ್‌ರು ನಡೆಸಿದ ಕೊಲೆ ಪ್ರಕರಣವನ್ನು ಕೆಲವು ಶಕ್ತಿಗಳು ಸಿಖ್‌ರ ವಿರುದ್ಧ ಬಳಸಲು ಪ್ರಯತ್ನಿಸಿದವು. ದೇಶಾದ್ಯಂತ ಸಿಖ್ ವಿರೋಧಿ ಚಟುವಟಿಕೆ ನಡೆದವು. ಹಲವರು ಸತ್ತರು. ಹಲವರು ಗಾಯಗೊಂಡರು. ಈ ಸರಣಿಯಲ್ಲಿ ನಡೆದಂಥ ಅತ್ಯಂತ ಹೇಯಕೃತ್ಯವೆಂದರೆ ರಾಜಧಾನಿ ದಿಲ್ಲಿಯಲ್ಲಿ ಮಹಿಳೆ ಮಕ್ಕಳು ಸೇರಿದಂತೆ ಸುಮಾರು 4000 ಸಿಖ್‌ರ ನರಮೇಧ. ಮನೆಗಳ ವಿನಾಶ.

ಈ ಲೇಖಕನಿಗೆ ಇನ್ನೂ ನೆನಪಿದೆ. ಇಂದಿರಾ ಕೊಲೆಯಾದ ಸಂದರ್ಭದಲ್ಲಿ ಹೊನ್ನಾವರದಲ್ಲಿದ್ದಾಗ ಪ್ರಧಾನಿ ಹತ್ಯೆ ಖಂಡಿಸಲು ಅಲ್ಲಿ ನಡೆದ ಸಭೆಯಲ್ಲಿ ಮಾತನಾಡಿದವರ ಮುಖ್ಯ ಗುರಿ ಮುಗ್ಧ ಸಿಖ್ ಜನರು. ಕಂಡಲ್ಲಿ ಅವರನ್ನು ಚಚ್ಚಿರಿ ಎನ್ನುವುದು ಅವರ ಕರೆಯಾಗಿತ್ತು: ಹೀಗೆ ಇಡೀ ದೇಶದಲ್ಲಿ ನಡೆದ ಸಿಖ್ ವಿರೋಧಿ ಹಲ್ಲೆ ನರಹತ್ಯೆ ದುಷ್ಕೃತ್ಯಗಳಿಗೆ ನೇತೃತ್ವ ನೀಡಿದವರು ಮತ್ತಾರೂ ಅಲ್ಲ.

ದೇಶದೊಳಗೆ

ಸ್ವತಃ ಕಾಂಗ್ರೆಸ್(ಐ)ನ ಹಲವಾರು ಉನ್ನತ ನಾಯಕರು.

ಈ ರೀತಿ ನರಹತ್ಯೆ ನಡೆಸಿದ ಜನರನ್ನು ಶಿಕ್ಷಿಸಬೇಕೆಂಬ ಜನರ ಒತ್ತಾಯಕ್ಕೆ ಅಷ್ಟಾಗಿ ಮನ್ನಣೆ ದೊರೆತಿರಲಿಲ್ಲ. ಯಾಕೆಂದರೆ ಇಂದಿರಾ ಪುತ್ರ ರಾಜೀವ ಪ್ರಧಾನಿ ಆಗಿ ಆಯ್ಕೆಯಾದರು. ಮತ್ತು ಅನಂತರ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಅನುಕಂಪದ ಅಲೆಯೂ ಸೇರಿ ಅಭೂತಪೂರ್ವ ಬಹುಮತಗಳಿಸಿ ಕಾಂಗ್ರೆಸ್ (ಐ) ಗೆದ್ದು ರಾಜೀವ್ ಗದ್ದುಗೆ ಅಲಂಕರಿಸಿದರು.

ಈಗ ರಾಷ್ಟ್ರೀಯ ರಂಗ ಸರಕಾರ ಅಧಿಕಾರಕ್ಕೆ ಬಂದ ಸುಮಾರು ಮುಕ್ಕಾಲು ವರ್ಷದ ಮೇಲೆ ಈ ದುರ್ಘಟನೆಯನ್ನು ನೆನಪಿಗೆ ತರುವ ಪ್ರಸಂಗ ನಡೆದಿದೆ.

ಸೆಪ್ಟೆಂಬರ್ 11 ರಂದು ಸಿ.ಬಿ.ಐ. ಅಧಿಕಾರಿಗಳು 1984 ರ ನವೆಂಬರ್ ಗಲಭೆಗಳ ಪ್ರಧಾನ ಆರೋಪಿಗಳಲ್ಲಿ ಒಬ್ಬ ಎನ್ನಲಾದ ಕಾಂಗ್ರೆಸ್(ಐ) ನ ಮಾಜಿ ಸಂಸತ್ ಸದಸ್ಯ ಸಜ್ಜನ್ ಕುಮಾರ್‌ರನ್ನು ಬಂಧಿಸಲು ಪ್ರಯತ್ನಿಸಿದರು. ಸುದ್ದಿ ತಿಳಿದ ಸಜ್ಜನ್ ಬೆಂಬಲಿಗರು ಅವರ ಮನೆಯ ಸುತ್ತ ನೆರೆದು ಸಿ.ಬಿ.ಐ. ಅಧಿಕಾರಿಗಳನ್ನು ಬಹಳಷ್ಟು ಹೊತ್ತು ಸತಾಯಿಸಿದರು. ದೊಂಬಿ-ಗಲಾಟೆ ಮಾಡಿದರು. ತಪಿತಸ್ಥರ ರಕ್ಷಣೆಗೆ ಏನೂ ಮಾಡಲು ಸಿದ್ಧ ಎಂಬ ಕಾಂಗ್ರೆಸ್ (ಐ) ಸಂಸ್ಕೃತಿ ಈ ಘಟನೆಯಿಂದ ಇನ್ನೊಮ್ಮೆ ಸಾಬೀತಾಗಿದೆ.

ಈ ಸಜ್ಜನ

ಸಾಮಾನ್ಯವಾಗಿ ಜನರು ತಮ್ಮ ಹೆಸರು ಅನ್ವರ್ಥಕವಾಗುವಂತೆ ಬಾಳುವರು. ಆದರೆ ಸಜ್ಜನ್‌ಕುಮಾರ್ ನಾಮಾಂಕಿತ ಈ ಕಾಂಗ್ರೆಸ್ ನಾಯಕ ಹೆಸರಿಗೆ ವಿರುದ್ಧಾರ್ಥ ನೀಡುವ ಗುಣವುಳ್ಳ ವ್ಯಕ್ತಿ ಎಂಬುದನ್ನು ನಿಷ್ಪಕ್ಷಪಾತ ಸಮಿತಿಗಳೇ ಸ್ಪಷ್ಟ ಪಡಿಸಿವೆ.

1984 ರ ನವೆಂಬರ್ ಗಲಭೆಗಳ ಬಗ್ಗೆ ತನಿಖೆ ನಡೆಸಲು ರಚಿಸಲಾಗಿದ್ದ ಜೈನ್ ಬ್ಯಾನರ್ಜಿ ಸಮಿತಿ ಸಜ್ಜನ್ ಕುಮಾರ್‌ರನ್ನು ಶಿಕ್ಷಿಸುವಂತೆ 1987 ರಲ್ಲಿ ಸೂಚಿಸಿತ್ತು. ಆದರೆ ಈ ಸಮಿತಿಯನ್ನು ದಿಲ್ಲಿ ಹೈಕೋರ್ಟ್ ಕಳೆದ ವರ್ಷ ರದ್ದು ಪಡಿಸಿತ್ತು. ಮತ್ತೆ ಇತ್ತೀಚೆಗೆ ದಿಲ್ಲಿ ಆಡಳಿತ ನೇಮಿಸಿದ ಪೊತ್ತಿ-ರೋಥಾ ಸಮಿತಿಯು ಸಜ್ಜನ್ ಮತ್ತು ಇತರರನ್ನು 84 ರ ಘಟನೆಗಳಿಗೆ ಸಂಬಂಧಿಸಿದಂತೆ ಬಂಧಿಸಲು ಶಿಫಾರಸು ಮಾಡಿತ್ತು.

ಸಿ.ಬಿ.ಐ. ನಡೆಸಿದ ಕ್ರಮ 1984 ರ ಗಲಭೆಗಳ ಮುಖ್ಯ ಆರೋಪಿಗಳನ್ನು ಬಂಧಿಸುವ ಮೊತ್ತ ಮೊದಲ ಗಂಭೀರ ಪ್ರಯತ್ನವಾಗಿದೆ.

ಭಾರತದ ಮಹಾನ್ ಶೋಷಕರ ಒಟ್ಟು ಆಸ್ತಿ--ಪಾಸ್ತಿ 1988-89ರಲ್ಲಿ

ಹೆಸರು	ಕೋಟಿ ರೂ.ಗಳಲ್ಲಿ
ಬಿರ್ಲಾ	6974.06
ಟಾಟಾ	6621.24
ರಿಲಯನ್ಸ್	3241.38
ಸಿಂಘಾನಿಯಾ	1828.75
ಥಾಪರ್	1762.52
ಮಫತ್‌ಲಾಲ್	1296.55
ಬಜಾಜ್	1228.37
ಮೋದಿ	1192.34
ಲಾರ್ಸೆನ್ ಮತ್ತು ಟ್ಯೂಬ್ರೋ	1130.33
ಎಂ.ಎ ಚಿದಂಬರಂ	1032.23
ಟಿವಿಎಸ್ ಅಯ್ಯಂಗಾರ್	929.06
ಹಿಂದೂಸ್ತಾನ್ ಲಿವರ್	924.85
ಎ.ಸಿ.ಸಿ.	909.13
ಶ್ರೀರಾಮ್	799.17
ಐಟಿಸಿ	742.19
ಯು.ಬಿ.	715.71
ಐ.ಸಿ.ಐ.	674.46
ಬಂಗೂರ್	657.41
ಕಿರ್ಲೋಸ್ಕರ್	633.07
ವಾಲ್‌ಚಂದ್	625.75

(ಹಿಂದೂಸ್ತಾನ್ ಟೈಮ್ಸ್)

ಬೆಲೆಯೇರಿಕೆಗೆ ಮಹಿಳೆಯರ ವಿರೋಧ

ದಿನೇ ದಿನೇ ಜನಜೀವನವನ್ನು ದುಸ್ತರಗೊಳಿಸುತ್ತಿರುವ ಬೆಲೆ ಪರಿಸ್ಥಿತಿ ಬಗ್ಗೆ ದೇಶಾದ್ಯಂತ ಪ್ರತಿದಿನ ಎಂಬಂತೆ ಒಂದಲ್ಲ ಒಂದು ಕಡೆ ಪ್ರತಿಭಟನಾ ಚಳುವಳಿ ನಡೆಯುತ್ತಲೇ ಇದೆ.

ಪಂಜಾಬ್‌ನಲ್ಲಿ ಜನವಾದಿ ಸ್ತ್ರೀ ಸಭಾದ (ಎ.ಐ.ಡಿ.ಡಬ್ಲ್ಯು.ಎ) ಕರೆಯ ಮೇರೆಗೆ ಆಗಸ್ಟ್ 15 ರಂದು ಹೋಷಿಯಾರ್ ಪುರದಲ್ಲಿ ನೂರಾರು ಮಹಿಳೆಯರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಚುನಾವಣಾ ಪ್ರಣಾಳಿಕೆಯ ಭರವಸೆಯಂತೆ ಬೆಲೆಗಳನ್ನು ನಿಯಂತ್ರಿಸದ ರಾಷ್ಟ್ರೀಯರಂಗ ಸರಕಾರವನ್ನು ಕಟುವಾಗಿ ಟೀಕಿಸಿದ ಭಾಷಣಕಾರರು, ಅಗತ್ಯವಸ್ತುಗಳನ್ನು ನ್ಯಾಯಬೆಲೆಅಂಗಡಿಗಳ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡುವಂತೆ ಒತ್ತಾಯಿಸಿದರು.

ಬೆಲೆಯೇರಿಕೆ ವಿರುದ್ಧ ಮತ್ತು ಕೋಮು ಸೌಹಾರ್ದಕ್ಕಾಗಿ ಸಿ.ಐ.ಟಿ.ಯು ಪಂಜಾಬ್ ರಾಜ್ಯ ಸಮಿತಿ ಮತ್ತು ಹಲವಾರು ಸಂಘಟನೆಗಳು ಆಗಸ್ಟ್ 23 ರಂದು ಲೂಧಿಯಾನದಲ್ಲಿ ರಾಜ್ಯಮಟ್ಟದ ಕಾರ್ಮಿಕ ಸಮಾವೇಶವೊಂದನ್ನು ನಡೆಸಿದವು.

ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಪಂಜಾಬ್‌ನ ಸಾವಿರಾರು ರೈತರು ಮತ್ತು ಕೃಷಿ ಕೂಲಿಗಾರರು ಚಂಡೀಗಢದಲ್ಲಿ ಬೃಹತ್‌ರ್‍ಯಾಲಿನಡೆಸಿದರು.

ಸೂಪರ್ 301 ರ ವಿರುದ್ಧ

ಭಾರತವನ್ನು ಆರ್ಥಿಕವಾಗಿ ದಾಸ್ಯಕ್ಕೊಳಪಡಿಸುವ ತನ್ನ ಯೋಜನೆಯ ಅಂಗವಾಗಿ ಅಮೆರಿಕ ಹೇರಲು ಯತ್ನಿಸುತ್ತಿರುವ ಸೂಪರ್ 301 ನಿಯಮವನ್ನು ವಿರೋಧಿಸುವ ಸಮಾವೇಶವೊಂದು ದಿಲ್ಲಿಯಲ್ಲಿ ಆಗಸ್ಟ್ ಕೊನೆಭಾಗದಲ್ಲಿ ನಡೆಯಿತು.

ಮಾವಲಂಕರ್ ಹಾಲ್‌ನಲ್ಲಿ ಜರುಗಿದ ಈ ಸಮಾವೇಶವನ್ನು ಕಲ್ಪಿದ್ದಲು. ಬ್ಯಾಂಕ್, ಜೀವವಿಮೆ, ಫಾರ್ಮಸ್ಯೂಟಿಕಲ್, ರಾಸಾಯನಿಕ ಮತ್ತಿತರ ಉದ್ದಿಮೆಗಳ ಕಾರ್ಮಿಕರು, ನೌಕರರು, 9 ಅಖಿಲಭಾರತ ಒಕ್ಕೂಟಗಳು ಸಂಯುಕ್ತವಾಗಿ ಏರ್ಪಡಿಸಿದ್ದವು.

ಆರ್ಥಿಕತಜ್ಞರು, ವಿಜ್ಞಾನ ಚಳವಳಿಯ ಕಾರ್ಯಕರ್ತರು ಮತ್ತಿತರ ಬುದ್ಧಿಜೀವಿಗಳು ಕೂಡ ಭಾರಿ ಸಂಖ್ಯೆಯಲ್ಲಿ ಇದರಲ್ಲಿ ಪಾಲ್ಗೊಂಡಿದ್ದರು.

ಪ್ರಖ್ಯಾತ ಅರ್ಥಶಾಸ್ತ್ರಜ್ಞ ಡಾ. ಅಶೋಕ ಮಿತ್ರ ಸಮಾವೇಶವನ್ನು ಉದ್ಘಾಟಿಸಿದರು.

ವಿಜಯನಗರದ ಉಕ್ಕಿನ ಕಾರ್ಖಾನೆಯ ಸ್ಥಾಪನೆಗೆ ಆಗ್ರಹ

ಗುಲ್ಬರ್ಗಾ ಜಿಲ್ಲೆಯ ನೂರಾರು ಡಿ.ವೈ.ಎಫ್.ಐ. ಕಾರ್ಯಕರ್ತರು 8 ನೇ ಪಂಚ ವಾರ್ಷಿಕ ಯೋಜನೆಯಲ್ಲಿ ವಿಜಯ ನಗರದ ಉಕ್ಕಿನ ಕಾರ್ಖಾನೆ ಸ್ಥಾಪಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಸೆಪ್ಟೆಂಬರ್ 15 ರಂದು ಮೆರವಣಿಗೆ ನಡೆಸಿದರು.

ಬೆಂಗಳೂರಿನಲ್ಲಿ

ಬೆಂಗಳೂರಿನ ಡಿ.ವೈ.ಎಫ್.ಐ. ಜಿಲ್ಲಾ ಸಮಿತಿಯು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯ ನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಲೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನೂ ಒತ್ತಾಯಿಸಿ 15-9-90 ರಂದು ನಗರದಲ್ಲಿ "ವರ್ಣ ರಂಜಿತ ಪಂಜಿನ ಮೆರವಣಿಗೆ" ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿತು.

ಜಿಲ್ಲಾ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್‌ರವರ ಅಧ್ಯಕ್ಷತೆಯಲ್ಲಿ ಕೆ.ಆರ್. ವೃತ್ತದ ಬಳಿ ಬಹಿರಂಗ ಸಭೆಯೊಂದನ್ನು ನಡೆಸಲಾಯಿತು.

ನೀರಿನ ಅವ್ಯವಸ್ಥೆ ವಿರುದ್ಧ ಡಿ.ವೈ.ಎಫ್.ಐ. ಧರಣಿ

ವಿಜಾಪುರ: ನಗರದಲ್ಲಿ ನೀರು ಪೂರೈಕೆ ಕಾಂಗ್ರೆ ಆಡಳಿತ ಬಂದ ಮೇಲೆ ಪೂರ್ಣ ಅಸ್ತವ್ಯಸ್ತಗೊಂಡಿದೆ. ಇದರ ವಿರುದ್ಧ ಡಿ.ವೈ.ಎಫ್.ಐ. ವಿಜಾಪುರ ಜಿಲ್ಲಾ ಸಮಿತಿ ಆಗಸ್ಟ್ 10ರಂದು ಮೆರವಣಿಗೆ ನಡೆಸಿ ನಗರಸಭೆಯ ವಿಫಲತೆಯನ್ನು ಘೋಷಣೆಗಳ ಮೂಲಕ ಜನರ ಗಮನಕ್ಕೆ ತಂದರು. ನಂತರ ನಗರಸಭೆಯ ಎದುರು ನಡೆಸಿದ ಧರಣಿಯಲ್ಲಿ ಬಹಳ ಜನ ನೆರೆದಿದ್ದರು. ಕಾರ್ಮಿಕ ಮುಖಂಡ ಹಾಗೂ ಸಿ.ಪಿ.ಐ.(ಎಂ) ಮುಂದಾಳು ಎನ್.ಕೆ ಉಪಾಧ್ಯಾಯರು ಹಾಗೂ ಡಿ.ವೈ.ಎಫ್.ಐ. ಜಿಲ್ಲಾ ಅಧ್ಯಕ್ಷ ಮನ್ಸೂಸಾಬ ಕಲಾದಗಿ ಜನರನ್ನುದ್ದೇಶಿಸಿ ಮಾತನಾಡುತ್ತಾ ಜನತೆಯ ಸಹನೆ ಮೀರುವ ಮೊದಲೇ ಅವ್ಯವಸ್ಥೆಯನ್ನು ಸರಿಪಡಿಸಬೇಕೆಂದು ನಗರಸಭೆ ಆಡಳಿತವನ್ನು ಎಚ್ಚರಿಸಿದರು.

ನಗರಸಭೆ ಆಯುಕ್ತರು ಧರಣಿ ಕೂತವರ ಬಳಿ ಬಂದು ಮನವಿ ಸ್ವೀಕರಿಸುತ್ತಾ ವಿದ್ಯುತ್ ಪೂರೈಕೆ ಸರಿಯಾಗಿರುವುದರಿಂದ ನೀರಿನ ಅವ್ಯವಸ್ಥೆಯಾಗದಂತೆ ನೋಡಿಕೊಳ್ಳುವುದಾಗಿ ಭರವಸೆಯಿತ್ತರು.

ಶಂಕರ ಭಾರತಿ, ಅಕಬರ ಅಲಮೇಲ್ ಮುಂತಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

DYFI ಸಂಘಟನಾ ಸಮಿತಿ ರಚನೆ

6-8-90 ಗುಲಬರ್ಗಾ ನಗರದಲ್ಲಿ ಡಿವೈಎಫ್‌ಐ ಜಿಲ್ಲಾ ಮಟ್ಟದ ಸರ್ವ ಸದಸ್ಯರ ಸಭೆಯನ್ನು ನಡೆಸಲಾಯಿತು. ರಾಜ್ಯಕಾರ್ಯದರ್ಶಿ ಎಸ್. ಶಿವರಾಂ, ಮಾರುತಿಮಾನಪಡೆ, ಆರ್.ಕೆ. ಹುಡಗಿ ಇವರುಗಳು ಮುಖ್ಯ ಅತಿಥಿಗಳಾಗಿ, ಸಂಘಟನೆಯ ಕಾರ್ಯಕ್ರಮ, ಯುವ ಜನರ ಸಮಸ್ಯೆಗಳು ಹಾಗೂ ಪ್ರಸಕ್ತ ರಾಜಕೀಯ ಪರಿಸ್ಥಿತಿಗಳ ಬಗ್ಗೆ ವಿವರಿಸಿದರು.

ಕೊನೆಯಲ್ಲಿ 21 ಜನರ ಜಿಲ್ಲಾಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಹನುಮಂತ ಚವ್ಹಾಣರನ್ನು ಮುಖ್ಯ ಸಂಚಾಲಕರನ್ನಾಗಿ ನಾಗೇಂದ್ರಪ್ಪ ಅವರಾದ, ಸೋಮಲಿಂಗ, ವೀರಭದ್ರ ಕಲಬುರ್ಗಿ, ಫರೀದ ಅಹ್ಮದ್, ಗಂಗಾಧರ ಪೊದ್ದಾರ್, ಶರಣ ಬಸಪ್ಪ, ಮಲ್ಲಿಕಾರ್ಜುನ, ಚಂದ್ರಕಾಂತ ಮತ್ತು ಅಲ್ಲಾ ಪಟೇಲ್ ಅವರುಗಳನ್ನು ಸಹ ಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಮಲ್ಲಿಕಾರ್ಜುನ ವಹಿಸಿದ್ದರು. ಕೊನೆಯಲ್ಲಿ ಸಿದ್ದರಾಮ ವಂದನಾರ್ಪಣೆ ಮಾಡಿದರು.

ಹೊಸಪೇಟೆ ರಾಜ್ಯ ನೌಕರರ ಶಾಖೆಯಿಂದ ರಾಷ್ಟ್ರೀಯ ಸಮಗ್ರತಾ ದಿನಾಚರಣೆ

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಕರೆಯ ಮೇರೆಗೆ ರಾಷ್ಟ್ರೀಯ ಸಮಗ್ರತಾ ದಿನಾಚರಣೆಯನ್ನು ದಿನಾಂಕ 9-8-1990 ರಂದು ಹೊಸಪೇಟೆಯಲ್ಲಿ ಆಚರಿಸಲಾಯಿತು. ಹೊಸಪೇಟೆ ರಾಜ್ಯ ನೌಕರರ ಶಾಖೆ ಇದನ್ನು ಏರ್ಪಡಿಸಿತ್ತು. ಸಭೆಗೆ ಮುಖ್ಯ ಅತಿಥಿಗಳಾಗಿ ಸ್ಥಳೀಯ ಶಾಸಕ ಗುಜ್ಜಲ ಹನುಮಂತಪ್ಪನವರು ಆಗಮಿಸಿದ್ದರು. ಮುಖ್ಯ ಭಾಷಣಕಾರರಾಗಿ ಅಖಿಲ ಭಾರತ ಆರ್.ಎಂ.ಎಸ್. ನೌಕರರ ಸಂಘಟನಾ ಕಾರ್ಯದರ್ಶಿ ಕಾಂ. ಎಸ್.ಎನ್. ಏಮಾರಕರ್ ಆಗಮಿಸಿ, ಇಂದಿನ ರಾಷ್ಟ್ರೀಯ ಐಕ್ಯತೆ, ಮತ್ತು ಸಮಗ್ರತೆಯಲ್ಲಿ ಸರಕಾರಿ ನೌಕರರ ಪಾತ್ರ ಎಂಬ ವಿಷಯದ ಮೇಲೆ ಸವಿಸ್ತಾರವಾಗಿ ಮಾತನಾಡಿದರು.

ನೌಕರರು ಕೇವಲ ನಾಲ್ಕು ಗೋಡೆಗಳ ಮಧ್ಯ ಕಚೇರಿ ಕೆಲಸ ಮಾಡಿದರೆ ಸಾಕಾಗದು. ಇಂದು ರಾಷ್ಟ್ರ ಎದುರಿಸುತ್ತಿರುವ ಪ್ರತ್ಯೇಕತೆ, ಕೋಮುವಾದ ಮತ್ತು ಭಾಷಾ ಗೊಂದಲದ ವಿರುದ್ಧ ಹೋರಾಡಬೇಕು. ದೇಶದ ಸ್ವಾತಂತ್ರ ಸಂಗ್ರಾಮದಲ್ಲಿ ಅನೇಕ ನೌಕರರು, ಕಾರ್ಮಿಕರು, ಸಕ್ರಿಯವಾಗಿ ಭಾಗವಹಿಸಿದನ್ನು ವಿವರಿಸಿದರು.

ಅತಿಥಿಗಳಾಗಿ ಆಗಮಿಸಿದ ಉಪ - ಆಯುಕ್ತರಾದ ಶ್ರೀ ಕೆ.ಎಸ್. ನರಸಿಂಹಯ್ಯನವರು, ತಹಸೀಲದಾರ ಶ್ರೀ ಬಾಲಣ್ಣನವರು, ಬಿ.ಡಿ.ಓ. ಬೆನಕಪ್ಪನವರು ಮತ್ತು ಸಹಾಯಕ ಶಿಕ್ಷಣಾಧಿಕಾರಿ ವೀರಪ್ಪನವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ನೌಕರರ ಸಂಘದ ಅಧ್ಯಕ್ಷ ಶ್ರೀ ಸಿದ್ದೇಶ್ವರ ಅವರು ವಹಿಸಿದ್ದರು. ಸರಕಾರಿ ನೌಕರರ ಸಂಘದ ರಾಜ್ಯ ಸದಸ್ಯ ಕಾಂ. ಬಿ. ತಾಯಪ್ಪ ನಾಯಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂಘದ ಸಂಘಟನಾ ಕಾರ್ಯದರ್ಶಿಯವರಿಂದ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಡಿ.ವೈ.ಎಫ್.ಐ. ಕಾರ್ಯಕರ್ತರಿಂದ ಶ್ರಮದಾನ

ಬಂಟ್ವಾಳ ತಾಲೂಕಿನ ಮೇರೆ ಮಜಲುವಿನಲ್ಲಿ ಇತ್ತೀಚೆಗೆ ರಚಿಸಲ್ಪಟ್ಟ ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ (ಡಿವೈಎಫ್‌ಐ) ನೇತೃತ್ವದಲ್ಲಿ ಯುವಜನರು ಹಾಗೂ ಊರಿನವರು 2-9-90 ರಂದು ಶ್ರಮದಾನ ಮಾಡಿದರು.

ಕಂದಕಗಳಿಂದ ಕೂಡಿದ ಮೇರೆ ಮಜಲುವಿನಿಂದ - ಅರ್ಕುಳದ ಕಡೆ ಸಾಗುವ ರಸ್ತೆಯು ಯುವಕರ ಫಲಪೂರ್ಣ ಶ್ರಮದಾನದ ಕಾರಣದಿಂದಾಗಿ ದುರಸ್ತಿಗೊಳಿಸಲ್ಪಟ್ಟಿತು.

ಡಿವೈಎಫ್‌ಐ ಮೇರೆಮಜಲು ಘಟಕದ ಅಧ್ಯಕ್ಷರಾದ ಯೋಗೀಶ್ ಪ್ರಭು, ಉಪಾಧ್ಯಕ್ಷ ಕೆ.ಎಲ್. ಕುಕ್ಯಾನ್, ಕಾರ್ಯದರ್ಶಿ ಎಂ. ಹಂದ್ಯು ಹಾಗೂ ಊರಿನವರಾದ ನಾಗಪ್ಪ ಸುವರ್ಣ ಮೊದಲಾದವರು ಶ್ರಮದಾನ ನೇತೃತ್ವ ವಹಿಸಿದ್ದರು. ಗ್ರಾಮ ಅಭಿವೃದ್ಧಿಯ ಕಾರ್ಯಕ್ಕೆ ನೆರವಾದ ಯುವಕರಿಗೆ ಡಿವೈಎಫ್‌ಐ ಮೇರೆ ಮಜಲು ಘಟಕ ಅಭಿನಂದಿಸಿದೆ.

ಅಂಬಾಗಿಲು ಡಿವೈಎಫ್‌ಐ ಘಟಕದ ರಚನೆ

ತಾ|| 29-8-90 ರಂದು ಉಡುಪಿ ಅಂಬಾಗಿಲು ಪ್ರದೇಶದಲ್ಲಿ ಡಿವೈಎಫ್‌ಐ ಘಟಕವನ್ನು ರಚಿಸಲು ನಿರ್ಣಯಿಸಿದ ನಂತರ ಅಧ್ಯಕ್ಷರಾಗಿ ಶ್ರೀ ಸಿರಿಲ್ ನೊರೊನ್ಹ: ಕಾರ್ಯದರ್ಶಿಯಾಗಿ ಎಸ್. ಮುನ್ನಾ ಸಹಕಾರ್ಯದರ್ಶಿಯಾಗಿ ಶ್ರೀ ಶಂಕರ ಪೂಜಾರಿಯವರು ಸೇರಿರುವ 13 ಮಂದಿಯ ಸಮಿತಿಯನ್ನು ರಚಿಸಲಾಯಿತು.

ಡಿವೈಎಫ್‌ಐನ ತಾಲೂಕು ಮುಂದಾಳು ಶ್ರೀ ಎ.ಎಸ್. ಆಚಾರ್ಯ ಸಭೆಯಲ್ಲಿ ಮಾತನಾಡುತ್ತಾ, ಜಾತಿಯ ಮತ್ತು ಭಾಷೆಯ ಹೆಸರಿನಲ್ಲಿ ದೇಶದ ಐಕ್ಯತೆ ಸಮಗ್ರತೆಗೆ ಧಕ್ಕೆ ಬರುತ್ತಿದೆ. ಯುವಕರು ಜಾಗ್ರತರಾಗಿ ಇದರ ವರುದ್ಧ ಹೋರಾಟ ನಡೆಸಿ ಯುವಶಕ್ತಿಯ ಸದುಪಯೋಗವಾಗಬೇಕೆಂದು ತಿಳಿಸಿದರು. ವರದಕ್ಷಿಣೆ, ನಿರುದ್ಯೋಗ, ಮೂಢನಂಬಿಕೆಗಳ ವಿರುದ್ಧವೂ ಹೋರಾಟ ನಡೆಸಿ, ಉತ್ತಮ ನಡತೆಯುವರಾಗಿ ಜನತೆಯ ಸೇವೆಯಲ್ಲಿ ತೊಡಗಿಸಿಕೊಳ್ಳಲು ಕರೆ ನೀಡಿದರು. ಸಭೆಯ ಅಧ್ಯಕ್ಷತೆ ಯನ್ನು ಶ್ರೀ ಪಿ. ವಸಂತ ವಹಿಸಿದ್ದರು.

ಶ್ರದ್ಧಾಂಜಲಿ

ಮಂಗಳೂರು ತಾಲೂಕು ರೈತ ಸಂಘದ ಉಪಾಧ್ಯಕ್ಷರಾದ ಎಂ. ಕೃಷ್ಣ ಮೂಲ್ಯ ಇವರ ತಾಯಿ ಶ್ರೀಮತಿ ಶೇಷಮ್ಮನವರು ನಿಧನ ಹೊಂದಿದರು.

ಮೃತರ ಕುಟುಂಬದ ದುಃಖದೊಂದಿಗೆ ತಾಲೂಕು ರೈತ ಸಂಘವು ಸಹಭಾಗಿಯಾಗಿರುತ್ತದೆ ಎಂದು ಮಂಗಳೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ತಿಳಿಸಿದ್ದಾರೆ.

ಇರಾಕ್-ಕುವೈತ್ ಭಾರತೀಯರಿಗೆ ಆಹಾರ-ಔಷಧಿ

ಕೊಲ್ಲಿಯ ಬಿಕ್ಕಟ್ಟು ಹಾಗೆ ಮುಂದುವರಿಯುತ್ತಿದ್ದು, ಇರಾಕ್-ಕುವೈತ್‌ಗಳಲ್ಲಿ ಸಿಕ್ಕಿಬಿದ್ದಿರುವ ಭಾರತೀಯರ ಬಗ್ಗೆ ಆತಂಕ ಹೆಚ್ಚಿದೆ. ವಿಶ್ವಸಂಸ್ಥೆ ವಿಧಿಸಿರುವ ದಿಗ್ಬಂಧನದ ತೀವ್ರತೆ ಅನುಭವ ಇರಾಕಿಗೆ ಆಗುತ್ತಿದ್ದು, ಅದು ತನ್ನ ನಾಗರಿಕರಿಗೆ ಅಗತ್ಯ ಆಹಾರ ಮತ್ತು ಔಷಧಿಯಲ್ಲಿ ಪಡಿತರ ವ್ಯವಸ್ಥೆ ಜಾರಿ ಮಾಡಿದೆ. ಪೂರೈಕೆ ಕಡಿಮೆ ಇರುವುದರಿಂದ, ಬೇರೆ ದೇಶೀಯರಿಗೆ ಅದನ್ನು ಒದಗಿಸುವ ಜವಾಬ್ದಾರಿ ಆ ದೇಶಗಳದ್ದು ಎಂದು, ಭಾರತ ಸೇರಿದಂತೆ ಹಲವು ದೇಶಗಳಿಗೆ ಹೇಳಲಾಗಿದೆ. ಇದರ ನಂತರ ಭಾರತ, ಅಲ್ಲಿರುವ ಭಾರತೀಯರಿಗೆ ಆಹಾರ, ಔಷಧಿ ಒದಗಿಸಲು ಪ್ರಯತ್ನ ಆರಂಭಿಸಿದೆ. ಮೊದಲಿನ ತಡೆ ವಿಶ್ವಸಂಸ್ಥೆ ದಿಗ್ಬಂಧನ ಆಹಾರ ಔಷಧಿಗೆ ಅನ್ವಯಿಸುತ್ತದೆಯೇ ಎಂದು ಈ ಬಗ್ಗೆ ಭಾರತ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯನ್ನು ಕೇಳಿತು. ಹಲವು ದಿನಗಳ ವಿಳಂಬದ ನಂತರ ರೆಡ್‌ಕ್ರಾಸ್ ಮತ್ತಿತರ ಅಂತರಾಷ್ಟ್ರೀಯ ಸಂಸ್ಥೆಗಳ ಮೂಲಕ ಇದನ್ನು ವಿತರಿಸಿದರೆ ಮಾತ್ರ ಎಂದು ನಿರ್ಧರಿಸಲಾಯಿತು. ಈ ಬಗ್ಗೆ ಭದ್ರತಾ ಸಮಿತಿಯ ನಿರ್ಣಯವನ್ನು ಅಮೇರಿಕ, ಬ್ರಿಟನ್‌ಗಳು ವಿರೋಧಿಸಿದರೆ ಕ್ಯೂಬಾ, ಯೆಮೆನ್, ಯುಗೋಸ್ಲಾವಿಯಗಳು ಸಮರ್ಥಿಸಿದ್ದವು. ಇರಾಕ್ ಮೇಲೆ ದಿಗ್ಬಂಧನ ವಿಧಿಸುವ ನಿರ್ಣಯ ತೆಗೆದುಕೊಳ್ಳಲು ರಾತ್ರಿಯೆಲ್ಲಾ ಸಭೆ ನಡೆಸಿದ ಭದ್ರತಾಸಮಿತಿ, ಈ ನಿರ್ಣಯ ತೆಗೆದುಕೊಳ್ಳಲು ಬಹಳ ವಿಳಂಬ ಮಾಡಿತು ಎಂದು ಭಾರತ ರಾಯಭಾರಿ ಖಾರವಾಗಿ ಹೇಳಿದರು. ಈ ನಿರ್ಣಯದ ನಂತರ ಆಹಾರ, ಔಷಧಿ ಹೊತ್ತ ಹಡಗೊಂದು ಕೊಚ್ಚಿನ್‌ನಿಂದ ಇರಾಕ್‌ಗೆ ಹೊರಟಿದೆ. ಭಾರತೀಯರನ್ನು ಸ್ವದೇಶಕ್ಕೆ ಕರೆತರುವ ವ್ಯವಸ್ಥೆ ಚುರುಕುಗೊಂಡಿದ್ದು, ಈ ವರೆಗೆ ಸುಮಾರು 40 ಸಾವಿರ ಭಾರತೀಯರು ಹಿಂತಿರುಗಿದ್ದಾರೆ ಎಂದು ಸರಕಾರ ಹೇಳಿದೆ.

ಈ ನಡುವೆ ಶಾಂತಿಯುತವಾಗಿ ಕೊಲ್ಲಿ ಸಮಸ್ಯೆ ಬಗೆಹರಿಸುವ ಸಾಧ್ಯತೆ ಯಾವ ರೀತಿಯಲ್ಲೂ ಹೆಚ್ಚಿಲ್ಲ. ಅಲಿಪ್ತ ದೇಶಗಳು, ಅರಬ್ ದೇಶಗಳು ಇದಕ್ಕೆ ಪ್ರಯತ್ನ ಆರಂಭಿಸಿದ್ದರೂ, ಈ ವರೆಗೆ ಆಶಾದಾಯಕವಾಗಿಲ್ಲ. ಅಮೇರಿಕ ತನ್ನ ಮಿಲಿಟರಿ ತೋಳು ಏರಿಸುತ್ತಿದ್ದು ಇರಾಕ್ ಯಾವುದೇ ರಿಯಾಯಿತಿ ಕೊಡಲೂ ತಯಾರಿಲ್ಲ. ಕುವೈತ್‌ನಲ್ಲಿ ಫ್ರೆಂಚ್ ದೂತವಾಸದ ರಾಯಭಾರ ಸಿಬ್ಬಂದಿಗಳ ಮೇಲೆ ಕೈಮಾಡಿರುವ ಆಪಾದನೆ ಮೇಲೆ, ಫ್ರಾನ್ಸ್ ಇಟಲಿ ಇರಾಕ್‌ರಾಯಭಾರ ಸಿಬ್ಬಂದಿಯ ಹಲವರನ್ನು ತಮ್ಮ ದೇಶಗಳಿಂದ ಹೊರಹಾಕಿದೆ. ವಿಶ್ವಸಂಸ್ಥೆ ಈ ಬಗ್ಗೆ ಇರಾಕ್‌ನ್ನು ಟೀಕಿಸುವ ನಿರ್ಣಯ ಕೈಗೊಂಡಿದೆ. ಅಮೇರಿಕದ ಮಿಲಿಟರಿ ದಿಗ್ಬಂಧನದ ಕ್ರಮಗಳನ್ನು ವಿಶ್ವಸಂಸ್ಥೆಯಾಗಲಿ, ಅಂತರ್‍ರಾಷ್ಟ್ರೀಯ ಸಮುದಾಯವಾಗಲಿ (ಸೋವಿಯೆತ್ ಸೇರಿದಂತೆ) ಸಮರ್ಥಿಸಿಲ್ಲವಾದರೂ ಅದನ್ನು ವಿರೋಧಿಸುವ ಟೀಕಿಸುವ ಸ್ಥಿತಿಯಲ್ಲಿಲ್ಲ. ಕೊಲ್ಲಿ ಬಿಕ್ಕಟ್ಟು ಪರಿಹಾರವಾದರೂ ಅಮೇರಿಕ ತನ್ನ ಸೈನ್ಯ ಹಿಂತೆಗೆದುಕೊಳ್ಳದು ಎಂಬ ಬುಶ್ ಹೇಳಿಕೆ ಈ ಹಿನ್ನೆಲೆಯಲ್ಲಿ ಅರಬ್ ಜನತೆಗೆ ಮಾತ್ರವಲ್ಲ ವಿಶ್ವದ ಶಾಂತಿಪ್ರಿಯ ಜನತೆಯನ್ನು ಆತಂಕಗೊಳಿಸುವಂಥದ್ದು.

ದ.ಆಫ್ರಿಕಾದಲ್ಲಿ ಹಿಂಸಾಚಾರ ಮುಂದುವರಿಕೆ

ಈ ವಾರ ನಡೆದ ಎರಡು ನರಮೇಧಗಳು ದ.ಆಫ್ರಿಕದಲ್ಲಿ ಆರಂಭವಾಗಿದ್ದ, ವರ್ಣಭೇದ ನೀತಿಯನ್ನು ಶಾಂತಿಯುತವಾಗಿ ಕೈಬಿಡುವ ಪ್ರಕ್ರಿಯೆಗೆ ಪ್ರಶ್ನೆ ಚಿಹ್ನೆ ಹಾಕಿವೆ. ಒಂದು ದುರಂತದಲ್ಲಿ 26 ಕರಿಯರನ್ನು ರೈಲುಬೋಗಿಯೊಂದರಲ್ಲಿ ಗುಂಡಿಟ್ಟು ನಿಮಿಷಗಳಲ್ಲಿ ಕೊಲ್ಲಲಾಯಿತು. ಇನ್ನೊಂದು ದುರಂತದಲ್ಲಿ ಇದೇ ರೀತಿಯಲ್ಲಿ ಹಂತಕರು ರೈಲಿಗೆ ಹತ್ತಿದ ಕೂಡಲೇ 15 ಕ್ಕಿಂತಲೂ ಹೆಚ್ಚು ಕರಿಯರು ಪ್ರಾಣಭಯದಿಂದ ರೈಲಿನಿಂದ ತಳ್ಳಲ್ಪಟ್ಟು ಸತ್ತರು. ದುರಂತವೆಂದರೆ ಈ ಎಲ್ಲಾ ಘಟನೆಗಳಲ್ಲಿ ಹಂತಕರೂ ಕರಿಯರೇ. ANC– ದ.ಆಫ್ರಿಕಾ ಸರ್ಕಾರ ಶಾಂತಿ ಮಾತುಕತೆ ನಡೆದು ವರ್ಣಭೇದ ನೀತಿ ಕೊನೆಗೊಳ್ಳುವುದರೊಂದಿಗೆ ಕರಿಯರೊಳಗಿನ ಈ ಹಿಂಸಾಚಾರ ಆರಂಭವಾಯಿತು. ಸಾಮ್ರಾಜ್ಯಶಾಹಿ, ವರ್ಣಭೇದ ಸಮರ್ಥಕ ಸಮಾಚಾರ ಏಜೆನ್ಸಿಗಳು ಇದನ್ನು ಯಾದವೀ ಕಲಹ ಎಂದುವರ್ಣಿಸಿ, ಕರಿಯರು ಸ್ವಯಮಾಡಳಿತ ನಡೆಸಲಾರರು ಎಂಬ ಅರ್ಥ ಬರುವಂತೆ ಸುದ್ದಿಗಳನ್ನು ಬಿತ್ತರಿಸುತ್ತಿದ್ದಾರೆ. ಆದರೆ ಈ ಹಿಂಸಾಚಾರದಲ್ಲಿ ದಾಳಿ ಮಾಡುತ್ತಿರುವವರು ವರ್ಣಭೇದ ನೀತಿಯ ಸರ್ಕಾರ ಸಾಕಿಕೊಂಡಿರುವ ಜುಲು ಬುಡಕಟ್ಟಿನ ನಾಯಕನ 'ಇಂಕಾಥಾ ಪಕ್ಷ'ದ ಕಾರ್ಯಕರ್ತರು. ವರ್ಣಭೇದದ ನೀತಿಯಿಂದ ರಾಜಕೀಯ ಪ್ರಯೋಜನ ಪಡೆದ ಇವರಿಗೆ, ಅದು ಇಲ್ಲವಾದರೆ ಎಂಬ ಭಯ ಇಂತಹ ಹಿಂಸಾಚಾರಕ್ಕೆ ಇಳಿಸಿದೆ. ಅವರಿಗೆ ಆಳುವ ವರ್ಗದ ಮಿಲಿಟರಿ, ಪೋಲಿಸುಗಳು ಒಂದು ವಿಭಾಗ ಮತ್ತು ಬಲಿ ಸಾಧಿಸಲು ಬಿಳಿಯರ ಸಂಘಟನೆಗಳ ಸಕ್ರಿಯ ಬೆಂಬಲವಿದೆ ಎಂಬುದು ಸ್ಪಷ್ಟ. ಕಳೆದ ಐದು ವಾರಗಳಲ್ಲಿ 800 ಜನ ಕರಿಯರು ಈ

ಲೋಕಸಂಚಾರ

ಹಿಂಸಾಚಾರದಲ್ಲಿ ಸತ್ತಿದ್ದಾರೆ. ಈ ಹಿಂಸಾಚಾರವನ್ನು ನಿಲ್ಲಿಸಲು ಸರ್ಕಾರ ಬೇಕೆಂತಲೇ ಪ್ರಯತ್ನಿಸುತ್ತಿಲ್ಲ ಎಂದು ಮಂಡೇಲ ಆಪಾದಿಸಿದ್ದಾರೆ. ಈ ಪರಿಸ್ಥಿತಿಯನ್ನು ಕೂಲಂಕುಷವಾಗಿ ವಿಮರ್ಶಿಸಲು ಕೇಂದ್ರ ಸಮಿತಿ ಸದ್ಯಕ್ಕೆ ಸಭೆ ಸೇರಲಿದೆ.

ಅಲೆಂದೆಗೆ ವಿಳಂಬಿತ ಅಂತಿಮ ಸಂಸ್ಕಾರ

ಅಲೆಂದೆ ಚಿಲಿಯ (ದ.ಅಮೇರಿಕದಲ್ಲೇ ಏಕೆ ಜಗತ್ತಿನಲ್ಲೇ ಪ್ರಥಮ) ಬೂರ್ಜ್ವಾ ವ್ಯವಸ್ಥೆಯೊಳಗೆ ಚುನಾಯಿತ ಮಾರ್ಕ್ಸ್‌ವಾದಿ ಅಧ್ಯಕ್ಷ. ಚಿಲಿಯ ಯಾಕೆ ಇಡೀ ದ. ಅಮೇರಿಕದ ಎಡ ಮತ್ತು ಪ್ರಗತಿಪರ ಶಕ್ತಿಗಳ ಜನತೆಯ ಆಶೋತ್ತರಗಳ ಪ್ರತೀಕವಾಗಿದ್ದವರು. ಅತ್ಯಂತ ಜನಪ್ರಿಯ ನಾಯಕ. ದ. ಅಮೇರಿಕಾದ ಸಮಾಜವಾದದ ಉಸಿರು. ಚಿಲಿಯಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ, ಅಲೆಂದೆ ಹತ್ಯೆ, ಬರ್ಬರ ನರಮೇಧದೊಂದಿಗೆ ಈ ದುರಂತ 1973 ರಲ್ಲಿ ನಡೆಯಿತು. ಅಲೆಂದೆಗೆ ಸರಿಯಾದ ಅಂತಿಮ ಸಂಸ್ಕಾರ ಸಹ ನಡೆಯಲಿಲ್ಲ. ಚಿಲಿಯಲ್ಲಿ ಈಗ ಅಧಿಕಾರಕ್ಕೆ ಬಂದ ನಾಗರಿಕ ಆಡಳಿತ, ಅಲೆಂದೆಗೆ ಸಲ್ಲಬೇಕಾದ ಅಂತಿಮ ಗೌರವ ಸಲ್ಲಿಸಬೇಕೆಂದು ನಿರ್ಧರಿಸಿತು. ಎಲ್ಲೋ ಹೂತುಹಾಕಿದ್ದ ಅಲೆಂದೆ ಶವವನ್ನು ಹುಡುಕಿ ತೆಗೆದು, ಸ್ಯಾಂಟಿಯಾಗೋದ ಸ್ಮಶಾನದಲ್ಲಿ ಸಕಲ ಗೌರವಗಳೊಂದಿಗೆ ಅಂತಿಮ ಸಂಸ್ಕಾರ ಮಾಡಲಾಯಿತು. ಈ ಅಂತಿಮ ಯಾತ್ರೆ ಚಿಲಿಯ ಜನತೆಗೆ 1973 ರ ನರಮೇಧದ, ಪ್ರಜಾತಂತ್ರದ ಕೊಲೆಯ ದುಃಸ್ವಪ್ನವನ್ನು ಮರುಕಳಿಸಿತು. ಈ ಅಂತಿಮ ಯಾತ್ರೆಯನ್ನು ದಾರಿಯ ಎರಡೂ ಬದಿಯಲ್ಲಿ ನಿಂತು ವೀಕ್ಷಿಸಿದ ಸಾವಿರಾರು ಚಿಲಿಯನ್ನರು ಬಿಕ್ಕಿ ಬಿಕ್ಕಿ ಅತ್ತರು.

ಮಾಜಿ ಮಿಲಿಟರಿ ಸರ್ವಾಧಿಕಾರಿ ಪಿನೋಶೆಗೆ ನೇರವಾದ ಯಾವ ರಾಜಕೀಯ ಅಧಿಕಾರವಿಲ್ಲದಿದ್ದರೂ, ಆತ ಮಿಲಿಟರಿ ಮುಖ್ಯಸ್ಥನಾಗಿ ಅಧಿಕಾರವನ್ನು ಕಾನೂನು ಪ್ರಕಾರ ಬಹಳಷ್ಟು ಮೊಟಕಾಗಿ ಇರಿಸಲಾಗಿದೆ. ಮಿಲಿಟರಿ ಮೇಲೆ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರಗಳಿಲ್ಲ. ಪಿನೋಶೆ ಸೇರಿದಂತೆ ಮಿಲಿಟರಿ ಅಧಿಕೃತವಾದ ಅಲೆಂದೆಯ ಅಂತಿಮ ಯಾತ್ರೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸಿತು. ನಾಗರಿಕ ಹಕ್ಕುಗಳ ಮೇಲೆ ದಾಳಿಗಳ ಬಗ್ಗೆ ವಿಚಾರಣೆ ನಡೆಸುವ ಆಯೋಗವೊಂದನ್ನು ಅಧ್ಯಕ್ಷರು ರಚಿಸಿದ್ದನ್ನು ಪಿನೋಶೆ ರಚಿಸಿರುವ 'ಸೈನ್ಯಾಧ್ಯಕ್ಷರ' ಸಲಹಾ ಸಮಿತಿ' ಎಂಬ ವಿಚಿತ್ರ ಸಂಘಟನೆ ತಿರಸ್ಕರಿಸಿದೆ. ಪಿನೋಶೆ ಕಾಲದಲ್ಲಿದ್ದ DINA ಎಂಬ ರಾಜಕೀಯ ಗುಪ್ತಚರ ಪೋಲೀಸನ್ನು ಕಾನೂನು ಪ್ರಕಾರ ಬರ್ಖಾಸ್ತು ಮಾಡಿದ್ದರು. ಅದನ್ನು ಸೈನ್ಯ ಇನ್ನೂ ಜಾರಿಗೊಳಿಸಿಲ್ಲ. ಅದರ ಸದಸ್ಯರು ಅದೇ ಕೆಲಸವನ್ನು DINE ಎಂಬ ಬೇರೊಂದು ಹೆಸರಲ್ಲಿ ಮುಂದುವರಿಸುತ್ತಿದ್ದಾರೆ. ನಾಗರಿಕ ಆಡಳಿತದ ಪ್ರಸಕ್ತ ಗೃಹಮಂತ್ರಿ ಅವರ ಪತ್ನಿ, ಸಿಬ್ಬಂದಿಯ ಮೇಲೆ ಈ ಗುಪ್ತಚರರು ಕಣ್ಣಿಟ್ಟಿದ್ದಾರೆ.

ಆದರೆ ನಾಗರಿಕ ಆಡಳಿತ ಅಧಿಕಾರಕ್ಕೆ ಬಂದ ಮೇಲೆ ಪಿನೋಶೆ ನಡೆಸಿದ ನಾಗರಿಕ ಹಕ್ಕುಗಳ ದಮನದ ಅಗಾಧತೆ, ತೀವ್ರತೆ ಪ್ರಸಾರ ಮಾಧ್ಯಮಗಳಲ್ಲಿ ಪ್ರಾಮುಖ್ಯತೆ ಗಳಿಸಿದ್ದು, ಪಿನೋಶೆ ಮತ್ತು ಇತರ ಬಲಪಂಥೀಯ ಶಕ್ತಿಗಳ ಬೆಂಬಲ ಗಮನೀಯವಾಗಿ ಕುಗ್ಗುತ್ತಿದೆ. ನಾಲ್ಕು ವರ್ಷಗಳ ಹಿಂದೆ ಪಿನೋಶೆ ನಡೆಸಿದ ಮತಗಣನೆಯಲ್ಲಿ ಗಳಿಸಿದ್ದ ಶೇಕಡಾ 44 ಮತ ಗಮನಾರ್ಹವಾದದ್ದೇ. ಕಳೆದ ವರ್ಷದ ಚುನಾವಣೆಗಳಲ್ಲಿ, ಬಲಪಂಥೀಯರು ಸಾಕಷ್ಟು ಮತಗಳಿಸಿದ್ದರು. ಆದರೆ ಪ್ರಸಾರ ಮಾಧ್ಯಮದಲ್ಲಿ ಪಿನೋಶೆಯ ನಾಗರಿಕ ಹಕ್ಕುಗಳ ದಮನದ ಕಥೆ ಕೇಳಿದ ನಂತರ ನಡೆಸಿದ ಒಂದು ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಯಲ್ಲಿ, ಆತನಿಗಿರುವ ಬೆಂಬಲ ಈಗ ಕೇವಲ ಶೇಕಡಾ 2.4 ಎಂದು ತಿಳಿದು ಬಂದಿದೆ.

ಚಿಲಿಯ ಕಮ್ಯುನಿಸ್ಟ್ ಪಕ್ಷ ಇತ್ತೀಚೆಗೆ ತನ್ನ ಸಮ್ಮೇಳನ ನಡೆಸಿದ್ದು, ತನ್ನ ರಾಜಕೀಯ ಪಾತ್ರವಹಿಸಲು ಸಿದ್ಧವಾಗುತ್ತಿದೆ. ಪಕ್ಷದ ಪ್ರಥಮ ಕಾರ್ಯದರ್ಶಿ ಕ್ಯೂಬಾಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದು, ಚಿಲಿಯ ರಾಜಕೀಯ ಪರಿಸ್ಥಿತಿ ಬಗ್ಗೆ ಮೇಲಿನ ಮಾಹಿತಿ ನೀಡಿದ್ದಾರೆ.

ಮಾದಕ ವಸ್ತುಗಳು ಅಮೇರಿಕಾದಲ್ಲಿ

ಕೊಕೇನ್ ಮುಂತಾದ ಮಾದಕದ್ರವ್ಯಗಳ ಸೇವನೆ ಅಮೇರಿಕದಿಂದ ಸಾಮಾಜಿಕ ವ್ಯವಸ್ಥೆಯನ್ನೇ ಬುಡಸಹಿತ ಅಲುಗಾಡಿಸಲು ಆರಂಭಿಸಿದೆ ಎಂಬ ಅಂಶ ಅಮೇರಿಕದ ಕಾಂಗ್ರೆಸ್ (ಪಾರ್ಲಿಮೆಂಟ್) ನಡೆಸಿದ ಒಂದು ಅಧ್ಯಯನದಿಂದ ತಿಳಿದು ಬಂದಿದೆ. ಪ್ರತಿನೂರರಲ್ಲಿ ಒಬ್ಬ ಅಮೇರಿಕನ್ ಕೊಕೇನ್‌ಗೆ ಶರಣು ಹೋಗಿದ್ದಾನೆ. ಈ ಅಧ್ಯಯನದ ಪ್ರಕಾರ 22 ಲಕ್ಷ ವ್ಯಸನ ಪೀಡಿತರಿದ್ದಾರೆ. ಹಿಂದಿನ ಅಂಕಿಸಂಖ್ಯೆಗಳ ಮೂರರಷ್ಟು ಇದು. ಇದನ್ನು 'ಮಹಾಸಂಕ್ರಾಮಿಕ' ಎಂದು ಬಣ್ಣಿಸಲಾಗಿದೆ. ಮಾದಕ ವಸ್ತು ವ್ಯಸನದ ಹೆಚ್ಚಳಕ್ಕೂ, ಕೊಲೆ ಮುಂತಾದ ಅಪರಾಧದ ಹೆಚ್ಚಳಕ್ಕೂ ನೇರ ಸಂಬಂಧವಿದೆ ಎಂದು ಕೂಡಾ ತಿಳಿದು ಬಂದಿದೆ. ಕೊಲೆ 1990 ರಲ್ಲಿ ಹಿಂದಿನ ವರ್ಷಕ್ಕಿಂತ ಎಂಟು ಪಟ್ಟು ಹೆಚ್ಚಾಗಿದೆ ಎಂದು ಅಂದಾಜು ಮಾಡಲಾಗಿದೆ. ಅಪರಾಧಿ ಗ್ಯಾಂಗ್‌ಗಳು ದೊಡ್ಡ ನಗರಗಳಲ್ಲಿ ವಿಪರೀತ ಹೆಚ್ಚಿದ್ದು, ಹೆಚ್ಚು ಹೆಚ್ಚು ಯುವಕರನ್ನು ಒಳಗೊಳ್ಳುತ್ತಿದೆ. ಉದ್ಯೋಗ, ಕೌಟುಂಬಿಕ ಜೀವನದಿಂದ ವಂಚಿತರಾದ ಯುವ ಜನರಿಗೆ 'ಗ್ಯಾಂಗ್‌ಜೀವನ' ಪ್ರಿಯವಾಗಲು ಆರಂಭವಾಗಿದೆ.

ಅಮೇರಿಕದಷ್ಟು ತೀವ್ರವಲ್ಲದಿದ್ದರೂ ಇಂತಹದೇ ಸಾಮಾಜಿಕ ದುಸ್ಥಿತಿ ಪಶ್ಚಿಮ ಯುರೋಪಿನ 'ಶ್ರೀಮಂತ' ದೇಶಗಳನ್ನೂ ಆವರಿಸಿದೆ.

ಪೂ. ಜರ್ಮನಿ 60 ಲಕ್ಷ ಕಾರ್ಮಿಕರ ಭವಿಷ್ಯ ಇಬ್ಬರ ಕೈಯಲ್ಲಿ

ಹಿಂದಿನ ಸಮಾಜವಾದಿ ಜರ್ಮನಿಯ ಆರ್ಥಿಕತೆಯ ಬೆನ್ನೆಲುಬಾಗಿದ್ದ ಸುಮಾರು 8000 ಕಾರ್ಖಾನೆಗಳ ಸುಮಾರು 60 ಲಕ್ಷ ಕಾರ್ಮಿಕರ ಭವಿಷ್ಯ, ಪಶ್ಚಿಮ ಜರ್ಮನಿಯ ಕುಖ್ಯಾತ ಖಾಸಗಿ ಕ್ಷೇತ್ರದ ಇಬ್ಬರು ವರಿಷ್ಠ ಮ್ಯಾನೇಜರುಗಳ ಕೈಯಲ್ಲಿದೆ. ಇವರು ಪಶ್ಚಿಮ ಜರ್ಮನಿಯಲ್ಲೇ ಕಾರ್ಮಿಕರ ಸಂಖ್ಯೆಯಲ್ಲಿ ಕಡಿತಗೊಳಿಸಿ ಕಂಪನಿಗಳನ್ನು 'ಉಳಿಸಿದ' ಭಾರಿ ಖ್ಯಾತಿ ಹೊಂದಿದವರು. ಈ ಇಬ್ಬರು ಮ್ಯಾನೇಜರುಗಳು ಈ ಎಲ್ಲಾ ಕಾರ್ಖಾನೆಗಳನ್ನು ನಿಯಂತ್ರಿಸುವ ಬೋರ್ಡ್ ಮತ್ತು ಟ್ರಸ್ಟ್‌ಗಳಿಗೆ ನಿಯಮಿಸಲ್ಪಟ್ಟಿದ್ದಾರೆ. ಈ 8 ಸಾವಿರ ಕಾರ್ಖಾನೆಗಳಲ್ಲಿ ಯಾವುವು ಮುಚ್ಚಬೇಕು ಯಾವುದನ್ನು ಖಾಸಗೀಕರಿಸಬೇಕು, ಯಾವ್ವನ್ನು ಪುನಃ ಸಂಘಟಿಸಬೇಕೆಂಬ ನಿರ್ಧಾರ ತೆಗೆದುಕೊಳ್ಳುವವರು ಇವರು. ಈ ಕಾರ್ಖಾನೆಗಳಲ್ಲಿ ಕಡಿಮೆ ಪಕ್ಷ ಮೂರನೇ ಒಂದು ಕಾರ್ಖಾನೆಗಳನ್ನು ಮುಚ್ಚುತ್ತಾರೆ ಎಂಬ ಗುಮಾನಿ ಇದೆ. ಈ ಜುಲೈಯಲ್ಲಿ ಪೂರ್ವಜರ್ಮನಿಯ ನಿರುದ್ಯೋಗಿಗಳ ಸಂಖ್ಯೆ 2.5 ಲಕ್ಷ ಇದ್ದು ಪ್ರತಿದಿವಸ 4 ರಿಂದ 5 ಸಾವಿರ ನಿರುದ್ಯೋಗಿಗಳು ಹೆಚ್ಚುತ್ತಿದ್ದಾರೆ. ಇದರ ಜತೆ ಆಹಾರವಸ್ತುಗಳ ಬೆಲೆ ಹೆಚ್ಚು ಕಡಿಮೆ ಇಮ್ಮಡಿಯಾಗಿದ್ದು ಬಾಡಿಗೆ ದರಗಳು ಸುಮಾರು 6 ಪಟ್ಟು ಹೆಚ್ಚಿದೆ. ಜನತೆಯ ಕಷ್ಟ ಈ ರೀತಿ ವಿಪರೀತ ಹೆಚ್ಚಿದ್ದು, ಐಕ್ಯತೆಯಿಂದ ತಮ್ಮ ದೇಶದಲ್ಲಿ ಹಾಲು, ಜೇನು ಹರಿಯುತ್ತದೆ ಎಂದು ಕನಸು ಕಂಡವರಿಗೆ ತೀವ್ರ ನಿರಾಶೆಯಾಗಿದೆ. ಇದು ಭಾರಿ ಸಾರ್ವಜನಿಕ ಪ್ರಕ್ಷೋಭೆಗೆ ಅಪರಾಧ ಏರಿಕೆಗೆ ಎಡೆ ಮಾಡಿಕೊಟ್ಟಿದೆ. ಹಲವು ಆರ್ಥಿಕ ತಜ್ಞರು, ಪೂರ್ವಜರ್ಮನಿಯ ಆರ್ಥಿಕತೆಯನ್ನು ಪೂರ್ಣ 'ಬಂಡವಾಳಶಾಹಿ' ವ್ಯವಸ್ಥೆಯಾಗಿಸಲು ಮುಂದಿನ 5 ವರ್ಷಗಳವರೆಗೆ ಪ್ರತಿವರ್ಷ ಸುಮಾರು 50 ಶತಕೋಟಿ ಮಾರ್ಕ್‌ಗಳನ್ನು ಸುರಿಯಬೇಕು ಎಂದಿದ್ದಾರೆ. ಇದರ ಸಾಧ್ಯತೆ ಕಡಿಮೆ ಎಂದವರ ಅಭಿಪ್ರಾಯ.

ಈ ನಡುವೆ ಜರ್ಮನಿಗಳ ಐಕ್ಯತೆಯ 'ಬಾಹ್ಯ ಆವಶ್ಯಕತೆ'ಗಳು ಪೂರ್ಣವಾದಂತೆ ಆಗಿದೆ. ಇತ್ತೀಚೆಗೆ ಮಾಸ್ಕೋದಲ್ಲಿ ಎರಡನೇ ಮಹಾಯುದ್ಧದ ನಾಲ್ಕು ವಿಜೇತ ರಾಷ್ಟ್ರಗಳ ಅಮೇರಿಕ, ಸೋವಿಯತ್, ಫ್ರಾನ್ಸ್ ಬ್ರಿಟನ್‌ಗಳ ವಿದೇಶ ಮಂತ್ರಿಗಳು ಮತ್ತು ಎರಡು ಜರ್ಮನಿಗಳ ವಿದೇಶ ಮಂತ್ರಿಗಳು ಸಹಿ ಹಾಕಿದ ಒಪ್ಪಂದದಿಂದ ಇದು ಸಾಧ್ಯವಾಗಿದೆ. ಇದರ ಪ್ರಕಾರ ಈ ನಾಲ್ಕು ದೇಶಗಳು ಪೂರ್ವ ಮತ್ತು ಪಶ್ಚಿಮ ಜರ್ಮನಿ, ಬರ್ಲಿನ್‌ಗಳ ಮೇಲೆ ಇದ್ದ ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದು ಇವು ಐಕ್ಯವಾಗಿ ಜರ್ಮನ್ ಸಾರ್ವಭೌಮ ದೇಶವಾಗಲು ತಮ್ಮ ಒಪ್ಪಿಗೆ ನೀಡಿದ್ದಾರೆ.

ಸೋವಿ ಯತ್ ಅಲ್ಬೇನಿಯಾ ಸಂಬಂಧ ಪುನಃ ಸ್ಥಾಪನೆ

1961 ರಲ್ಲಿ ಕಡಿದು ಹೋಗಿದ್ದ ಅಲ್ಬೇನಿಯಾ ಸೋವಿಯತ್ ರಾಜ ತಾಂತ್ರಿಕ ಸಂಬಂಧಗಳನ್ನು ಪುನಃ ಸ್ಥಾಪಿಸಲಾಗಿದೆ. ಈ ಬಗ್ಗೆ ಒಂದು ಒಪ್ಪಂದಕ್ಕೆ ಅಲ್ಬೇನಿಯಾದ ರಾಜಧಾನಿ ತಿರಾನಾದಲ್ಲಿ ಸಹಿ ಹಾಕಲಾಯಿತು. ಅಲ್ಬೇನಿಯಾ ಯುರೋಪಿನ ಸಮಾಜವಾದಿ ದೇಶಗಳಲ್ಲೊಂದು ರಾಜಕೀಯ ಭಿನ್ನಾಭಿಪ್ರಾಯದ ಆಧಾರದ ಮೇಲೆ ಅದು ಹೆಚ್ಚಿನ ಸಮಾಜವಾದಿ ದೇಶಗಳೊಡನೆ ಸಹ ರಾಜತಾಂತ್ರಿಕ ಸಂಬಂಧ ಕಡಿದು ಕೊಂಡಿತ್ತು. ಸಂಪೂರ್ಣ ಅಂತರ್ಮುಖಿ ದೇಶವಾಗಿತ್ತು. ಇತ್ತೀಚೆಗೆ ಅದು ಈ ಅಂತರ್ಮುಖಿ ನೀತಿಯನ್ನು ಬದಲಿಸಿದ್ದು ಇತರ ದೇಶಗಳೊಡನೆ (ಮುಖ್ಯವಾಗಿ ಸಮಾಜವಾದಿ) ರಾಜಕೀಯ, ಆರ್ಥಿಕ, ವೈಜ್ಞಾನಿಕ ತಾಂತ್ರಿಕ ಸಹಕಾರಕ್ಕೆ ಮುಂದೆ ಬಂದಿದೆ. ವಿದೇಶಿ ಆರ್ಥಿಕ ಸಹಕಾರ ಸಾಧ್ಯ ಮಾಡುವ ಕಾನೂನುಗಳನ್ನು ಇದು ಸದ್ಯಕ್ಕೆ ಜಾರಿ ಮಾಡಲಿದೆ.

ಅಲ್ಬೇನಿಯಾ ಜಗತ್ತಿನಲ್ಲೇ ತನ್ನನ್ನು 'ನಾಸ್ತಿಕ' ಎಂದು ಘೋಷಿಸಿ ಕೊಂಡಿರುವ ಏಕ ಮಾತ್ರ ದೇಶ. ಇಲ್ಲಿ ಎಲ್ಲಾ ಧರ್ಮಗಳು ನಿಷಿದ್ಧ.

K R N M/ BGW - 293 MAG (2) PRB DECR 319 - 78/79

ವಿಳಾಸ

ಕೋಮುವಾದಿಗಳೆಷ್ಟ ಗುಡುಗಿದರೂ......

ಒಂದನೇ ಪುಟದಿಂದ

ಇದರಲ್ಲಿ ಸೇರಿಕೊಂಡಿತು. ಜನತಾದಳದ ರಾಮಶಂಕರ್ ಕೌಶಿಕ್ ಸಂಚಾಲಕರಾಗಿರುವ ಈ ಸಮಿತಿಯ ಕಾರ್ಯದರ್ಶಿಗಳು ಸಿ.ಪಿ.ಐ. (ಎಂ) ನ ರಾಮ್ ಸುಮೇರ್ ಯಾದವ್ ಮತ್ತು ಸಿ.ಪಿ.ಐ.ನ ಜೆ.ಎನ್.ತ್ರಿಪಾಠಿ. ಕೋಮುವಾದದ ವಿರುದ್ಧ 50 ಜಿಲ್ಲಾ ಮಟ್ಟದ, ಆರು ಪ್ರಾದೇಶಿಕ ಮಟ್ಟದ ರ‍್ಯಾಲಿಗಳನ್ನು ಸಂಘಟಿಸಲು ಈ ಸಮಿತಿ ನಿರ್ಧರಿಸಿತ್ತು. ಅಕ್ಟೋಬರ್ 12 ರಂದು ರಾಜಧಾನಿ ಲಕ್ನೌನಲ್ಲಿ ಕನಿಷ್ಠ 10 ಲಕ್ಷ ಜನರು ಭಾಗವಹಿಸಲಿರುವ ರಾಜ್ಯಮಟ್ಟದ ರ‍್ಯಾಲಿಯೊಂದಿಗೆ ಈ ರಾಜ್ಯವ್ಯಾಪಿ ಪ್ರಕ್ಷೋಭೆ ತಾರಕಕ್ಕೇರಲಿದೆ.

ಈ ಯೋಜನೆಯ ಪ್ರಕಾರ ಈಗಾಗಲೇ ಆರು ಜಿಲ್ಲಾ ಮಟ್ಟದ ರ‍್ಯಾಲಿಗಳು, ಒಂದು ಪ್ರಾದೇಶಿಕ ರ‍್ಯಾಲಿ ನಡೆದು ಜನರ ಅಭೂತಪೂರ್ವ ಬೆಂಬಲ ಗಳಿಸಿವೆ. ವಿವಾದಗ್ರಸ್ತ ಮಂದಿರ ಇರುವ ಫೈಜಾಬಾದ್ ಜಿಲ್ಲೆಯ ತಾರಾಗ್ರಾಮ್‌ನಲ್ಲಿ ಆಗಸ್ಟ್ 10 ರಂದು ಮೊದಲ ರ‍್ಯಾಲಿ ನಡೆಯಿತು. ಒಂದು ಲಕ್ಷಕ್ಕೂ ಹೆಚ್ಚು ಜನ ಇದರಲ್ಲಿ ಭಾಗವಹಿಸಿದ್ದಾರೆ. ಕಾನಪುರ ದೇಹಾತ್ ಜಿಲ್ಲೆಯ ಅಕ್ಬರಪುರದಲ್ಲಿ ನಡೆದ ಎರಡನೇ ರ‍್ಯಾಲಿಯಲ್ಲಿ 2.5 ಲಕ್ಷ ಜನ ಭಾಗವಹಿಸಿದರು. ಮೂರನೇ ರ‍್ಯಾಲಿ ಬಾರಾಬಂಕಿ ಜಿಲ್ಲೆಯ ಬುಧವಾಲ್‌ನಲ್ಲಿ ನಡೆಯಿತು. 1.5 ಲಕ್ಷ ಜನ ಭಾಗವಹಿಸಿದ್ದರು. ಸೀತಾಪುರದಲ್ಲಿ ನಡೆದ ನಾಲ್ಕನೇ ರ‍್ಯಾಲಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದಾರೆ. ಆರ್.ಎಸ್.ಎಸ್. - ವಿ.ಹೆಚ್.ಪಿ. - ಬಿ.ಜೆ.ಪಿ ಕೂಟ ವಿವಾದಗ್ರಸ್ತಗೊಳಿಸಬೇಕೆಂದಿರುವ ಇನ್ನೊಂದು ಸ್ಥಾನ ಮಥುರಾದಲ್ಲಿ ಸಪ್ಟಂಬರ್ 7 ರಂದು ಮೊದಲ ಪ್ರಾದೇಶಿಕ ರ‍್ಯಾಲಿ ನಡೆಯಿತು. ಕೋಮುವಾದಿ ಕೂಟ ಈ ರ‍್ಯಾಲಿ ನಡೆಸಲು ಬಿಡುವುದಿಲ್ಲ ಎಂದು ಸಾರಿತು. ಜಿಲ್ಲಾ ಆಡಳಿತ ಕೂಡಾ ಇಂತಹ ರ‍್ಯಾಲಿ ನಡೆಸಲು ಅವಕಾಶ ನೀಡಲು ಹಿಂದೇಟು ಹಾಕಿತು. ಬೇರೊಂದು ಗ್ರಾಮದಲ್ಲಿ ನಡೆಸಿ ಎಂದು ಮುಖ್ಯಮಂತ್ರಿಗಳನ್ನು ಕೇಳಿಕೊಂಡಿತು. ಅವರು ಒಪ್ಪಲಿಲ್ಲ. ರ‍್ಯಾಲಿ ನಡೆಯಬೇಕಾದ ಹಿಂದಿನ ದಿನ, ಕೂಡಾ ಸತತ ಮಳೆಯ ನೆಪವೊಡ್ಡಿ ರ‍್ಯಾಲಿ ರದ್ದುಗೊಳಿಸಲು ಕೇಳಿಕೊಂಡಿತು.

> ಸಪ್ಟೆಂಬರ್ 7 ರಂದು ಮಥುರೆಯಲ್ಲಿ ಕೋಮುವಾದ ವಿರೋಧಿ ರ‍್ಯಾಲಿ ನಡೆದರೆ ಮಹಾಭಾರತ ಸೃಷ್ಟಿಸುವುದಾಗಿ ಬೆದರಿಸಿದ ಕೋಮುವಾದಿಗಳು ಆ ದಿನ ಮಾತ್ರ ಒಂದು ಲಕ್ಷಕ್ಕೂ ಹೆಚ್ಚು ಜನ ಸೇರಿದ್ದನ್ನು ಕಂಡು ತಮ್ಮ ಮನೆಗಳಿಂದ ಹೊರಬರಲೇ ಇಲ್ಲ.

ಆದರೆ ಸಪ್ಟಂಬರ್ 7 ರಂದು ರ‍್ಯಾಲಿ ನಡೆದೇ ನಡೆಯಿತು. ಒಂದು ಲಕ್ಷಕ್ಕೂ ಹೆಚ್ಚು ಜನ ಸೇರಿದರು - ರ‍್ಯಾಲಿಯ ವಿಶಾಲ ಸ್ಥಳ ತುಂಬಾ ಚಿಕ್ಕದೆನಿಸುವಷ್ಟು ಜನ. 5 ಗಂಟೆಗಳ ಕಾಲ ನಿಂತು ಈ ಜನ ಮುಖ್ಯಮಂತ್ರಿ ಮುಲಾಯಮ್‌ಸಿಂಗ್ ಯಾದವ್, ಸಿ.ಪಿ.ಐ. ಪ್ರಧಾನಕಾರ್ಯದರ್ಶಿ ಇಂದ್ರಜಿತ್ ಗುಪ್ತ, ಫಾರ್ವಡ್ ಬ್ಲಾಕ್‌ನ ಚಿತ್ತ ಬಸು, ಸಿ.ಪಿ.ಐ. (ಎಂ)ನ ರಾಮ್‌ಸುಮೇರ್ ಯಾದವ್ ಹಾಗೂ ಸಿ.ಪಿ.ಐ.ನ ಜೆ.ಎನ್. ತ್ರಿಪಾಠಿಯವರ ಮಾತುಗಳನ್ನು ಆಲಿಸಿದರು. ರ‍್ಯಾಲಿಯಂದು ಮಹಾಭಾರತ ಸೃಷ್ಟಿಸುತ್ತೇವೆಂದು ಕೊಚ್ಚಿಕೊಂಡ ಕೋಮುವಾದಿಗಳು ಮನೆ ಬಿಟ್ಟು ಕೂಡಾ ಹೊರಬರಲಿಲ್ಲ.

ಇದರ ನಂತರ ಸೆಪ್ಟಂಬರ್ 8 ರಂದು ಮೈನ್‌ಪೂರಿ ಮತ್ತು ಉನ್ನಾವ್‌ನಲ್ಲಿ ಜಿಲ್ಲಾ ರ‍್ಯಾಲಿಗಳು ನಡೆದಿವೆ. ಈ ಎಲ್ಲಾ ರ‍್ಯಾಲಿಗಳಲ್ಲಿ ಒಟ್ಟು 15 ಲಕ್ಷ ಜನರು ಈಗಾಗಲೇ ಭಾಗವಹಿಸಿದ್ದಾರೆ. ಅಕ್ಟೋಬರ್ 12 ರ ರಾಜ್ಯ ಮಟ್ಟದ ರ‍್ಯಾಲಿಯ ವೇಳೆಗೆ ಒಟ್ಟು ಒಂದು ಕೋಟಿಗೂ ಹೆಚ್ಚುಮಂದಿ ಈ ರಾಜ್ಯವ್ಯಾಪಿ ಪ್ರಕ್ಷೋಭೆಯಲ್ಲಿ ಭಾಗವಹಿಸುವ ಅಂದಾಜು ಇದೆ. ರಾಜ್ಯ ಮಟ್ಟದ ರ‍್ಯಾಲಿಯನ್ನುದ್ದೇಶಿಸಿ ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಮ್ ಸಿಂಗ್ ಯಾದವ್, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಹಾಗೂ ಸಿ.ಪಿ.ಐ. (ಎಂ) ಪೊಲಿಟ್‌ಬ್ಯುರೋ ಸದಸ್ಯ ಹರಿಕಿಶನ್‌ಸಿಂಗ್ ಸುರ್ಜಿತ್ ಮಾತನಾಡಲಿದ್ದಾರೆ.

ಇದು ಈಗಾಗಲೇ ಸ್ವತಂತ್ರ ಭಾರತದ ಅತ್ಯಂತ ದೊಡ್ಡ ಕೋಮುವಾದ -ವಿರೋಧಿ ಪ್ರಕ್ಷೋಭೆಯಾಗಿಬಿಟ್ಟಿದೆ. ಸಹಜವಾಗಿಯೇ ಕೋಮುವಾದಿಗಳು ಭಯಭೀತರಾಗಿದ್ದಾರೆ. ರಾಜ್ಯದ ಹಲವೆಡೆ ಹಿಂಸಾಚಾರಕ್ಕಿಳಿದಿದ್ದಾರೆ. ಹೊರಗಡೆ ಇಂದೋರ್ ಮತ್ತು ಹೈದರಾಬಾದ್‌ನಲ್ಲಿ ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್ ಮೇಲೆ ಹಲ್ಲೆ ನಡೆಸಿದ್ದಾರೆ. ಕಾಂಗ್ರೆಗಳೂ ಜನರ ಅನಿರೀಕ್ಷಿತ ಬೆಂಬಲ ಕಂಡು ಮೂಕವಿಸ್ಮಿತರಾಗಿದ್ದಾರೆ. ಜನತಾದೊಳಗಿನ ಕೋಮುವಾದಿ ವ್ಯಕ್ತಿಗಳೂ ಕೂಡಾ.

ಸ್ವಾತಂತ್ರಕ್ಕಾಗಿ ಹೋರಾಡಿದ ಒಂದು ಶತಮಾನದ ಅನುಭವ, ತ್ಯಾಗಗಳು ಜನರಿಗೆ ಎರಡು ಪಾಠಗಳನ್ನು ಕಲಿಸಿದೆ -ಒಂದು, ಧರ್ಮಗಳನ್ನು ಮೀರಿದ ಐಕ್ಯತೆಯಿಂದ ಮಾತ್ರವೇ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಬಗ್ಗುಬಡಿದು ದೇಶದ ರಾಜಕೀಯ ಉದ್ಧಾರ ಸಾಧ್ಯವಾಯಿತು ಎಂಬುದು. ಎರಡನೆಯದಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಒಡೆದಾಳುವ ನೀತಿ ಉಂಟು ಮಾಡಿದ ಕೋಮು ವಿಭಜನೆಯ ಕಹಿ ಫಲ. ಇವೆರಡರಿಂದಲೂ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದು ಬಹುಸಂಖ್ಯಾತರ ಪವಿತ್ರ ಕರ್ತವ್ಯ ಎಂಬ ಪಾಠ ಅವರು ಕಲಿತಿದ್ದಾರೆ.

ನಾವು ತ್ವರಿತವಾಗಿ ಬದಲಾಗುತ್ತಿರುವ ವಿಶ್ವದಲ್ಲಿ ಬದುಕಿದ್ದೇವೆ. ವಿಜ್ಞಾನ - ತಂತ್ರಜ್ಞಾನದ ಪ್ರತಿಯೊಂದು ಮುನ್ನೆಗೆತವೂ ವಿಶ್ವವನ್ನು ಚಿಕ್ಕದಾಗಿಸುತ್ತಿದೆ. ದೇಶಗಳು, ಸಮಾಜಗಳು ಪರಿಸ್ಪರ ನಿಕಟ ಬರುತ್ತಿವೆ. ಪರಸ್ಪರ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿವೆ. ಆದ್ದರಿಂದ ಯಾವುದೇ ಕಾರಣಕ್ಕೆ ವಿಭಜನೆಯೆಂಬುದು ಇಂತಹ ಜಗತ್ತಿನೊಂದಿಗೆ ಸರಿಹೊಂದಲಾರದ ಸಂಗತಿ. ಹೆಚ್ಚೆಚ್ಚು ಸಮಗ್ರತೆಯೇ ಇಂದಿನ ಜಗತ್ತಿಗೆ ಹೊಂದಿಕೊಳ್ಳುವ ಸಂಗತಿ.

ಬಿ.ಜೆ.ಪಿ. ಎಷ್ಟೇ ಗುಡುಗಲಿ. ಅವರ ಮತಾಂಧ ಹಿಂಬಾಲಕ ಪಡೆಗಳು ಎಷ್ಟೇ ಅರಚಿಕೊಳ್ಳಲಿ. ಜಾತ್ಯತೀತ ಭಾರತ ಮಾತ್ರ ಒಂದಾಗಿ ನಿಲ್ಲುತ್ತದೆ ಎಂಬುದು ನಮ್ಮ ತರ್ಕಬದ್ಧ ಆಶಾಭಾವನೆ. ಕೋಮುವಾದಿ ಕುರುಡುತನ ಸಾಗದು. ಉತ್ತರಪ್ರದೇಶದ ಚಳುವಳಿ ಇದಕ್ಕೆ ಸಾಕ್ಷಿ.

> ಅಲ್ಪಸಂಖ್ಯಾತರ ರಕ್ಷಣೆ ಬಹುಸಂಖ್ಯಾತ ಪವಿತ್ರ ಕರ್ತವ್ಯ - ಇದು ನ ದೇಶದ ಜನಗಳ ಒಂ ತಮಾನದ ಸಾಮ್ರಾಜ್ಯಶಾಹಿ ವಿರೋಧಿ ಹೋ ಟ ಕಲಿಸಿಯುವ ಪಾಠ.

ಈ ವಾರ

★ ಪಡಿತರ ಚೀಟಿ ಇಲ್ಲದವರಿಗೆ ಅದನ್ನು ಒದಗಿಸಬೇಕಾದ್ದು ನ್ಯಾಯ ಮತ್ತು ಸರ್ಕಾರದ ಕರ್ತವ್ಯ ಕೂಡಾ. ಆದರೆ ಅದಕ್ಕಾಗಿ ಮತ್ತೊಬ್ಬನ ಚೀಟಿಯನ್ನು ಕಸಿದು ಕೊಡಬೇಕಾದಂಥ ಸ್ಥಿತಿ ಇದೆ ಎನ್ನುವುದಾದರೆ ಅದು ಸರ್ಕಾರದ ಆಡಳಿತಾತ್ಮಕ ವೈಫಲ್ಯವನ್ನು ಮಾತ್ರ ತೋರುತ್ತದೆ.

-ಪ್ರಜಾವಾಣಿ ಸೆ 15'

★ ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳಿಗೆ ಕುವೈತ್‌ನಲ್ಲಿ ಒಂದು ಪ್ರಜಾಪ್ರಭುತ್ವವಲ್ಲದ ವ್ಯವಸ್ಥೆಯನ್ನು ಮತ್ತೆ ಸ್ಥಾಪಿಸುವುದು ಸಾಧ್ಯವಾಗುವುದಿಲ್ಲ.

-ಇಂಗ್ಲೆಂಡ್‌ನ ಅರಬ್‌ಕೊಲ್ಲಿ ಅಧ್ಯಯನ ಕೇಂದ್ರದ ನಿರ್ದೇಶಕ ಜೈನ್ ಪ್ರಿದಾಂ.

★ ಹರಿಜನ ಗಿರಿಜನರಿಗೆ ಭೂಮಿಯ ಪರಭಾರೆ ತಡೆಯುವ ತೀವ್ರ ಕಾನೂನುಗಳನ್ನು ಉಳುವವನೇ ಹೊಲದೊಡೆಯ ಎಂಬ ನೀತಿಯನ್ನು ಜ್ಯಾರಿಗೊಳಿಸಲು ಸೂಕ್ತ ಶಾಸನಗಳನ್ನು ರೂಪಿಸುವುದು. ಮೀಸಲಾತಿಯ ಬಗ್ಗೆ ಒಂದು ಸಮಗ್ರ ಶಾಸನ, ಗಿರಿಜನ ಉಪಯೋಜನೆಗಳಲ್ಲಿ ಶೋಷಣೆ ಅಂತ್ಯಗೊಳಿಸಲು ಆದ್ಯತೆ ನೀಡುವುದು, ಎಲ್ಲಾ ರಂಗಗಳಲ್ಲಿ ಹರಿಜನ-ಗಿರಿಜನರಿಗೆ ಸಮಾನತೆಯ ಸ್ಥಾನಮಾನ ಕುರಿತು ಸಮಗ್ರ ಯೋಜನೆಯ ತಯಾರಿ ಇತ್ಯಾದಿ 34 ಶಿಫಾರಸುಗಳ ಬಗ್ಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯಸರ್ಕಾರಗಳು ಹಾಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹರಿಜನ-ಗಿರಿಜನ ಆಯೋಗದ 29 ನೇ ವರದಿ ದೂಷಿಸಿದೆ.

-ಟೈಂಸ್ ಸುದ್ದಿ ಸೆ-16.

★ ಪಡಿತರ ಚೀಟಿಗಳಿಗೆ ಆದಾಯ ಮಿತಿ ಹಾಕಬೇಕು ಎಂಬುದು ಆಹಾರ ಸಚಿವರ ಆಲೋಚನೆ ಆಗಿರಬಹುದು. ಸಚಿವರು ಪತ್ರಿಕೆಗಳಿಗೆ ಈ ಕುರಿತು ತಿಳಿಸಿದ ವಿಚಾರ ಶನಿವಾರ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಆದರೆ ಸರ್ಕಾರ ಅಂಥ ಯಾವ ನಿರ್ಧಾರವನ್ನೂ ತೆಗೆದುಕೊಂಡಿಲ್ಲ

-ವೀರೇಂದ್ರಪಾಟೀಲ್, ಸೆ. 17'

★ ಸಗಟು ಬೆಲೆ ಸೂಚ್ಯಂಕ ಸೆಪ್ಟೆಂಬರ್ 1 ರ ವೇಳೆ ಮತ್ತೊಂದು ಶಿಖರ ತಲುಪಿದೆ.

-ಯು.ಎನ್.ಐ. ಸೆ. 18'

★ ಸಾರ್ವಜನಿಕ ಉದ್ದಿಮೆಗಳ ನಿವ್ವಳಲಾಭ 1989-90 ರಲ್ಲಿ 3500 ಕೋಟಿ ರೂ.ಗೇರಿದೆ. ಹಿಂದಿನ ವರ್ಷ ಇದು 2981ಕೋಟಿ ರೂ.ಇತ್ತು. 82 ಉದ್ದಿಮೆಗಳ ನಿವ್ವಳ ನಷ್ಟ 1874 ಕೋಟಿ ರೂ. ಇದು ಕಳೆದ ವರ್ಷಕ್ಕಿಂತ 194ಕೋಟಿ ರೂ. ಕಡಿಮೆ.

-ಪತ್ರಿಕಾ ಸುದ್ದಿ, ಸೆ. 19'

★ ವಾಶಿಂಗ್ಟನ್ ಸೌದಿ ಅರೇಬಿಯಾದೊಂದಿಗೆ ಮಾಡಿಕೊಂಡಿರುವ ಇತಿಹಾಸದಲ್ಲೇ ಅತೀ ದೊಡ್ಡದಾದ 20 ಬಿಲಿಯನ್ ಡಾಲರುಗಳ ಶಸ್ತ್ರಾಸ್ತ್ರ ಒಪ್ಪಂದ ಅಮೆರಿಕನ್ ಮಿಲಿಟರಿ ಕಂಟ್ರಾಕ್ಟರುಗಳಿಗೊಂದು ಸುಗ್ಗಿ..... ಆದರೆ ಇದು ಬುಶ್‌ರವರ ಬಹಳ ಆಪಾಯಕಾರಿಯಾದ ಹೆಜ್ಜೆ.

-ಟೈಂಸ್ ಆಫ್ ಇಂಡಿಯಾ, ಸೆ-19'

'ರಥಯಾತ್ರೆ' ಉದ್ರೇಕಕಾರಿಃ ಪ್ರತಿಷ್ಠಿತ ನಾಗರಿಕರ ಅಭಿಪ್ರಾಯ

ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಸಾರ್ವಜನಿಕ ಪ್ರಚಾರಗಳನ್ನು ಸಂಘಟಿಸುವ ಅಧಿಕಾರವಿದೆ. ಆದರೆ ಒಂದು ಪ್ರಜಾಪ್ರಭುತ್ವ ಸಮಾಜದಲ್ಲಿ ವಿವಾದಗಳನ್ನು ಪರಿಹರಿಸುವ ಏಕೈಕ ತರ್ಕಬದ್ಧ ವಿಧಾನವೆಂದರೆ ಪರಸ್ಪರ ಚರ್ಚೆ, ಮಾತುಕತೆ. ಆದರೆ ರಥಯಾತ್ರೆಯ ಬಿ.ಜೆ.ಪಿ. ನಿರ್ಧಾರ ಪ್ರಜಾಪ್ರಭುತ್ವ ವಿಧಾನವನ್ನು, ಕಾನೂನು ಪರಕಾರ ಆಡಳಿತದ ನಿಯಮಗಳನ್ನು ತಿರಸ್ಕರಿಸುವ ಕ್ರಮ ಎಂದು ವಿವಿಧ ರಂಗಗಳ 15 ಪ್ರಮುಖ ನಾಗರಿಕರು ಒಂದು ಹೇಳಿಕೆ ನೀಡಿ ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ ಅದ್ವಾಣಿಯವರು ದೇಶದಲ್ಲಿ ಕೋಮುಗ್ರಸ್ತಗೊಳಿಸುವ ಪ್ರಯತ್ನಗಳನ್ನು ವಿರೋಧಿಸಬೇಕೆಂದೂ ಎಲ್ಲಾ ಜಾತ್ಯಾತೀತ ವ್ಯಕ್ತಿಗಳಿಗೆ, ಗುಂಪುಗಳಿಗೆ ಈ ಪ್ರತಿಷ್ಠಿತ ನಾಗರಿಕರು ಕರೆ ನೀಡಿದ್ದಾರೆ.

ಹೇಳಿಕೆಗೆ ಸಹಿ ಹಾಕಿದ ಪ್ರತಿಷ್ಠಿತರೆಂದರೆ ಇತಿಹಾಸಕಾರರಾದ ಡಾ.ಎಸ್. ಗೋಪಾಲ್, ಡಾ. ರೋಮಿಲಾ ಥಾಪರ್, ಡಾ.ಪಿ.ಸಿ.ಜೋಷಿ, ಪತ್ರಕರ್ತರಾದ ದಿಲೀಪ್ ಪಡಗಾಂವ್‌ಕರ್, ಶ್ರೀಎನ್.ರಾಮ್, ಡಾ. ಎಂ.ಎಸ್.ಆಗ್ವಾನಿ, ಶ್ರೀ. ಶಿಶ್ ಬಹಾನಿ, ಅರ್ಥಿಕಜ್ಞ ಡಾ.ಅಶೋಕ್ ಮಿತ್ರಾ, ಶ್ರೀ ಪ್ರಫುಲ್ ಬಿದ್ವಾಯಿ, ಶ್ರೀ. ಸುಮಿತ್ ಸರ್ಕಾರ್, ಕಲಾಕಾರರಾದ ಶ್ರೀ. ವಿವಿಯನ್ ಸುಂದರಂ, ಶ್ರೀ ರೋಮಿ ಖೋಸ್ಲಾ, ಶ್ರೀ ಎಂ.ಕೆ. ರೈನಾ, ಶ್ರೀ ಕೆ.ಎನ್. ಪಣಿಕ್ಕರ್ ಶ್ರೀ ಎಸ್.ಪಿ.ಸಿಂಗ್.

ಯುವಜನರ ಕಾಲ್ನಡಿಗೆ ಜಾಥಾ

ಗುಲ್ಬರ್ಗಾದ ಮಹಾಗಾಂವಕ್ರಾಸ ಹಾಗೂ ಚಂದ್ರನಗರ ಘಟಕದ ಡಿ.ವೈ.ಎಫ್.ಐ. ಸಂಗಾತಿಗಳು ಮಹಾಗಾಂವ ಸರ್ಕಲ್‌ನ 18 ಹಳ್ಳಿಗಳಿಗೆ ಸಂಘಟನೆಯ ಬಗ್ಗೆ ಜನಸಾಮಾನ್ಯರಿಗೆ ತಿಳಿಸಲು ಹಾಗೂ ಭಾಗಿಯಾಗುವಂತೆ ಮಾಡಲು 4.9.90 ರಿಂದ 9.9.90 ರವರೆಗೆ ಕಾಲ್ನಡಿಗೆ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು ಅದರ ಅನುಭವ ಇಲ್ಲಿದೆ.

ಮಹಾಗಾಂವ ಸರ್ಕಲ್‌ನ 18 ಹಳ್ಳಿಗಳಿಗೆ ತಮ್ಮ ಯುವಜನ ಸಂಘಟನೆಯ ಬಗ್ಗೆ ಜನ ಸಾಮಾನ್ಯರಿಗೆ ತಿಳಿಸಲು ಹಾಗೂ ಸಂಘಟನೆ ಕಟ್ಟುವಲ್ಲಿ ಅವರನ್ನು ಭಾಗಿಯಾಗುವಂತೆ ಮಾಡಲು ಹಾಗೂ ಹಳ್ಳಿಯಲ್ಲಿರುವ ಯುವ ಶಕ್ತಿ ಹೊರಗೆ ಬಂದು ಸಂಘಟಿತರಾಗಿ ಹೋರಾಡಲು ಹಾಗೂ ಸರಕಾರದ ವಿಕೇಂದ್ರೀಕರಣ ನೀತಿಯಿಂದ ಮಂಡಳ ಪಂಚಾಯತಿ ರೀತಿಯಲ್ಲಿ ಗ್ರಾಮಗಳ ಅಭಿವೃದ್ಧಿಯ ಹೊಣೆ ಹೊತ್ತು ಜನರನ್ನು ಮೋಸಗೊಳಿಸಿ ಹಳ್ಳಿಯಲ್ಲಿ ತಮ್ಮದೇ ರಾಜಕೀಯ ನಡೆಸುತ್ತಿರುವ ಪುಢಾರಿಗಳಿಗೆ ಹಿಡಿದು ಕೇಳುವಂತೆ ಯುವಕರನ್ನು ಪ್ರೇರೆಪಿಸಲು ಜಾಥಾ ಹಮ್ಮಿ ಕೊಂಡೆವು.

ಕಾರ್ಯಕ್ರಮ ಹಾಕಿ ಕೊಂಡದ್ದೇನೋ ಆಯಿತು, ಆದರೆ ಅದನ್ನು ಕಾರ್ಯಗತಗೊಳಿಸಲು ನಮಗೆ ಮಾನಸಿಕವಾಗಿ ಭಯವಾಗತೊಡಗಿತು. ಕಾರಣ ಇದಕ್ಕಿಂತ ಕೆಲವು ದಿನಗಳ ಮುಂಚೆ ನಮ್ಮ ಗ್ರಾಮದಲ್ಲಿ ನಮ್ಮ ಒಬ್ಬ ಸಂಗಾತಿಯನ್ನು (ವೀರಭದ್ರ ಕಲಬುರ್ಗಿ - ಲಾದ ಮುಗಳಿ ಘಟಕದ ಕಾರ್ಯದರ್ಶಿ) ಒಬ್ಬ ರೌಡಿ ವಿನಃಕಾರಣ ಹೊಡೆದಿದ್ದರು. ಹಾಗೂ ಎಲ್ಲಾ ಕಡೆಯಂತೆ ನಾವು ಜಾಥಾ ಹೋಗುವ ಹಳ್ಳಿಗಳಲ್ಲಿಯು ಅನೇಕ ರಾಜಕೀಯ ಪಕ್ಷಗಳು ತಮ್ಮತಮ್ಮಲ್ಲೆ ಒಳಜಗಳ ನಡೆಸುತ್ತಿವೆ. ಜೊತೆಗೆ ಅನೇಕ ಜಾತಿ ಸಂಘಟನೆಗಳು ಹಳ್ಳಿಯ ಮುಗ್ಧ ಜನತೆಯಲ್ಲಿ ಜಾತಿ ಮನೋಭಾವನ್ನು ಕೆರಳಿಸುವ ಮೂಲಕ ಮತ್ತೊಂದು ಜಾತಿಯನ್ನು ಕಂಡರೆ ಆಗದಂತೆ ಮಾಡಿರುವುದು.

ಇಂಥ ಒಂದು ಸನ್ನಿವೇಶದಲ್ಲಿ ಈ ಎರಡು ಘಟಕದ ಕೇವಲ ಹತ್ತು ಜನ ಸಂಗಾತಿಗಳು ಜೊತೆಗೆ ಜಿಲ್ಲಾ ಸಂಚಾಲಕ ಹಣಮಂತ ಚಾವ್ಹಾನ ಜೊತೆಗೆ ನಾನು ಸೇರಿಕೊಂಡು ದಿನಾಂಕ 4-9-90 ರಂದು ನಾಗೂರ ಗ್ರಾಮದಲ್ಲಿ ಪ್ರಾರಂಭಿಸಲು ನಿರ್ಧರಿಸಿ ಅಲ್ಲಿ ಉದ್ಘಾಟನಾ ಸಮಾರಂಭವನ್ನು ಇಟ್ಟು ಕೊಂಡೆವು ಈ ಸಮಾರಂಭಕ್ಕೆ ಅತಿಥಿಗಳಾಗಿ ಗುಲಬರ್ಗಾ ಸಮುದಾಯದ ಬಾಪೂಗೌಡ ಶಾದ್ಲಗೇರಿ ಹಾಗೂ ರಘುಪತಿ ಬಂದಿದ್ದರು. ಈ ಉದ್ಘಾಟನಾ ಸಮಾರಂಭಕ್ಕೆ ಸುಮಾರು ನೂರು ಜನ ಗ್ರಾಮಸ್ಥರು ಭಾಗವಹಿಸುವುದರ ಮೂಲಕ ನಮ್ಮ ಜಾಥಾದ ಯಶಸ್ಸಿಗೆ ಮುಂದಾಗುವಂತೆ ಮಾಡಿದರು. ಮುಂದೆ ಅನೇಕ ಹಳ್ಳಿಗಳನ್ನು ಸುತ್ತುತ್ತ, ಜಾಥಾದ ಉದ್ದೇಶವನ್ನು ತಿಳಿಸುತ್ತ, ಘಟಕಗಳನ್ನು ರಚಿಸಲು ಹೇಳುತ್ತಾ ಅನೇಕ ಹೊಸ ಹೊಸ ಅನುಭವವನ್ನು ಪಡೆಯುತ್ತ ಮುನ್ನಡೆದೆವು. ಊಟ ಮಾಡಬೇಕೆಂದಾಗ ಮನೆ ಮನೆಗೆ ಹೋಗಿ ರೊಟ್ಟಿಯನ್ನು ಕೇಳಿದಾಗ ನಮ್ಮ ಮಹಿಳಾ ಸಂಗಾತಿಗಳು ಸಂತೋಷವಾಗಿ ತಂದು ಕೊಟ್ಟಾಗ ಅದನ್ನು ತಿನ್ನುತ್ತ ಯಾವ ಗ್ರಾಮದಲ್ಲಿ ರಾತ್ರಿಯಾಗುತ್ತದೋ ಅಲ್ಲೆ ಗುಡಿ ಮಸೀದಿಗಳಲ್ಲಿ ಮಲಗುತ್ತ. ಹೀಗೇ ಪ್ರತಿಯೊಂದು ಗ್ರಾಮಕ್ಕೂ ಬಹಿರಂಗ ಸಭೆಗಳನ್ನು ಮಾಡುತ್ತ ಮುನ್ನಡೆದವು. ಹೀಗೆ ಹಳ್ಳಿಯಿಂದ ಹಳ್ಳಿಗೆ ಹೊರಟಾಗ ಕಣ್ಣೂರಎಂಬ ಹಳ್ಳಿಯಿಂದ ಮಹಾಗಾಂವ ವಾಡಿ ಗಾಮಕ್ಕೆ ಬರುವಾಗ ದಾರಿಯಲ್ಲಿ ಬೆಣ್ಣೆ ತೊರೆ ತುಂಬಿ ಹರಿಯುತ್ತಿತ್ತು. ಆಗ ಸಂಗಾತಿಗಳು ಕ್ರಾಂತಿಗೀತೆಯನ್ನು ಹಾಡುತ್ತಾ ಟೊಂಕ ಮಟ್ಟದ ನೀರಲ್ಲಿ ಆಯಾಸವಿಲ್ಲದೇ ದಾಟಿದರು. ಕೊನೆಗೆ 8-9-90ರಂದು ಮುಕ್ತಾಯ ಸಮಾರಂಭಕ್ಕೆ ಬಂದು ತಲುಪಿದೆವು.

ಈ ಮುಕ್ತಾಯ ಸಮಾರಂಭವನ್ನು ಮಹಾಗಾಂವ ಗ್ರಾಮದಲ್ಲಿ ಮಾಡಬೇಕಾಯಿತು. ಆಗ ಪ್ರಸಿದ್ಧ ರಾಜಕಾರಣಿಗಳ ವಾರದ ಹಾಗೂ ಎಲ್ಲಾ ರಾಜಕೀಯ ಪಕ್ಷಗಳಿಂದ ಕೂಡಿದ ಗ್ರಾಮದಲ್ಲಿ ನಮ್ಮ ಈ ಸಮಾರಂಭ ಅಲ್ಲಿಯ ಜನತೆ ಸಹಕರಿಸುತ್ತಾರೆಯೋ ಇಲ್ಲವೋ ಎಂಬ ಅನುಮಾನ. ಈ ಮುಕ್ತಾಯ ಸಮಾರಂಭಕ್ಕೆ ಗುಲಬರ್ಗಾ ಜಿಲ್ಲಾ ಸಮುದಾಯದ ಅಧ್ಯಕ್ಷರಾದ ಪ್ರಭು ಖಾನಪೂರೆಯವರನ್ನು ಕರೆಸಿದೆವು. ಹಾಗೂ ಮಹಾಗಂವ ಗ್ರಾಮದವರೆ ಯಾದ ಜನತಾ ಪಕ್ಷದ ಮುಖಂಡರಾದ ಶಿಲೆಕಂಠ ತಡಕಲ್ ಅವರು ಅಧ್ಯಕ್ಷತೆ ವಹಿಸಲು ಕೇಳಿಕೊಂಡೆವು. ಸಂಜೆ 7 ಗಂಟೆಗೆ ಸಭೆ ಪ್ರಾರಂಭವಾದಾಗ ಜನ ಒಬ್ಬಬ್ಬರಾಗಿ ಸೇರ ತೊಡಗಿದರು. ಸುಮಾರು ಎರಡುನೂರು ಜನ ಸೇರಿ ಸಭೆಗೆ ಸಂಪೂರ್ಣ ಮೆರುಗು ತಂದು ಕೊಟ್ಟರು.

ಭಯದಿಂದ ಪ್ರಾರಂಭವಾದ ಈ ಜಾಥಾ ಒಳ್ಳೆಯ ಯಶಸ್ವಿಯಾಗಿ ಕೊನೆಗೊಂಡಿತು. ಜಾಥಾದಲ್ಲಿ ಭಾಗವಹಿಸಿದ ಸಂಗಾತಿಗಳಿಗೆ ಹಳ್ಳಿಯಲ್ಲಿ ಜನ ಸಂಘಟಿತರಾಗಲು ಬಯಸುತ್ತಾರೆ. ಆದರೆ ಸರಿಯಾದ ಮಾರ್ಗದರ್ಶನವಿಲ್ಲದೇ ಜಾತಿ, ಮತ,ಧರ್ಮದ ಭಾಷೆ ಮೇಲೆ ಸಂಘಟನೆ ಕಟ್ಟುತ್ತ ತಮ್ಮತಮ್ಮಲ್ಲೆ ಜಗಳವಾಡುತ್ತಿರುತ್ತಾರೆಂಬುದರ ಮನವರಿಕೆಯಾಯಿತು.

Printed and published by P.Ramachandra Rao' on behalf of Communist Party of India (Marxist) Karna a State Committee, 95A, 11 cross< Muneshwara Block, Palace Guttahalli, Bangalore 560003. Phone: 366489 Editor: P.Ramachandra Rao.